## ಅಧ್ಯಾಯ 14

# ಒಬ್ಬರನ್ನೊಬ್ಬರು ಸ್ವೀಕರಿಸಿಕೊಳ್ಳುವದು

ಸಮಾಧಾನ ಮತ್ತು ಸೌಹಾರ್ದತೆಗಳು ಆಹ್ಲಾದಕರವಾಗಿರುತ್ತವೆ. ಪ್ರತಿಯೊಬ್ಬರು ಸಹ ಪ್ರತಿಯೊಬ್ಬರೊಂದಿಗೆ ಏಕಾಭಿಪ್ರಾಯವುಳ್ಳವರಾಗಿದ್ದರೆ, ಒಂದು ವೇಳೆ ಎಲ್ಲರೂ ಒಟ್ಟಿಗೆ ಸಮಾಧಾನದಿಂದ ಜೀವಿಸಬಲ್ಲವರಾದರೆ ಮತ್ತು ಜೀವಿಸಿದರೆ ಎಷ್ಟೋ ಅದ್ಭುತಕರವಾಗಿರುತ್ತದೆ. ಹೇಗೂ, ಇದೊಂದು ಅವಾಸ್ತವಿಕವಾದ ಹಾರೈಕೆಯಾಗಿರುತ್ತದೆ. ಮಾನವ ಜೀವಿಗಳು ಎಲ್ಲೇ ಇದ್ದರೂ, ಭಿನ್ನಾಭಿಪ್ರಾಯಗಳು ಎದ್ದೇಳುವವು. ಅದು ಲೋಕದಲ್ಲಿ ಮಾತ್ರ ಸತ್ಯವಾಗಿಲ್ಲ; ಅದು ಸಭೆಯಲ್ಲಿಯೂ ಅಷ್ಟೇ ಸತ್ಯವಾದದ್ದು. ಪ್ರಶ್ನೆಯು "ನಾವು *ಒಂದು ವೇಳೆ* ಭಿನ್ನಾಭಿಪ್ರಾಯ ಹೊಂದಿದರೆ ಏನು ಮಾಡಬೇಕು?" ಎಂಬುದಲ್ಲ ಆದರೆ "ನಾವು ಭಿನ್ನಾಭಿಪ್ರಾಯ ಹೊಂದಿರು*ವಾಗ* ಏನು ಮಾಡಬೇಕು?" ಎಂದಾಗಿರುತ್ತದೆ. ನಮ್ಮಲ್ಲಿ ಅಭಿಪ್ರಾಯ ಭೇದಗಳಿರುವಾಗ ನಾವು ಏನು ಮಾಡತಕ್ಕದ್ದು?

ಪೌಲನು ಆ ವಿಷಯದ ಬಗ್ಗೆ ರೋಮಾ 14:1-15:13ರಲ್ಲಿ ಸವಿಸ್ತಾರವಾಗಿ ಚರ್ಚಿಸಿರುತ್ತಾನೆ. ರೋಮಾ 12:1ರಿಂದ ಮೊದಲ್ಗೊಂಡು, ಅಪೊಸ್ತಲನು ವ್ಯಾಪಕ ಶ್ರೇಣಿಯ ಚರ್ಚೆಯಾಂಶಗಳನ್ನು ಕುರಿತು ಮಾತಾಡಿದನು, ಸಹಜವಾಗಿ ಒಂದೊಂದನ್ನು ವಿವರಿಸುವದಕ್ಕೆ ಕೇಲವೇ ವಚನಗಳನ್ನು ತೆಗೆದುಕೊಂಡಿರುತ್ತಾನೆ. ಹೇಗೂ, ನಾವು ಒಮ್ಮತ ವ್ಯಕ್ತಪಡಿಸದ ಇತರ ಕ್ರೈಸ್ತರ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬ ಪ್ರಶ್ನೆಯನ್ನು ಚರ್ಚಿಸುವದಕ್ಕೆ ಆತನು ಒಂದಕ್ಕಿಂತಲೂ ಅಧಿಕ ಅಧ್ಯಾಯವನ್ನು—36 ವಚನಗಳನ್ನು—ತೆಗೆದುಕೊಂಡಿರುತ್ತಾನೆ.

ಈ ದೀರ್ಘವಾದ ಚರ್ಚೆಯ ಕಾರಣದಿಂದ ಕೆಲವು ವ್ಯಾಖ್ಯಾನಕಾರರು ಯೆಹೂದಿ ಕ್ರೈಸ್ತರು ಹಾಗೂ ಅನ್ಯಜನಾಂಗದ ಕ್ರೈಸ್ತರ ನಡುವೆ ಒಂದು ದೊಡ್ಡ ಸಮಸ್ಯೆಯಿತ್ತು[1] ಮತ್ತು ಪೌಲನು ರೋಮಾಪುರದವರಿಗೆ ಪತ್ರಿಕೆಯನ್ನು ಬರೆಯುವದಕ್ಕೆ ಇದೇ ಪ್ರಮುಖ ಕಾರಣವಾಗಿತ್ತು ಎಂಬ ನಿರ್ಣಯಕ್ಕೆ ಬಂದಿರುತ್ತಾರೆ.[2] ಪೌಲನಿಗೆ ಗೊತ್ತಿರುವವರು ರೋಮಾಪುರದಲ್ಲಿ ಅನೇಕರಿದ್ದರು (16:3-15), ಆದ್ದರಿಂದ ಆ ರೀತಿಯ ಕಾದಾಟವಿದ್ದಿದ್ದರೆ ಆತನಿಗೆ ಗೊತ್ತಿದ್ದಿರಬಹುದಿತ್ತು. ಹೇಗೂ, ಪೌಲನು ತಾನು ಮಾಡಿದ ಪ್ರಯಾಣಗಳ ವೇಳೆಯಲ್ಲಿ, ನಮ್ಮ ವಾಕ್ಯಭಾಗದೊಳಗೆ ಬಣ್ಣಿಸಲ್ಪಟ್ಟಿರುವಂತಹ ಉದ್ವಿಗ್ನತೆಯನ್ನು ಆತನು ಅನೇಕ ಸ್ಥಳಗಳಲ್ಲಿ ಎದುರ್ಗೊಂಡಿರುವ ಸಾಧ್ಯತೆಯು ಸಹ ಅಷ್ಟೇ ಇರುತ್ತದೆ. ಅದದರಿಂದ,

ಉದ್ಭವವಾಗಬಹುದಾಗಿದ್ದ ಅಂಥ ಸಮಸ್ಯೆಗಳನ್ನು ತಡೆಯುವದಕ್ಕಾಗಿ ಈ ಸಲಹಾ ಸೂಚನೆಗಳನ್ನು ಸೇರ್ಪಡೆಗೊಳಿಸುವಂತೆ ಆತನು ಪವಿತ್ರಾತ್ಮನಿಂದ ನಡಿಸಲ್ಪಟ್ಟಿದ್ದನು.

ನಾವು ವಾಕ್ಯಭಾಗದ ನಮ್ಮ ಅಧ್ಯಯನವನ್ನು ಆರಂಭಿಸುವ ಮುನ್ನ, ನಾವು ಎದುರುಗೊಳ್ಳಲಿರುವ ಕೆಲವೊಂದು ಸವಾಲುಗಳ ಬಗ್ಗೆ ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಮೊದಲ ಪ್ರಮುಖ ಸವಾಲು ಎಂದರೆ ಈ ಚರ್ಚೆಯನ್ನು ಮಾಡುವಂತೆ ಪೌಲನನ್ನು ಯಾವ ನಿಖರವಾದ ಪರಿಸ್ಥಿತಿಯು ಪ್ರಚೋದಿಸಿತು ಎಂಬದನ್ನು ನಾವು ಖಚಿತವಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ಪರಿಸ್ಥಿತಿಯು ಏನೆಂಬುದು ಪೌಲನಿಗೆ ಸ್ಪಷ್ಟವಾಗಿ ತಿಳಿದಿತ್ತು ಮತ್ತು ಸಂಭಾವ್ಯವಾಗಿ ರೋಮಾಪುರದಲ್ಲಿನ ಆತನ ವಾಚಕರಿಗೆ ಸಹ ಸ್ಪಷ್ಟವಾಗಿ ಗೊತ್ತಿತ್ತೆಂದು ತೋರುತ್ತದೆ, ಆದರೆ ನಮಗೆ ಅದು ಸ್ಪಷ್ಟವಾಗಿರುವದಿಲ್ಲ. ಅದರಲ್ಲಿ ಮಾಂಸ ಸೇವನೆ (14:2, 21), ವಿಶೇಷ ದಿನಗಳ ಆಚರಣೆ (14:5), ಮತ್ತು ಒಂದು ವಿಧದಲ್ಲಿ ದ್ರಾಕ್ಷಾರಸ ಸೇವನೆ (14:21) ಕುರಿತಾದ ಪ್ರಶ್ನೆಗಳು ಸೇರಿದ್ದವು—ಆದರೆ ಪೌಲನು ನಿರ್ದಿಷ್ಟವಾಗಿ ಏನನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದನೆಂಬುದರ ಬಗ್ಗೆ ಒಮ್ಮತದ ಕೊರತೆಯಿರುತ್ತದೆ. ಇದರೊಳಗೆ ಸೇರ್ಪಡೆಗೊಳ್ಳುವ ಇನ್ನೊಂದು ವಿಚಾರವೆಂದರೆ ಸಹೋದರರಲ್ಲಿ ಯಾರು "ದೃಢವಾದ" ನಂಬಿಕೆಯುಳ್ಳ ಸಹೋದರನು (15:1) ಮತ್ತು ಯಾರು ದೃಢವಿಲ್ಲದವನು ಎಂಬ ವಿಷಯದಲ್ಲಿನ ಭಿನ್ನಾಭಿಪ್ರಾಯ (14:1, 2; 15:1).

ಅನೇಕರು ಮನದಟ್ಟು ಮಾಡಿಕೊಂಡಿರುವದೇನೆಂದರೆ, ರೋಮಾ 14ರಲ್ಲಿನ ಎಲ್ಲಾ ಉದಾಹರಣೆಗಳಲ್ಲಿ, ಇನ್ನೂ ಹಳೆಯ ಒಡಂಬಡಿಕೆಯ ಧರ್ಮಶಾಸ್ತ್ರದ ಜಾಡುಗಳಿಗೇ ಅಂಟಿಕೊಂಡಿದ್ದ ಯೆಹೂದಿ ಕ್ರೈಸ್ತರೇ ಆ "ದೃಢವಿಲ್ಲದ" ಸಹೋದರರಾಗಿದ್ದರು ಎಂಬದೇ. ದಿನಗಳ ವಿಷಯದಲ್ಲಿ ನೋಡುವದಾದರೆ, ಅವರು ಈಗಲೂ ಯೆಹೂದಿ ಕ್ಯಾಲೆಂಡರನ್ನು ಅನುಸರಿಸುತ್ತಿದ್ದರು. ಮಾಂಸವನ್ನು ಸೇವಿಸುವ ವಿಷಯದಲ್ಲಿ, ರೋಮ್.ದಂತಹ ವಿಗ್ರಹಾರಾಧಕ ಸಮಾಜದ ಮಾರುಕಟ್ಟೆಯಲ್ಲಿ, ಅವರಿಗೆ ದೊರಕುತ್ತಿದ್ದ ಮಾಂಸವು kosher[3] (ಕೋಷರ್—ಯೆಹೂದ್ಯ ಧರ್ಮ ವಿಧಿಗನುಗುಣವಾಗಿರುವಂತದ್ದು) ಆಗಿತ್ತೋ ಎಂಬದನ್ನು ಖಚಿತ ಪಡಿಸಿಕೊಳ್ಳುವದು ಸಾಧ್ಯವಿರಲಿಲ್ಲ. ಯಾವದಕ್ಕೂ ಸುರಕ್ಷಿತೆಯಿರಲಿ ಎಂದು, ಅವರು ಸಸ್ಯಹಾರಿಗಳಾಗಿದ್ದರು.[4] ಈ ರೀತಿಯ ಪ್ರಕಾರವಾಗಿ ನೋಡಿದರೆ, "ದೃಡವಾದ" ಸಹೋದರರು ಅನ್ಯಜನಾಂಗದ ಕ್ರೈಸ್ತರಾಗಿದ್ದರು—ಜೊತೆಗೆ ಪೌಲನಂತಹ ಕೆಲವೇ ಕೆಲವು ಜ್ಞಾನಪ್ರಕಾಶ ಹೊಂದಿದ್ದ ಯೆಹೂದಿ ಕ್ರೈಸ್ತರು ಸೇರಿದ್ದರು.

ಈ ನಿಲುವು ಹೊಂದಿರುವವರು ವಾದಿಸುವದೇನೆಂದರೆ, ರೋಮಾ 14 ಮತ್ತು ಅದೇ ರೀತಿಯ ಚರ್ಚೆಯಿರುವ 1 ಕೊರಿಂಥ 8-10 ಅಧ್ಯಾಯಗಳ ನಡುವೆ ಸಂಬಂಧವಿರುವದೇ ಆದಲ್ಲಿ ಸ್ವಲ್ಪವೇ ಇರುತ್ತದೆ, ಅಥವಾ ಯಾವ ಸಂಬಂಧವು ಇರುವದಿಲ್ಲ, ಇದು ವಿಗ್ರಹಕ್ಕೆ ನೈವೇದ್ಯ ಮಾಡಿದ ಮಾಂಸ ಸೇವಿಸುವ ಕುರಿತಾಗಿರುತ್ತದೆ. ಎರಡು ವಾಕ್ಯಭಾಗಗಳ ನಡುವೆ ಹೋಲಿಕೆಗಳಿರುವದು ನಿಜವೆಂದು ಅವರು ಒಪ್ಪಿಕೊಂಡಾಗ್ಯೂ, ಪ್ರಾಮುಖ್ಯವಾದ ವ್ಯತ್ಯಾಸಗಳಿರುವದನ್ನು ಗಮನಕ್ಕೆ ತರುತ್ತಾರೆ.

ಈಗಷ್ಟೆ ಬಣ್ಣಿಸಿದ ದಾರಿಯು ಸರಿಯೆಂದು ತೋರಬಹುದು, ಆದರೆ ಪೌಲನು ತನ್ನ ಪತ್ರಿಕೆಯ ಈ ಹಂತದಲ್ಲಿ, ಯೆಹೂದ್ಯ ಕ್ರೈಸ್ತರನ್ನು "ದೃಢವಿಲ್ಲದವರು" ಎಂದು ಮತ್ತು ಅನ್ಯಜನಾಂಗದ ಕ್ರೈಸ್ತರನ್ನು "ದೃಢವಾದವರು" ಎಂದು ಹಣೆಪಟ್ಟಿ ಕಟ್ಟಿದನೆಂಬ ನಿರ್ಣಯಕ್ಕೆ

ಬರುವ ವಿಷಯದಲ್ಲಿ ನನಗೆ ಮುಜುಗರ ಅನ್ನಿಸುತ್ತದೆ. ಅಷ್ಟುಮಾತ್ರವಲ್ಲದೆ, 1 ಕೊರಿಂಥ 8-10 ರೊಂದಿಗಿನ ಸಂಭಾವ್ಯವಾದ ಸಂಬಂಧವನ್ನು ಅತಿ ಶೀಘ್ರದಲ್ಲಿ ತಳ್ಳಿಹಾಕಿದಂತಾಗುತ್ತದೆಂದು ನನಗೆ ತೋರುತ್ತದೆ. ಅಂತೂ, ಪೌಲನು ಕೊರಿಂಥದಿಂದ ಬರೆಯುತ್ತಿದ್ದಾನೆ, ಅಲ್ಲಿ ಆತನಿಗೆ ವಿಗ್ರಹಕ್ಕೆ ನೈವೇದ್ಯ ಮಾಡಿದ ಮಾಂಸವನ್ನು ಕ್ರೈಸ್ತರು ತಿನ್ನುವ ಕುರಿತಾಗಿ ಉದ್ಭವವಾಗುತ್ತಿದ್ದ ಸಮಸ್ಯೆಗಳು ನಿರಂತರವಾಗಿ ನೆನಪಿಗೆ ಬರುತ್ತಿದ್ದವು.

ಹಳೆಯ ಒಡಂಬಡಿಕೆಯ ಆಹಾರಪದ್ಧತಿಯ ಕಟ್ಟಳೆಗಳನ್ನು ಅನುಸರಿಸುವದಕ್ಕೆ ಸಮರ್ಪಿಸಿಕೊಂಡಿದ್ದ ಯೆಹೂದ್ಯರು ಕೋಷರ್ ಮಾಂಸಕ್ಕಾಗಿ ಅನ್ಯಜನಾಂಗದ ಮಾಂಸದ ಮಾರುಕಟ್ಟೆಯ ಮೇಲೆ ಅವಲಂಭಿತರಾಗಿರುತ್ತಿದ್ದಿಲ್ಲ. ಬದಲಾಗಿ, ಅವರು ಸ್ವಂತವಾಗಿ ಪ್ರಾಣಿಯನ್ನು ವಧಿಸಿ ಧರ್ಮಶಾಸ್ತ್ರದಲ್ಲಿನ ವಿಧಿವಿಧಾನಗಳು ಮತ್ತು ಅವರ ಸಂಪ್ರದಾಯಗಳ ಪ್ರಕಾರವಾಗಿ ಮಾಂಸವನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಆದುದರಿಂದ ಮಾಂಸವನ್ನು ತಿನ್ನುವದರಿಂದ ಹಿಂಜರಿದವರು ಅನ್ಯಜನಾಂಗದ ಕ್ರೈಸ್ತರೇ ಆಗಿರುವ ಸಾಧ್ಯತೆಯಿರುತ್ತದೆ, ಅವರು ಮಾರುಕಟ್ಟೆಯಲ್ಲಿ ಲಭ್ಯವಿರುತ್ತಿದ್ದ ಕೆಲವೊಂದು ಮಾಂಸವು ಮೊದಲು ವಿಗ್ರಹಕ್ಕೆ ನೈವೇದ್ಯ ಮಾಡಿದ ಮಾಂಸದ ಭಾಗವಾಗಿರುತ್ತಿತ್ತೆಂಬುದರ ಸೂಕ್ಷ್ಮ ಅರಿವು ಹೊಂದಿದವರಾಗಿದ್ದರು.

ಪೌಲನು ಉಲ್ಲೇಖಿಸಲ್ಪಟ್ಟ ಎಲ್ಲಾ ವಿಷಯಗಳಲ್ಲಿ ಒಂದು ಗುಂಪನ್ನು "ದೃಢವಾದವರು" ಎಂದೂ ಮತ್ತೊಂದು ಗುಂಪನ್ನು "ದೃಢವಿಲ್ಲದವರು" ಎಂದೂ ಹಣೆಪಟ್ಟಿ ಕಟ್ಟಿದನೆಂಬುದಕ್ಕೆ ಯಾವದೇ ಪುರಾವೆಯು ಇರುವದಿಲ್ಲ. ಆತನು ಉದ್ದೇಶಪೂರ್ವಕವಾಗಿಯೇ ಯೆಹೂದ್ಯ ಕ್ರೈಸ್ತರು "ದೃಢವಿಲ್ಲದಿರುವ" ಎಂದು ಚರ್ಚೆಯಾಂಶವನ್ನು (ವಿಶೇಷ ದಿನಗಳ ಆಚರಣೆ) ಮತ್ತು ಅನ್ಯಜನಾಂಗದ ಕ್ರೈಸ್ತರು "ದೃಢವಿಲ್ಲದಿರುವ" ಒಂದು ಚರ್ಚೆಯಾಂಶವನ್ನು (ಮಾಂಸ ಸೇವನೆ ಮಾಡದಿರುವದು) ಆರಿಸಿಕೊಂಡಿರಬಹುದಾಗಿದೆ. ಅಂಥ ದಾರಿಯನ್ನು ಅನುಸರಿಸುವದರಿಂದ ಅದು "ನಾವು ಆತ್ಮೀಕವಾಗಿ ನಿಮಗಿಂತಲೂ ದೃಢವಾದವರು" ಎಂಬ ಆಲೋಚನೆಗಳನ್ನು ನಿಷ್ಕ್ರಿಯಗೊಳಿಸುತ್ತದೆ. (ನಾವು ನಮ್ಮ ವಿಷಯದಲ್ಲಿ ಪ್ರಾಮಾಣಿಕರಾಗಿರುವದಾದರೆ, ನಾವು ಕೆಲ ವಿಷಯಗಳಲ್ಲಿ "ದೃಢವಾಗಿ" ಇದ್ದರೂ, ಇತರ ಕೆಲವು ವಿಷಯಗಳಲ್ಲಿ "ಬಲಹೀನ" ಆಗಿರುವ ಸಾಧ್ಯತೆಯಿರುತ್ತದೆ ಎಂಬುದನ್ನು ನಮ್ಮಲ್ಲಿ ಬಹುತೇಕರು ಒಪ್ಪಿಕೊಳ್ಳಲೇಬೇಕಾಗಿರುತ್ತದೆ.)

ಪೌಲನು ರೋಮಾ 14:1-15:13 ರಲ್ಲಿ ನಿಖರವಾಗಿ ಯಾವ ಪರಿಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದನೆಂಬ ವಿಚಾರದಲ್ಲಿ ನಾವು ಹೀಗೆಯೇ ಎಂದು ಮೊಂಡುವಾದ ಮಾಡುವದಕ್ಕಾಗುವದಿಲ್ಲ. Richard A. Batey ಹೀಗೆ ಹೇಳುತ್ತಾನೆ, "ಅದೃಷ್ಟಾವಶಾತ್, ಈ ವಿಭಾಗದಲ್ಲಿ ಪೌಲನ ಉಪದೇಶವನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳುವದಕ್ಕೆ ಆತನ ಮನಸ್ಸಿನಲ್ಲಿ ಯಾವ ಕ್ರೈಸ್ತರಿದ್ದರು ಎಂಬುದನ್ನು ನಿಖರವಾಗಿ ತಿಳಿದುಕೊಳ್ಳಬೇಕಾದ ಅಗತ್ಯತೆಯು ಬೀಳುವದಿಲ್ಲ."[5] ನಾವು ವಾಕ್ಯಭಾಗದ ಮೂಲಕ ಸಾಗಿದ ಹಾಗೆ, ನಾಣು ಸಾಧ್ಯತೆಗಳ ಬಗ್ಗೆ ಚರ್ಚಿಸಲಿದ್ದೇನೆ, ಆದರೆ ನಾವು ಅನಾವಶ್ಯಕವಾದ ಊಹೆಗಳನ್ನು ಆಧರಿಸಿ ನಿರ್ಣಯಗಳಿಗೆ ಬರದಂತೆ ಎಚ್ಚರ ವಹಿಸತಕ್ಕದ್ದು.

ಇನ್ನೊಂದು ಪ್ರಶ್ನೆಯು ಉದ್ಭವವಾಗುತ್ತದೆ: ಯಾವದಾದರೂ ಅನ್ವಯಿಕೆಗಳಿದ್ದರೆ, ಈ ದಿನಕ್ಕೆ ನಾವು ಅವುಗಳನ್ನು ಹೇಗೆ ಅನ್ವಯಿಸಿಕೊಳ್ಳಬಲ್ಲೆವು? ರೋಮಾ 14 ಮತ್ತು 15 ರಲ್ಲಿನ

ಇಕ್ಕಟ್ಟು ಏನೇ ಇದ್ದರೂ ಸರಿಯೇ, ಇಂದು ನಾವು ಎದುರಿಸುವ ಸಮಸ್ಯೆಗಳಿಗಿಂತ ಬೇರೆಯೇ ಆಗಿರುವಂತೆ ಕಾಣಿಸುವ ಮೊದಲ ಶತಮಾನದ ಸಮಸ್ಯೆಗಳ ಕುರಿತಾಗಿ ಪೌಲನು ಮಾತಾಡುತ್ತಿದ್ದಾನೆ. ನಮಗೋಸ್ಕರ ಇದರಲ್ಲೊಂದು ಸಂದೇಶವಿರುತ್ತದೋ? ಹೌದು. ಸರ್ವ ಕಾಲಕ್ಕೂ ಸಂದೇಶವು ಅದರಲ್ಲಿ ಇಲ್ಲವಾಗಿದ್ದಲ್ಲಿ ಪವಿತ್ರಾತ್ಮನು ಈ ವಾಕ್ಯಭಾಗವನ್ನು ಸಂರಕ್ಷಿಸಿಡುತ್ತಿರಲಿಲ್ಲ. ಇಪ್ಪತ್ತೊಂದನೆಯ ಶತಮಾನಕ್ಕಾಗಿ ಯಾವ ಸಂದೇಶ ಇರುತ್ತದೆ?

ಹಲವಾರು ವರ್ಷಗಳಿಂದ, ರೋಮಾ 14ನೇ ಅಧ್ಯಾಯವು ವ್ಯಾಪಕ ಶ್ರೇಣಿಯ ಚಟುವಟಿಕೆಗಳನ್ನು ಮತ್ತು ನಂಬಿಕೆಗಳನ್ನು ನ್ಯಾಯವೆಂದು ಸಮರ್ಥಿಸಿಕೊಳ್ಳುವದಕ್ಕೆ ಉಪಯೋಗಿಸಲ್ಪಟ್ಟಿರುತ್ತದೆ. ಉದಾಹರಣೆಗೆ, ರೋಮಾ 14:1 ಅರ್ಥವು ಒಬ್ಬನು ಏನು ನಂಬುತ್ತಾನೆ ಅಥವಾ ಆಚರಿಸುತ್ತಾನೆಂಬುದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ, ಕ್ರಿಸ್ತನಲ್ಲಿ ವಿಶ್ವಾಸವಿಡುವ ಯಾವನನ್ನೇ ಆಗಲಿ ನಾವು ಸ್ವೀಕಾರ ಮಾಡಿಕೊಳ್ಳತಕ್ಕದ್ದು ಎಂದಾಗಿರುತ್ತದೆಂದು ವಾದಿಸುತ್ತಾರೆ. ಬಹಳಷ್ಟು ಸಾರಿ, ಪ್ರಶ್ನಾರ್ಹವಾಗಿರುವಂತಹ ನೈತಿಕ ಆಚಾರಗಳನ್ನು ನ್ಯಾಯವೆಂದು ಸಮರ್ಥಿಸಿಕೊಳ್ಳುವದಕ್ಕೆ ವಾಕ್ಯಭಾಗವು ಉಪಯೋಗಿಸಲ್ಪಟ್ಟಿರುತ್ತದೆ. ಗತಕಾಲದಲ್ಲಿ, KJV ತರ್ಜುಮೆಯಲ್ಲಿನ ("ಮನಸ್ಸು ನೋಯಿಸು") 21ನೇ ವಚನದಲ್ಲಿರುವ ಮಾತುಗಳನ್ನು ಹೀಗೆ ಬಳಸಿಕೊಳ್ಳಲಾಗಿತ್ತು: "ನೀನು ಮಾಡುತ್ತಿರುವ ಕಾರ್ಯವು ನನಗೆ ಇಷ್ಟವಿಲ್ಲ. ಅದು ನನ್ನ ಮನಸ್ಸಿಗೆ *ನೋವುಂಟು* ಮಾಡುತ್ತದೆ; ಆದ್ದರಿಂದ, ಪೌಲನ ಬೋಧನೆಯ ಪ್ರಕಾರವಾಗಿ, ನೀನು ಹಾಗೆ ಮಾಡುವದನ್ನು ನಿಲ್ಲಿಸತಕ್ಕದ್ದು!" ನಾವು ವಾಕ್ಯಭಾಗದ ಮೂಲಕ ಸಾಗಿದ ಹಾಗೆ, ಇಂತಹ ಕೆಲವೊಂದು ಸಂದೇಹಾಸ್ಪದ ಅನ್ವಯಿಕೆಗಳ ಬಗ್ಗೆ ಮಾತಾಡಲಿದ್ದೇವೆ.

ಬಹುಶಃ ಅನ್ವಯಿಕೆಯ ಕುರಿತಾಗಿ ಹೇಳಬಹುದಾದ ಅತ್ಯಂತ ಪ್ರಾಮುಖ್ಯವಾದ ಸಂಗತಿಯೆಂದರೆ ಈ ವಾಕ್ಯಭಾಗವು *ಅಭಿಪ್ರಾಯ ಭೇದಗಳ ವಿಷಯವಾಗಿ* ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಮಾತಾಡುತ್ತದೆ ಎಂಬುದೆ. ಇದು NASB ತರ್ಜುಮೆಯಲ್ಲಿ 14ನೇ ಅಧ್ಯಾಯದ ಆರಂಭದಲ್ಲಿಯೇ ಸೂಚಿತವಾಗಿರುತ್ತದೆ: "ಆದ್ದರಿಂದ ನಂಬಿಕೆಯಲ್ಲಿ ಬಲಹೀನನಾಗಿರುವವನನ್ನು ಸ್ವೀಕರಿಸಿಕೊಳ್ಳಿರಿ, ಆದರೆ ಆತನ ಅಭಿಪ್ರಾಯಗಳ ಮೇಲೆ ತೀರ್ಪು ಮಾಡುವದಕ್ಕಲ್ಲ" (14:1).[6] "ಆತನ ಅಭಿಪ್ರಾಯಗಳ ಮೇಲೆ" ಎಂಬ ಪದವು ಒಂದು ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿದ್ದು, ಈ ವಚನದಲ್ಲಿ, ಅದು "ಕ್ಷುಲ್ಲಕವಾದವುಗಳ ಕುರಿತು ಚಿಂತಿಸುವದು" ಎಂಬುದನ್ನು ಸೂಚಿಸುತ್ತದೆ.[7] ಈ ವಾಕ್ಯಭಾಗವು ಅಭಿಪ್ರಾಯಗಳ—"ಗೌಣವಾದವುಗಳು," "ಅವಶ್ಯಕವಲ್ಲದವುಗಳು," "ಅಪ್ರಧಾನವಾದವುಗಳು," "ಕ್ಷುಲ್ಲಕ ವಿಷಯಗಳು," ಮತ್ತು "ಅನಾಸಕ್ತ ವಿಷಯಗಳು" ಸಹ ಸೇರಿದಂತೆ—ಕುರಿತ ವಿಷಯದ ಬಗ್ಗೆ ಮಾತಾಡುತ್ತದೆಂಬು ದನ್ನು ವ್ಯಕ್ತಪಡಿಸುವದಕ್ಕೆ ಬರಹಗಾರರು ವೈವಿಧ್ಯವಾದ ಪದಗಳನ್ನು ಹಾಗೂ ಪದಗುಚ್ಛಗಳನ್ನು ಉಪಯೋಗಿಸುತ್ತಾರೆ.

ಹೊಸ ಒಡಂಬಡಿಕೆಯ ಕ್ರೈಸ್ತತ್ವವನ್ನು ಪುನಃಸ್ಥಾಪಿಸುವದಕ್ಕೆ ಬದ್ಧರಾಗಿರುವವರು "ಒಂದು ನಂಬಿಕೆಯ ವಿಷಯ" (ಅದು ಬೈಬಲಿನಲ್ಲಿ ಸ್ಪಷ್ಟವಾಗಿ ಕಲಿಸಲ್ಪಟ್ಟಿದೆ) ಮತ್ತು "ಒಂದು ಅಭಿಪ್ರಾಯದ ವಿಷಯ" (ಅದರ ಕುರಿತಾಗಿ ಬೈಬಲ್ ಯಾವದೇ ನಿರ್ದಿಷ್ಟವಾದ ಬೋಧನೆಯನ್ನು ನೀಡಿರುವದಿಲ್ಲ) ಗಳ ನಡುವೆ ಒಂದು ವ್ಯತ್ಯಾಸವಿರುತ್ತದೆಂಬುದನ್ನು ಯಾವಾಗಲೂ ಒಪ್ಪಿಕೊಂಡಿರುತ್ತಾರೆ. ಹಿಂದಿನ ದಿನಗಳಲ್ಲಿ ಕೇಳಿ ಬರುತ್ತಿದ್ದ ಒಂದು

ಘೋಷವಾಕ್ಯವು ಹೀಗಿರುತ್ತಿತ್ತು, "ನಂಬಿಕೆಯ ವಿಷಯದಲ್ಲಿ, ಐಕ್ಯತೆ; ಅಭಿಪ್ರಾಯದ ವಿಷಯದಲ್ಲಿ, ಸ್ವಾತಂತ್ರ್ಯ; ಮತ್ತು ಎಲ್ಲಾ ಕಾರ್ಯಗಳಲ್ಲಿ, ದಯಾಧರ್ಮ [ಅಥವಾ ಪ್ರೀತಿ]."[8] *ನಂಬಿಕೆಯ* ವಿಷಯದಲ್ಲಿನ ಭಿನ್ನಾಭಿಪ್ರಾಯಗಳ ವಿಷಯದಲ್ಲಿ ನಾವು ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಪೌಲನು ರೋಮಾ 16:17ರಲ್ಲಿ ವಿವರಿಸಿರುತ್ತಾನೆ. ನಮ್ಮ ಈಗಿನ ವಾಕ್ಯಭಾಗವು *ಅಭಿಪ್ರಾಯ* ಕುರಿತ ವಿಷಯಗಳಲ್ಲಿ ನಾವು ಹೇಗೆ ವರ್ತಿಸಬೇಕೆಂಬ ಕುರಿತಾಗಿರುತ್ತದೆ.

ರೋಮಾ 14:1-15:13ರ ವಾಕ್ಯಭಾಗವು ಅಭಿಪ್ರಾಯಕ್ಕೆ ಸಂಬಂಧಿಸಿದ ವಿಷಯಗಳಿಗೆ ಮಾತ್ರವೇ ಸಿಮೀತವಾಗಿರತಕ್ಕದ್ದು ಎಂಬದರಲ್ಲಿ ವ್ಯಾಖ್ಯಾನಕಾರರು ಸಾಮಾನ್ಯವಾಗಿ ಒಮ್ಮತವನ್ನು ಹೊಂದಿರುತ್ತಾರೆ. ಉದಾಹರಣೆಗೆ, Douglas J. Moo ಅಭಿಪ್ರಾಯ ಪಟ್ಟದ್ದೇನೆಂದರೆ, "ಪೌಲನು ಇಲ್ಲಿ ಕೇಳಿಕೊಳ್ಳುವಂಥ ಸೈರಣೆಯನ್ನು ನಾವು ಎಲ್ಲಾ ವಿವಾದಾಂಶಗಳಿಗೂ ವಿಸ್ತರಿಸುವದಕ್ಕೆ ಸಾಧ್ಯವಿಲ್ಲ. . . ನಾವು ರೋಮಾ 14:1-15:13ರ ಸೈರಣೆಯನ್ನು ಪೌಲನು ಇಲ್ಲಿ ತಿಳಿಸುವ ವಿವಾದಾಂಶಗಳಂತಿರುವ ಇತರೆ ವಿಷಯಗಳಿಗೆ ಅನ್ವಯಿಸುವದರಲ್ಲಿ ಜಾಗರೂಕರಾಗಿರಬೇಕು."[9] ಅದೇ ವೇಳೆಯಲ್ಲಿ, ತಾವು ಅಭಿಪ್ರಾಯದ ವಿಷಯಗಳೆಂದು ಪರಿಗಣಿಸುವ ತಮ್ಮದೇ ಆಗಿರುವ ಸಿದ್ಧಾಂತಿಕ ಮತ್ತು ನೈತಿಕ ವಿವಾದಾಂಶಗಳನ್ನು ಸಹ ಬಹುತೇಕ ಬರಹಗಾರರು ಸೇರ್ಪಡೆಗೊಳಿಸಬೇಕೆಂಬ ಬಯಕೆಯನ್ನು ನಿಗ್ರಹಿಸಿಕೊಳ್ಳಲಾರರು. ಅವರ ಪಟ್ಟಿಯಲ್ಲಿ ದೀಕ್ಷಾಸ್ನಾನವನ್ನು ಮುಳುಗಿಸಿ ಕೊಡಬೇಕೋ ಎಂಬಂತಹ ಸಿದ್ಧಾಂತಿಕ ಮತ್ತು ಜೂಜಾಟದಂತಹ ಇತರೆ ನೈತಿಕ ವಿವಾದಾಂಶಗಳು ಸೇರಿರುತ್ತವೆ.

ರೋಮಾ 14ನ್ನು ಅನ್ವಯಿಕೆ ಮಾಡುವದರಲ್ಲಿ, ವ್ಯಕ್ತಿಗಳು ತಾವು ಏನು *ಸಾಭಿತುಪಡಿಸಬೇಕಿದೆ* ಅದನ್ನೇ ವಾಕ್ಯಭಾಗದಲ್ಲಿ *ಊಹಿಸಿಕೊಳ್ಳುವುದನ್ನು* ಮಾಡುವದು ಸಾಮಾನ್ಯವಾಗಿರುತ್ತದೆ. ಅಂದರೆ, ಅವರು ಈ ವಿವಾದಾಂಶ ಅಥವಾ ಆ ಅಭಿಪ್ರಾಯದ ವಿಷಯವನ್ನು *ಊಹಿಸಿಕೊಳ್ಳುತ್ತಾರೆ* ಮತ್ತು ಬಳಿಕ ರೋಮಾ 14ನ್ನು ಅದರೊಂದಿಗೆ ಅನ್ವಯಿಸುತ್ತಾರೆ. ರೋಮಾ 14ರ ಮೂಲತತ್ವಗಳು ಯಾವದೇ ವಿವಾದಾಂಶಕ್ಕೆ ಕಟ್ಟುನಿಟ್ಟಾಗಿ ಅನ್ವಯಿಕೆ ಮಾಡಲ್ಪಡುವದಕ್ಕೆ ಮುನ್ನ, ಆ ನಿರ್ದಿಷ್ಟವಾದ ವಿವಾದಾಂಶವು ಅಭಿಪ್ರಾಯ—ವಿಷಯದ ವರ್ಗದಡಿಯಲ್ಲಿ ಬರುತ್ತದೆಂಬುದನ್ನು ಸಾಭಿತುಪಡಿಸಿಕೊಳ್ಳತಕ್ಕದ್ದು. ಇದು ಅಷ್ಟು ಸುಲಭವಾದದ್ದಲ್ಲ. ಕೆಲವು ಕ್ರೈಸ್ತರು ಅನೇಕ ವಿವಾದಾಂಶಗಳನ್ನು ನಂಬಿಕೆಗೆ ಸಂಬಂಧಿಸಿದ ವಿಷಯಗಳೆಂದು ಪರಿಗಣಿಸಿರುತ್ತಾರೆ, ಅದೇ ವೇಳೆಯಲ್ಲಿ ಇನ್ನು ಕೆಲ ಕ್ರೈಸ್ತರು ಅವುಗಳು ಅಭಿಪ್ರಾಯಕ್ಕೆ ಸಂಬಂಧಿಸಿದ ವಿಷಯಗಳೆಂದು ಅಷ್ಟೇ ಮನವರಿಕೆ ಹೊಂದಿರುತ್ತಾರೆ.

ಹಾಗಾದರೆ ರೋಮಾ 14:1-15:13 ಇಂದು ನಮಗೋಸ್ಕರ ಹೇಳುವದಕ್ಕೆ ಅಷ್ಟೇನೂ ವಿಷಯವನ್ನು ಹೊಂದಿಲ್ಲವೆಂದು ಅರ್ಥವೋ? ಎಂದಿಗೂ ಇಲ್ಲ. ಸಭೆಯಲ್ಲಿ, ನಾವು *ಕೆಲವು ಸಾರಿ* ನಂಬಿಕೆಗೆ ಸಂಬಂಧಿಸಿದ ವಿಷಯಗಳಲ್ಲಿ ಭಿನ್ನಾಭಿಪ್ರಾಯ ತೋರುತ್ತೇವೆ, ಆದರೆ *ಅನೇಕ ಸಾರಿ* ಭಾಗಿಯಾಗಿರುವ ಬಹುತೇಕರು ಒಪ್ಪಿಕೊಳ್ಳಲೇಬೇಕಾದ (ಒಲ್ಲದ ಮನಸ್ಸಿನಿಂದ) ಅಭಿಪ್ರಾಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಹೊಂದಿರುತ್ತೇವೆ. ನನ್ನ ಜೀವಿತ ಕಾಲದ ವೇಳೆಯಲ್ಲಿ, ಒಂದಿಷ್ಟು ಸಿದ್ಧಾಂತಿ

ವಿವಾದಾಂಶಗಳು ಸಭೆಯಲ್ಲಿ ವಿಭಜನೆಯನ್ನುಂಟು ಮಾಡಿರುವದನ್ನು ಕಂಡಿದ್ದೇನೆ. ಆ ಕಾಲದ ವೇಳೆಯಲ್ಲಿಯೇ, ಅಭಿಪ್ರಾಯಕ್ಕೆ ಸಂಬಂಧಿಸಿದ ವಿಚಾರದಲ್ಲಿ ನೂರಾರು ಸಭೆಗಳಲ್ಲಿನ ಸಾಮರಸ್ಯವು ಹಾಳಾಗಿ ಹೋಗಿರುವದನ್ನು ನಾನು ನೋಡಿದ್ದೇನೆ.

ಅದನ್ನು ಹೇಳಿಯಾದ ಮೇಲೆ, *ಯಾವದೇ* ಕಾಲದಲ್ಲಿ ನಾವು ಒಬ್ಬ ಸಹೋದರನೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವಾಗ, ಅದನ್ನು ನಾವು ನಂಬಿಕೆಗೆ ಸಂಬಂದಿಸಿದ ವಿಷಯವೆಂದು ಪರಿಗಣಿಸುತ್ತೇವೋ ಅಥವಾ ಅಭಿಪ್ರಾಯದ ವಿಷಯವೆಂದು ಪರಿಗಣಿಸುತ್ತೇವೋ ಎಂಬುದಕ್ಕೆ ನಮಗೆ ಮಾರ್ಗಸೂಚಿಗಳನ್ನು ನೀಡುವಂತಹ ಕೆಲವು *ಸಾಮಾನ್ಯ* ಮೂಲತತ್ವಗಳನ್ನು ವಾಕ್ಯಭಾಗದಿಂದ ಸೆಳೆದುಕೊಳ್ಳಬಲ್ಲೆವು ಎಂದು ನಾನು ನಂಬುತ್ತೇನೆ. ಅಲ್ಲದೆ ನಾವು ಇತರ ಜನರೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವ *ವೇಳೆಯಲ್ಲೆಲ್ಲಾ*, ಪರಿಸ್ಥಿತಿಯು ಏನೇ ಆಗಿದ್ದರೂ ಸರಿಯೇ, ನಮಗೆ ಸಹಾಯಕರವಾಗುವಂತಹ ಮೂಲತತ್ವಗಳು ಸಹ ಇರುತ್ತವೆ. ಇಲ್ಲಿ ಸಿಕ್ಕುವ ಮೂಲತತ್ವಗಳು ಸಭೆಗಳಿಗೆ ಮಾತ್ರವೇ ಸಹಾಯ ಮಾಡುವದಿಲ್ಲ; ಅವುಗಳು ದಾಂಪತ್ಯಗಳಿಗೆ, ಕುಟುಂಬಗಳಿಗೆ, ಮತ್ತು ಸಮುದಾಯಗಳಿಗೆ ಸಹ ಸಹಾಯವನ್ನು ಒದಗಿಸಬಲ್ಲವು.

ರೋಮಾ 14:1-15:13ರ ಪ್ರಧಾನ ಚರ್ಚೆಯ ವಿಷಯವು "ಒಬ್ಬರನ್ನೊಬ್ಬರು ಸ್ವೀಕರಿಸಿಕೊಳ್ಳುವದು." ವಾಕ್ಯಭಾಗವು ಹೀಗೆ ಆರಂಭಗೊಳ್ಳುತ್ತದೆ, "ನಂಬಿಕೆಯಲ್ಲಿ ದೃಢವಿಲ್ಲದವರನ್ನೂ *ಸೇರಿಸಿಕೊಳ್ಳಿರಿ"* (14:1; ಒತ್ತಿ ಹೇಳಿದ್ದು ನನ್ನದು). ಬಳಿಕ, ವಾಕ್ಯಭಾಗದ ಅಂತ್ಯದ ಹತ್ತಿರದಲ್ಲಿ, ಅದು ಹೀಗೆ ಹೇಳುತ್ತದೆ, "ಆದದರಿಂದ ಕ್ರಿಸ್ತನು ನಿಮ್ಮನ್ನ *ಸೇರಿಸಿಕೊಂಡಂತೆ* ನೀವು ಸಹ ಒಬ್ಬರನ್ನೊಬ್ಬರು *ಸೇರಿಸಿಕೊಂಡು* ದೇವರ ಮಹಿಮೆಯನ್ನು ಪ್ರಕಾಶಪಡಿಸಿರಿ" (15:7; ಒತ್ತಿ ಹೇಳಿದ್ದು ನನ್ನದು). ಈ ವಾಕ್ಯಭಾಗವು ಸ್ವೀಕರಿಸಿಕೊಳ್ಳುವ ಕುರಿತಾಗಿ ನಾಲ್ಕು ಪ್ರಮುಖ ಶೀರ್ಷಿಕೆಗಳ ಅಡಿಯಲ್ಲಿ ಚರ್ಚಿಸಲ್ಪಡುವದು: "ಸ್ವಾತಂತ್ರ್ಯತೆಯಲ್ಲಿ" (14:1-12), "ಪ್ರೀತಿಯಲ್ಲಿ" (14:13-18), "ಸಮಾಧಾನದಲ್ಲಿ" (14:19-23), ಮತ್ತು "ಐಕ್ಯತೆಯಲ್ಲಿ" (15:1-13).

# ಸ್ವಾತಂತ್ರ್ಯತೆಯಲ್ಲಿ ಒಬ್ಬರನ್ನೊಬ್ಬರು ಸ್ವೀಕರಿಸಿಕೊಳ್ಳುವದು (14:1-12)

## ಆಹಾರ ಪದ್ಧತಿಯ ವಿಷಯದಲ್ಲಿ (14:1-4)

**1ನಂಬಿಕೆಯಲ್ಲಿ ದೃಢವಿಲ್ಲದವರನ್ನೂ ಸೇರಿಸಿಕೊಳ್ಳಿರಿ. ಆದರೆ ಸಂದೇಹಾಸ್ಪದವಾದ ಕಾರ್ಯಗಳನ್ನು ಅವರ ಮುಂದೆ ಚರ್ಚಿಸಬೇಡಿರಿ. 2ಒಬ್ಬನು ಯಾವದನ್ನಾದರೂ ತಿನ್ನಬಹುದೆಂದು ನಂಬುತ್ತಾನೆ; ನಂಬಿಕೆಯಲ್ಲಿ ದೃಢವಿಲ್ಲದವನು ಕಾಯಿಪಲ್ಯಗಳನ್ನು ಮಾತ್ರ ತಿನ್ನುತ್ತಾನೆ. 3ತಿನ್ನುವವನು ತಿನ್ನದವನನ್ನು ಹೀನೈಸಬಾರದು; ತಿನ್ನದವನು ತಿನ್ನುವವನನ್ನು ದೋಷಿಯೆಂದು ಎಣಿಸಬಾರದು. ದೇವರು ಇಬ್ಬರನ್ನೂ ಸೇರಿಸಿಕೊಂಡಿದ್ದಾನಲ್ಲಾ. 4ಮತ್ತೊಬ್ಬನ ಸೇವಕನ ವಿಷಯವಾಗಿ ತೀರ್ಪುಮಾಡುವದಕ್ಕೆ ನೀನು ಯಾರು? ಅವನು ನಿರ್ದೋಷಿಯಾಗಿ ನಿಂತರೂ ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೇ**

**ಸೇರಿದ್ದು. ಅವನು ನಿರ್ದೋಷಿಯಾಗಿ ನಿಲ್ಲಿಸಲ್ಪಡುವನು; ಅವನನ್ನು ನಿಲ್ಲಿಸುವದಕ್ಕೆ ಕರ್ತನು ಶಕ್ತನಾಗಿದ್ದಾನೆ.**

**ವಚನ 1.** ನಾವು ಅಭಿಪ್ರಾಯಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ನಿರಂತರವಾಗಿ ಭಿನ್ನಾಭಿಪ್ರಾಯ ಹೊಂದಿರುವಾಗ, ನಾವು ಒಬ್ಬರನ್ನೊಬ್ಬರು ಹೇಗೆ ನಡಿಸಿಕೊಳ್ಳಬೇಕು? ಪೌಲನು ಮೊದಲು ನಂಬಿಕೆಯಲ್ಲಿ "ದೃಢವಾಗಿದ್ದ" ಸಹೋದರನಿಗೆ ಕರೆ ಕೊಡುತ್ತಾನೆ: **ನಂಬಿಕೆಯಲ್ಲಿ ದೃಢವಿಲ್ಲದವರನ್ನೂ ಸೇರಿಸಿಕೊಳ್ಳಿರಿ.** "ಸೇರಿಸಿಕೊಳ್ಳಿರಿ" ಎಂಬುದು προσλαμβάνω (*proslambanō*) ಎಂಬ ಪದದಿಂದ ಬಂದದ್ದು, ಅದು πρός (*pros*, "ಗೆ") ಮತ್ತು λαμβάνω (*lambanō*, "ಸ್ವೀಕರಿಸು") ಎಂಬ ಪದಗಳನ್ನು ಸಂಯೋಜಿಸುತ್ತದೆ. ಅದರರ್ಥವು "ಒಬ್ಬನಿಗೆ ತೆಗೆದುಕೊಳ್ಳುವದು." ಎಂದಾಗಿರುತ್ತದೆ. ಈ ಪದವು "ಸ್ವೀಕರಿಸುವವನ ಕಡೆಯಲ್ಲಿ ವಿಶೇಷ ಆಸಕ್ತಿಯಿರುವದನ್ನು, ಅದು *ಸ್ವಾಗತ* ಮಾಡುವದು" ಎಂಬುದನ್ನು ಸೂಚಿಸುತ್ತದೆ.[10] ಅವರನ್ನು ನಿಮ್ಮ ಅನ್ಯೋನ್ಯತೆಯಲ್ಲಿ, ಒಲ್ಲದ ಮನಸ್ಸಿನಿಂದಲೋ ಅಥವಾ ಇಷ್ಟವಿಲ್ಲದೆ ಅಲ್ಲ, ಆದರೆ ತೆರೆದ ಬಾಹುಗಳಿಂದ ಮತ್ತು ಹೃದಯದಿಂದ ಸ್ವೀಕರಿಸಿಕೊಳ್ಳಿರಿ.

"ನಂಬಿಕೆಯಲ್ಲಿ ದೃಢವಿಲ್ಲದವರನ್ನೂ" ಎಂಬ ಪದಗುಚ್ಛದಿಂದ ಪೌಲನ ತಾತ್ಪರ್ಯವು ಏನಾಗಿತ್ತು? ಗ್ರೀಕ್ ವಾಕ್ಯದಲ್ಲಿ, "ನಂಬಿಕೆ" ಎಂಬ ಪದದ ಮುಂದೆ ಒಂದು ನಿರ್ದೇಶಕ ಗುಣವಾಚಿ ("the") ಇರುತ್ತದೆ (ನೋಡಿರಿ KJV; McCord). ಹೊಸ ಒಡಂಬಡಿಕೆಯಲ್ಲಿ ಅನೇಕ ಸಾರಿ "the faith" (ನಂಬಿಕೆ) ಎಂಬುದನ್ನು ಯೇಸುವಿನಲ್ಲಿನ ನಂಬಿಕೆಯ ಸುತ್ತ ಕೇಂದ್ರಿಕೃತವಾಗಿರುವ ಉಪದೇಶದ ಒಂದು ಸಂಗ್ರಹವನ್ನು ಸೂಚಿಸುವದಕ್ಕೆ ಉಪಯೋಗಿಸಲಾಗಿರುತ್ತದೆ (ಉದಾಹರಣೆಗೆ, ನೋಡಿರಿ ಗಲಾತ್ಯ 1:23). ಆದುದರಿಂದ, "ನಂಬಿಕೆಯಲ್ಲಿ ದೃಢವಿಲ್ಲದವರನ್ನೂ" ಎಂಬುದು ಶಾಸ್ತ್ರಗಳ ಕುರಿತಾದ ಜ್ಞಾನದಲ್ಲಿ ಕೊರತೆಯುಳ್ಳ ಒಬ್ಬ ಕ್ರೈಸ್ತನನ್ನು—ಬಹುಶಃ ಹೊಸದಾಗಿ ಪರಿವರ್ತನೆಗೊಂಡವನನ್ನು—ಸೂಚಿಸುತ್ತಿರಬಹುದಾಗಿದೆ. ಖಂಡಿತವಾಗಿಯೂ, "ನಂಬಿಕೆಯಲ್ಲಿ ಧೃಢವಿಲ್ಲದವರು" ಎಂದು ಬಣ್ಣಿಸಲ್ಪಟ್ಟಿರುವವರು ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನು ಬೋಧಿಸಿದ ಸ್ವಾತಂತ್ರ್ಯತೆಯ ಬಗ್ಗೆ ಅರ್ಥಮಾಡಿಕೊಂಡಿರಲಿಲ್ಲ.

ಈ ವಾಕ್ಯಭಾಗದಲ್ಲಿ, ಹೇಗೂ, ಪೌಲನು "ನಂಬಿಕೆ" ಎಂಬ ಪದವನ್ನು ಆತನು ಪತ್ರಿಕೆಯ ಉಳಿದ ಭಾಗದಲ್ಲಿ ಉಪಯೋಗಿಸಿದ್ದಕ್ಕಿಂತಲೂ ಇಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಾಸವಾಗಿ ಉಪಯೋಗಿಸುತ್ತಿರಬಹುದಾಗಿದೆ. ಉದಾಹರಣೆಗೆ, ಆತನು ಹೀಗೆ ಹೇಳುತ್ತಾನೆ, "ನಿನಗಿರುವ ನಂಬಿಕೆಯು ದೇವರಿಗೆ ಮಾತ್ರ ಗೋಚರವಾಗಿ ನಿನ್ನ ಮಟ್ಟಿಗೇ ಇರಲಿ" (14:22). ಬೇರೆ ಮಾತುಗಳಲ್ಲಿ ಹೇಳುವದಾದರೆ, ನಿನ್ನ "ನಂಬಿಕೆ"ಯನ್ನು ನಿನ್ನಲ್ಲಿಯೇ ಗೋಪ್ಯವಾಗಿಟ್ಟುಕೋ. ಪೌಲನು ಕ್ರೈಸ್ತರಿಗೆ ತಾವು *ಯೇಸುವಿನಲ್ಲಿಟ್ಟಿರುವ* ನಂಬಿಕೆಯನ್ನು ತಮ್ಮಲ್ಲಿಯೇ ಗೋಪ್ಯವಾಗಿಟ್ಟುಕೊಳ್ಳುವಂತೆ *ಎಂದಿಗೂ* ಹೇಳಲಾರನಾ ದ್ದರಿಂದ, "ನಂಬಿಕೆ" ಎಂಬುದಕ್ಕೆ ಈ ವಾಕ್ಯಭಾಗದಲ್ಲಿ ಬೇರೆಯೇ ಆಗಿರುವ ಅಧಿಕಾರ್ಥ ವಿರಬಹುದಾಗಿದೆ. "ನಂಬಿಕೆ" ಎಂಬುದು πίστις (*pistis*) ಪದದಿಂದ ಅನುವಾದಿಸಲ್ಪಟ್ಟಿದೆ, ಅದರ ಮೂಲಾರ್ಥವು ಪೂರ್ಣವಾಗಿ ಮನದಟ್ಟುಗೊಳ್ಳುವದು ಅಥವಾ ಮನವರಿಕೆಗೊಳ್ಳು ವದು ಎಂದಾಗಿರುತ್ತದೆ (1:16, 17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಒಬ್ಬನು ಯಾವ

ವಿಷಯದಲ್ಲಿ ಮನದಟ್ಟು ಮಾಡಲ್ಪಟ್ಟಿರುತ್ತಾನೆಂಬುದು ವಾಕ್ಯದಲ್ಲಿ ಅಂತರ್ಗತವಾಗಿರುವದಿಲ್ಲ; ಅದನ್ನು ಸನ್ನಿವೇಶದ ಪ್ರಕಾರವಾಗಿ ಅನ್ವಯಿಸತಕ್ಕದ್ದು. ರೋಮಾಪುರದವರಿಗೆ ಬರೆದ ಪತ್ರಿಕೆಯ ಬಹುತೇಕ ಭಾಗದಲ್ಲಿ, ಪೌಲನು "ನಂಬಿಕೆ" ಎಂಬ ಪದವನ್ನು ಯೇಸು ಕ್ರಿಸ್ತನಲ್ಲಿನ ನಂಬಿಕೆಯನ್ನು ಸೂಚಿಸುವದಕ್ಕೆ ಉಪಯೋಗಿಸಿದನು; ಆದರೆ ರೋಮಾ 14ರಲ್ಲಿ ಆ ಪದವು ಪ್ರಾಥಮಿಕವಾಗಿ ಚರ್ಚೆಯಲ್ಲಿರುವ ವಿಷಯದ ಕುರಿತಾಗಿ ಒಬ್ಬನಿಗಿರುವ *ಬಲವಾದ ವೈಯಕ್ತಿಕ ಮನವರಿಕೆಯನ್ನು* ಸೂಚಿಸುವದಕ್ಕೆ ಉಪಯೋಗಿಸಲ್ಪಟ್ಟಿದೆ.

ಬಲವಾದ ವೈಯಕ್ತಿಕವಾದ ಮನವರಿಕೆಯು ದೇವರ ವಾಕ್ಯದ ಮೇಲೆ ಆಧಾರವಾಗಿರಬಲ್ಲದು ಅಥವಾ ವಾಕ್ಯದ ಕುರಿತಾದ ಒಂದು ಅಪಾರ್ಥದ ಮೇಲೆ ಆಧಾರವಾಗಿರಬಲ್ಲದು. ಅದು ಒಬ್ಬನಿಗೆ ಆತನ ಜೀವಿತಕಾಲವೆಲ್ಲಾ ಕಲಿಸಲ್ಪಟ್ಟಿರುವದರ ಮೇಲೆ ಆಧಾರವಾಗಿರಬಲ್ಲದು ಅಥವಾ ಹೆಚ್ಚುಕಡಿಮೆ ಯಾವದೆ ಮಾಹಿತಿ ಅಥವಾ ತಪ್ಪು ಮಾಹಿತಿಯ ಮೂಲದ ಮೇಲೆ ಆಧಾರವಾಗಿರಬಲ್ಲದು. ಮೂಲವು ಏನೇ ಆಗಿದ್ದರೂ ಸರಿಯೇ, ಆ ಮನವರಿಕೆಯನ್ನು ಹೊಂದಿರುವವನು ಅದುವೇ ಸತ್ಯವೆಂಬುದಾಗಿ ಯಥಾರ್ಥವಾಗಿ ವಿಶ್ವಾಸಿಸುವವನಾಗಿರುತ್ತಾನೆ.

ಈ ವಾಕ್ಯಭಾಗದಲ್ಲಿ, ಹಾಗಾದರೆ, "ನಂಬಿಕೆಯಲ್ಲಿ *ದೃಢವಿಲ್ಲದ*ವರನ್ನೂ" ಎಂಬುದರ್ಥವೇನೆಂದರೆ, ಒಂದು ನಿರ್ದಿಷ್ಟವಾದ ನಂಬಿಕೆಯ ವಿಷಯದಲ್ಲಿ ಸಹೋದರನೊಬ್ಬನು ಎಷ್ಟೇ ಯಥಾರ್ಥವಾಗಿದ್ದರೂ, ಆತನ ಮನವರಿಕೆಯಲ್ಲಿ ಏನೋ *ತಪ್ಪಿರುತ್ತದೆ* ಎಂಬುದೇ. "ನಂಬಿಕೆಯಲ್ಲಿ *ದೃಢವಾಗಿ*ರುವವನು" ಎಂದರೆ ಒಂದು ನಿರ್ದಿಷ್ಟವಾದ ವಿವಾದಾಂಶದ ಕುರಿತು ಹೊಂದಿರುವ ಅವನ ಮನವರಿಕೆಯು *ಸರಿಯಾದದ್ದು* ಆಗಿರುವದಾಗಿದೆ ಎಂಬದೆ.

"ನಂಬಿಕೆಯಲ್ಲಿ ದೃಢವಿಲ್ಲದವರನ್ನೂ ಸೇರಿಸಿಕೊಳ್ಳಿರಿ" ಎಂದು ತನ್ನ ವಾಚಕರಿಗೆ ಸಲಹೆ ಕೊಟ್ಟ ಬಳಿಕ, ಪೌಲನು ಸ್ಪಷ್ಟವಾಗಿ ಹೀಗೆ ಹೇಳುತ್ತಾನೆ, **ಸಂದೇಹಾಸ್ಪವಾದ ಕಾರ್ಯಗಳನ್ನು ಅವರ ಮುಂದೆ ಚರ್ಚಿಸಬೇಡಿರಿ.** ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನು ಎಷ್ಟು ತಪ್ಪಾಗಿದ್ದಾನೆಂಬುದನ್ನು ಅವರಿಗೆ ತೋರಿಸಿ ಕೊಡುವದಕ್ಕೆ ನಿಮಗೊಂದು ಅವಕಾಶ ಸಿಕ್ಕಬೇಕೆಂಬ ಒಂದೇ ಕಾರಣಕ್ಕಾಗಿ ಅವರನ್ನು ನಿಮ್ಮ ಅನ್ಯೋನ್ಯತೆಯೊಳಗೆ ಆಮಂತ್ರಿಸಬೇಡಿರಿ. JB ಹೇಳುತ್ತದೆ "ಆತನನ್ನು ಸ್ವಾಗತಿಸಿರಿ . . . ಯಾವದೇ ವಾದವನ್ನು ಆರಂಭಿಸಿದಯೇ ಸ್ವಾಗತಿಸಿರಿ."

**ವಚನ 2.** ಅಪೊಸ್ತಲನು ಮುಂದುವರೆಸುತ್ತಾನೆ, **ಒಬ್ಬನು** ["ದೃಢವಿರುವ" ಸಹೋದರನು] **ಯಾವದನ್ನಾದರೂ** [ಮಾಂಸವೂ ಸೇರಿದಂತೆ] **ತಿನ್ನಬಹುದೆಂದು ನಂಬುತ್ತಾನೆ** [ಒಂದು ಬಲವಾದ ಮನವರಿಕೆ]; **ನಂಬಿಕೆಯಲ್ಲಿ ದೃಢವಿಲ್ಲದವನು ಕಾಯಿಪಲ್ಯಗಳನ್ನು ತಿನ್ನುತ್ತಾನೆ**. ಕೆಲವರು ಆರೋಗ್ಯದ ಕಾರಣಗಳಿಗೋಸ್ಕರ ಮಾಂಸ ಸೇವನೆಯಿಂದ ದೂರವಿರುತ್ತಾರೆ, ಆದರೆ ಈ ವಚನವು ಧಾರ್ಮಿಕ ಲವಲೇಶಗಳ ಕುರಿತು ಚರ್ಚಿಸುತ್ತಿದೆ, ಹೊರತು ಆರೋಗ್ಯದ ಕಳಕಳಿಗಳನ್ನಲ್ಲ. ಈಗಾಗಲೇ ತಿಳಿಸಿರುವ ಪ್ರಕಾರ, ಸಸ್ಯಹಾರಿಗಳು ಬಹುಶಃ ಕೋಷರ್ ಅಲ್ಲದ ಮಾಂಸವನ್ನು ತಿನ್ನುವದಕ್ಕೆ ನಿರಾಕರಿಸುತ್ತಿದ್ದ ಯೆಹೂದಿ ಕ್ರೈಸ್ತರಾಗಿದ್ದಿರಬಹುದಾಗಿದೆ. ಬಹುಶಃ ಆ ಸಸ್ಯಹಾರಿಗಳು ಮಾರುಕಟ್ಟೆಯಲ್ಲಿ ಸಿಕ್ಕುವ ಮಾಂಸವು ವಿಗ್ರಹಗಳಿಗೆ ನೈವೇದ್ಯ ಮಾಡಿದ್ದೆಂಬ ಅರಿವು ಹೊಂದಿದ್ದ

ಅನ್ಯಜನಾಂಗದ ಕ್ರೈಸ್ತರಾಗಿದ್ದಿರಬಹುದಾಗಿದೆ.

ವಿಗ್ರಹಗಳಿಗೆ ನೈವೇದ್ಯ ಮಾಡಿದ ಮಾಂಸವು ಹೇಗೆ ಮಾರುಕಟ್ಟೆಗೆ ಬಂದಿರಲಿಕ್ಕೆ ಸಾಧ್ಯ? ಒಬ್ಬ ವಿಗ್ರಹಾರಾಧಕ ಧರ್ಮದವನು ಒಂದು ಪ್ರಾಣಿಯನ್ನು ದೇವಸ್ಥಾನಕ್ಕೆ ಕರೆದೊಯ್ಯುತ್ತಿದ್ದನು, ಅಲ್ಲಿ ಅದನ್ನು ಅನ್ಯದೇವರಿಗೆ ಅರ್ಪಿಸಲಾಗುತ್ತಿತ್ತು. ಒಬ್ಬ ಪುರೋಹಿತನು ಆ ಪ್ರಾಣಿಯನ್ನು ವಧಿಸುತ್ತಿದ್ದನು ಮತ್ತು ಸ್ವಲ್ಪ ಭಾಗವನ್ನು ಆರಿಸಿಕೊಂಡು ಯಜ್ಞವೇದಿಯ ಮೇಲಿಡಲಾಗುತ್ತಿತ್ತು. ಪುರೋಹಿತನು ತನಗಾಗಿ ಬಿಟ್ಟಿದ್ದನ್ನು ಇಟ್ಟುಕೊಳ್ಳುತ್ತಿದ್ದನು, ಮತ್ತು ಮಿಕ್ಕ ಮಾಂಸವೆಲ್ಲಾ ಆದಾಯ ಗಳಿಸುವ ಮೂಲದ ರೂಪದಲ್ಲಿ ಮಾರುಕಟ್ಟೆಗೆ ಕಳುಹಿಸಲ್ಪಡುತ್ತಿತ್ತು. ವಿಗ್ರಹಾರಾಧನೆಯಲ್ಲಿಯೇ ಬೆಳೆದು ಬಂದಿದ್ದಂಥ, ಅನ್ಯಜನರಿಗೆ ಈ ಮಾಂಸವನ್ನು ಅದು ವಿಗ್ರಹದೊಂದಿಗೆ ಹೊಂದಿರುವ ಸಂಬಂಧದ ಬಗ್ಗೆ ಯೋಚಿಸಿದೆಯೇ ಸೇವನೆ ಮಾಡುವದು ಕಠಿಣವಾಗಿರುತ್ತಿತ್ತು (ನೋಡಿರಿ 1 ಕೊರಿಂಥ 8:7). ಯಾವದಕ್ಕೂ ಸುರಕ್ಷತೆಯಲ್ಲಿರುವ ಉದ್ದೇಶದಿಂದ, ಅವರಲ್ಲಿ ಕೆಲವರು ಒಟ್ಟಾರೆಯಾಗಿ ಮಾಂಸ ಸೇವನೆಯಿಂದಲೇ ದೂರವಿದ್ದರು.

ಒಂದು ವೇಳೆ "ದೃಢವಿಲ್ಲದ" ಸಹೋದರನು ಧರ್ಮಶಾಸ್ತ್ರ-ಅನುಸರಿಸುತ್ತಿದ್ದ ಹೂದ್ಯನಾಗಿದ್ದಲ್ಲಿ, "ದೃಢವಿರುವ" ಸಹೋದರನು ಎಂದರೆ ಕ್ರೈಸ್ತರು ಇನ್ನು ಮೇಲೆ ಮೋಶೆಯ ಧರ್ಮಶಾಸ್ತ್ರಾಧೀನರಲ್ಲ ಎಂಬುದನ್ನು ಅರ್ಥಮಾಡಿಕೊಂಡಿದ್ದವನು ಎಂದಾಗುತ್ತದೆ (ನೋಡಿರಿ 7:4, 6). ಮಾಂಸವು ಕೋಷರ್ ಬೇಡಿಕೆಗಳನ್ನು ಸಂಧಿಸಬೇಕಾದ ಅಗತ್ಯತೆಯು ಇರಲಿಲ್ಲ. ಒಂದು ವೇಳೆ "ದೃಢವಿಲ್ಲದ" ಸಹೋದರನು ಮಾಂಸವು ವಿಗ್ರಹಕ್ಕೆ ನೈವೇದ್ಯ ಮಾಡಲ್ಪಟ್ಟಿದೆಯೋ ಎಂಬದರ ಬಗ್ಗೆ ಅತಿಯಾದ ಚಿಂತೆಯುಳ್ಳ ಅನ್ಯಜನಾಂಗದ ಕ್ರೈಸ್ತನಾಗಿದ್ದಲ್ಲಿ, "ದೃಢವಿರುವ" ಸಹೋದರನು ಎಂದರೆ ವಿಗ್ರಹವು ಏನೂ ಅಲ್ಲವೇ ಅಲ್ಲ (ನೋಡಿರಿ 1 ಕೊರಿಂಥ 8:4), ಮತ್ತು ಈ ಕಾರಣದಿಂದ ವಿಗ್ರಹಕ್ಕೆ ಅರ್ಪಿಸುವದರಿಂದ ಮಾಂಸದ ಮೇಲೆ ಯಾವದೇ ಪರಿಣಾಮವುಂಟಾಗಿರುವದಿಲ್ಲ ಎಂಬುದನ್ನು ಅರ್ಥಮಾಡಿಕೊಂಡಿದ್ದವನು ಎಂದಾಗುತ್ತದೆ. ರೋಮಾ 14ರಲ್ಲಿ ಸ್ವಲ್ಪ ಮುಂದಕ್ಕೆ ಹೋಗಿ, ಪೌಲನು ಹೀಗೆ ಹೇಳುತ್ತಾನೆ, "ಯಾವ ಪದಾರ್ಥವೂ [ಯಾವ ಆಹಾರವೂ] ಸ್ವತಃ ಅಶುದ್ಧವಲ್ಲವೆಂದು ಬಲ್ಲೆನು" (14:14; ನೋಡಿರಿ ಮಾರ್ಕ 7:19). ಪೌಲನು ತಿಮೊಥೆಯನಿಗೆ ಬರೆದ ಪತ್ರಿಕೆಯಲ್ಲಿ, ಆತನು "ದೇವರು ಸಕಲ ವಿಧವಾದ ಆಹಾರವನ್ನೂ ಉಂಟುಮಾಡಿದನು" ಎಂಬದನ್ನು ತಿಳಿಸುತ್ತಾನೆ ಮತ್ತು "ಆತನಿಂದ ಉಂಟು ಮಾಡಿದ್ದೆಲ್ಲವೂ ಒಳ್ಳೇದೇ; ದೇವರ ಸ್ತೋತ್ರಮಾಡಿ ತೆಗೆದುಕೊಳ್ಳುವ ಪಕ್ಷಕ್ಕೆ ಯಾವದನ್ನೂ ನಿಷಿದ್ಧವೆಂದು ಹೇಳತಕ್ಕದ್ದಲ್ಲ" ಎಂದು ಹೇಳುತ್ತಾನೆ (1 ತಿಮೊಥೆ 4:3, 4). ಮಾಂಸ ಸೇವನೆಯ ವಿಷಯದಲ್ಲಿ, "ದೃಢವಿರುವ" ಸಹೋದರನು ಈ ಸತ್ಯವನ್ನು ಅರ್ಥಮಾಡಿಕೊಂಡಿದ್ದನು, ಆದರೆ "ದೃಢವಿಲ್ಲದ" ಸಹೋದರನಿಗೆ ಈ ವಿಷಯದಲ್ಲಿ ತಿಳುವಳಿಕೆ ಮತ್ತು ಪರಿಜ್ಞಾನದ ಕೊರತೆಯಿತ್ತು (ನೋಡಿರಿ 1 ಕೊರಿಂಥ 8:7).

"ಮನಸ್ಸಾಕ್ಷಿ" (συνείδησις, *suneidēsis*) ಎಂಬುದಕ್ಕಿರುವ ಗ್ರೀಕ್ ಪದವು ರೋಮಾ 14:1–15:13ರಲ್ಲಿ ಕಂಡು ಬರುವದಿಲ್ಲ, ಆದರೆ ಅದರ ಭಾವನೆಯು ಇಲ್ಲಿ ಇರುತ್ತದೆ. NLTಯು 14:2ರಲ್ಲಿನ "ದೃಢವಿಲ್ಲದವವರು" ಎಂಬುದಕ್ಕೆ "ಸೂಕ್ಷ್ಮವಾದ ಮನಸ್ಸಾಕ್ಷಿಯುಳ್ಳವರು" ಎಂಬ ಭಾವಾನುವಾದವನ್ನು ಒದಗಿಸಿರುತ್ತದೆ.[11] "ದೃಢವಿಲ್ಲದ" ಸಹೋದರನು

ಮನಸ್ಸಾಕ್ಷಿಪೂರ್ವಕವಾಗಿ ಮಾಂಸವನ್ನು ತಿನ್ನುವದಕ್ಕೆ ಸಾಧ್ಯವಾಗದವನಾಗಿದ್ದನು, ಅದೇ ವೇಳೆಯಲ್ಲಿ ತಿನ್ನುವದು "ದೃಢವಿರುವ" ಸಹೋದರನ ಮನಸ್ಸಾಕ್ಷಿಯನ್ನು ಬಾಧಿಸಲಿಲ್ಲ.

**ವಚನ 3.** ಪೌಲನು ಮೊದಲು "ದೃಢವಿರುವವರನ್ನು" ಕುರಿತು ಮಾತಾಡುತ್ತಾನೆ: [ಮಾಂಸವನ್ನು] **ತಿನ್ನುವವನು** [ಮಾಂಸವನ್ನು] **ತಿನ್ನದವನನ್ನು ಹೀನೈಸಬಾರದು.** "ಹೀನೈಸಬಾರದು" ಎಂಬುದು ἐξουθενέω (*exoutheneō*) ಎಂಬ ಒಂದು ಬಲವಾದ ಪದದಿಂದ ಬಂದದ್ದು, ಅದರರ್ಥವು "ತೀರಾ ಅಸಹ್ಯಿಸುವದು," ಮತ್ತೊಬ್ಬರನ್ನು ನಗಣ್ಯವೆಂದು ಎಣಿಸುವದು ಎಂದಾಗಿರುತ್ತದೆ.[12] ಅದು ἐκ (*ek*, "ಹೊರಗೆ") ಮತ್ತು οὐδέν (*ouden*, "ಯಾವನೂ ಅಲ್ಲ") ಎಂಬ ಪದಗಳ ಸಂಯೋಜನೆಯಾಗಿರುತ್ತದೆ. ಇಲ್ಲಿ ಎಚ್ಚರಿಕೆಯು "ದೃಢವಿಲ್ಲದ" ಸಹೋದರನನ್ನು ಅಪಮೌಲ್ಯಗೊಳಿಸುವಿಕೆಯ ವಿರುದ್ಧವಾಗಿರುತ್ತದೆ.

ಪೌಲನು ಬಳಿಕ ತನ್ನ ಗಮನವನ್ನು ತಾನು "ದೃಢವಿಲ್ಲದವರು" ಎಂದು ಕರೆದವರ ಕಡೆಗೆ ತಿರುಗಿಸುತ್ತಾನೆ: [ಮಾಂಸ] **ತಿನ್ನದವನು** [ಮಾಂಸ] **ತಿನ್ನುವವನನ್ನು ದೋಷಿಯೆಂದು ಎಣಿಸಬಾರದು.** ಪೌಲನು ಈ ಅಧ್ಯಾಯದಲ್ಲಿ ದೋಷಿಯೆಂದು ಎಣಿಸುವಿಕೆ (ತೀರ್ಪು ಮಾಡುವಿಕೆ) ಕುರಿತು ಬಹಳಷ್ಟನ್ನು ಹೇಳಿದ್ದಾನೆ (14:1, 3, 4, 10, 13[13]). "ದೋಷಿಯೆಂದು ಎಣಿಸು" ಎಂಬುದು κρίνω (*krinō*) ಎಂಬ ಪದದಿಂದ ಬಂದದ್ದು, ಅದರರ್ಥವು "ತೀರ್ಮಾನಿಸುವದು,"[14] ಒಂದು ತೀರ್ಪು ಮಾಡುವದು ಎಂದಾಗಿರುತ್ತದೆ. *Krinō* ಎಂಬುದು ಯಾವಾಗಲೂ ನಿಷೇಧಾರ್ಥ ರೂಪದಲ್ಲಿ ಉಪಯೋಗಿಸಲ್ಪಟ್ಟಿರುವದಿಲ್ಲ. ಉದಾಹರಣೆಗೆ, ರೋಮಾ 14ರಲ್ಲಿ, 5ನೇ ವಚನದಲ್ಲಿ "ವೆಂದೆಣಿಸುತ್ತಾನೆ" ಮತ್ತು 13ನೇ ವಚನದಲ್ಲಿ "ತೀರ್ಮಾನಿಸಿಕೊಳ್ಳಿರಿ" ಎಂಬದಾಗಿ ಅನುವಾದಿಸಲ್ಪಟ್ಟಿದೆ. ನಾವು 16:17ರಲ್ಲಿನ ಪೌಲನ ಕಟ್ಟಪ್ಪಣೆಗೆ ಆತನ ಬಣ್ಣನೆಯಲ್ಲಿ ಸರಿಹೊಂದುವವರ ಬಗ್ಗೆ ಒಂದು ತೀರ್ಪು ಮಾಡದೆಯೇ ವಿಧೇಯರಾಗಲು ನಮಗೆ ಸಾಧ್ಯವಿರುವದಿಲ್ಲ. ಹೇಗೂ, *krinō* ಅನೇಕ ಸಾರಿ ಪ್ರತಿಕೂಲವಾದ ತೀರ್ಪು ಮಾಡುವಿಕೆ, ಟೀಕಿಸುವಿಕೆ, ತಪ್ಪು ಕಂಡುಹಿಡಿಯುವಿಕೆ, ಮತ್ತು/ಅಥವಾ ಖಂಡಿಸುವಿಕೆಯನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತದೆ—ಮತ್ತು ಇಲ್ಲಿಯೂ ಅದೇ ರೀತಿಯಲ್ಲಿ ಬಳಸಲಾಗಿದೆ. 14:3ರಲ್ಲಿ, AB ಯು ಹೀಗೆ ಹೇಳುತ್ತದೆ, "ತ್ಯಜಿಸುವವನು [ಮಾಂಸ ಸೇವನೆಯನ್ನು] ತಿನ್ನುವವನನ್ನು ಟೀಕಿಸದಿರಲಿ ಮತ್ತು ತೀರ್ಪು ಮಾಡದಿರಲಿ." (ನೋಡಿರಿ *ಹೆಚ್ಚಿನ ಅಧ್ಯಯನಕ್ಕಾಗಿ: "ತೀರ್ಪುಮಾಡು"* (Krinō) *ಕುರಿತ ಪದ ಅಧ್ಯಯನ, ಪುಟಗಳು* 140-42).

ಒಬ್ಬನು ಸಹೋದರನ ಮೇಲೆ ತೀರ್ಪು ಮಾಡುವದರಿಂದ ದೂರವಿರತಕ್ಕದ್ದು, ಅವನನ್ನು **ದೇವರು . . . ಸೇರಿಸಿಕೊಂಡಿದ್ದಾನಲ್ಲಾ.** ಸಹೋದರನು ಕ್ರೈಸ್ತನಾದಾಗ, ದೇವರು ಆತನನ್ನು ತನ್ನ ಮಗುವಾಗಿ ಸೇರಿಸಿಕೊಂಡನು. "ಸೇರಿಸಿಕೊಂಡನು" ಎಂಬುದು *proslambanō* ಎಂಬ ಪದದ ಅನುವಾದವಾಗಿರುತ್ತದೆ, 1ನೇ ವಚನದಲ್ಲಿ ಉಪಯೋಗಿಸಲ್ಪಟ್ಟಿರುವದ ಅದೇ ಗ್ರೀಕ್ ಪದವಾಗಿದೆ. ಈ ಆಲೋಚನೆಯು ವಾಕ್ಯಖಂಡದಲ್ಲಿ ಪರೋಕ್ಷವಾಗಿ ವ್ಯಕ್ತಗೊಂಡಿರುತ್ತದೆ: ದೇವರು ಆತನನ್ನು ಸೇರಿಸಿಕೊಂಡಿರುವದಾದಲ್ಲಿ, ನಾವು ಸಹ ಸೇರಿಸಿಕೊಳ್ಳತಕ್ಕದ್ದು. Jimmy Allenನು "ಕ್ರಿಸ್ತನು . . . ಕುಂದುಕೊರತೆಗಳು ಎದ್ದು ಕಾಣುವಂಥ ನಮ್ಮನ್ನು ಸ್ವಾಗತ ಮಾಡಿಕೊಂಡಿದ್ದಾನೆ," ಎಂದು ಹೇಳಿದ ಬಳಿಕ ನಾವು ಸಹ "ಪರಸ್ಪರರ ವಿಷಯದಲ್ಲಿ ಅದೇ ಕಾಳಜಿಯನ್ನು ಹೊಂದಿರಬೇಕು" ಎನ್ನುತ್ತಾನೆ.[15]

ನಾವು ಕ್ರೈಸ್ತೇತರರರನ್ನು ನಮ್ಮ ಅನ್ಯೋನ್ಯತೆಯೊಳಗೆ ಸೇರಿಸಿಕೊಳ್ಳಬೇಕೆಂದು ಪೌಲನು ಹೇಳುತ್ತಿಲ್ಲ. ಆತನು ಸೂಚಿಸಿ ಹೇಳಿದ ಜನರು ದೇವರಿಂದ ಸ್ವೀಕರಿಸಿಕೊಳ್ಳಲ್ಪಟ್ಟವರಾಗಿದ್ದರು (14:3): ದೇವರ ಸೇವಕರು (14:4), ಕರ್ತನಿಗೆ ಸೇರಿದವರು (14:8), ಮತ್ತು ಕ್ರಿಸ್ತನಲ್ಲಿನ ಸಹೋದರರು (14:10).

**ವಚನ 4.** ಪೌಲನು ಬಳಿಕ ತನ್ನ ವಾಚಕರಿಗೆ ಹೀಗೆ ಕೇಳುತ್ತಾನೆ, **ಮತ್ತೊಬ್ಬನ ಸೇವಕನ ವಿಷಯವಾಗಿ ತೀರ್ಪುಮಾಡುವದಕ್ಕೆ ನೀನು ಯಾರು?** "ಸೇವಕನು" ಎಂಬುದರ ಅನುವಾದಿತ ಪದವು (οἰκέτης, *oiketēs*) ಸರ್ವಸಮಾನ್ಯವಾಗಿ "ಸೇವಕ" ಎಂಬುದಕ್ಕಿರುವ ಪದದಿಂದ ಬಂದದ್ದಾಗಿರುವದಿಲ್ಲ; ಇದು "ಮನೆ" (οἶκος, *oikos*)[16] ಎಂಬ ಪದದಿಂದ ಹುಟ್ಟಿದ್ದಾಗಿದೆ. *Oiketēs* ಎಂಬುದು ಮನೆಯ ನೌಕರನನ್ನು ಸೂಚಿಸುತ್ತದೆ.

ಅಪೊಸ್ತಲನು ತನ್ನ ಪ್ರಶ್ನೆಯ ಬಳಿಕ ಈ ಹೇಳಿಕೆಯನ್ನು ನೀಡುತ್ತಾನೆ: **ಅವನು ನಿರ್ದೋಷಿಯಾಗಿ ನಿಂತರೂ ದೋಷಿಯಾಗಿ ಬಿದ್ದರೂ ಅವನ ಯಜಮಾನನಿಗೇ ಸೇರಿದ್ದು.** ಸಂದೇಶವನ್ನು ಇಲ್ಲಿ ಸರಳವಾಗಿ ವಿವೇಚಿಸಬಹುದಾಗಿದೆ. ನಾವು ದೇವರ ಸೇವಕರು, ಮತ್ತು ನಮ್ಮ ಸೇವೆಯ ಕುರಿತಾಗಿ ಒಂದು ದಿನ ನಾವು ದೇವರ ಮುಂದೆ ಲೆಕ್ಕವನ್ನು ಒಪ್ಪಿಸುವವರಾಗಿರುತ್ತೇವೆ (ನೋಡಿರಿ 14:10-12). "ಯಾರೂ ನಿಲ್ಲವರು ಅಥವಾ ಬೀಳುವರು" ಎಂಬುದನ್ನು ನಿರ್ಧರಿಸುವಾತನು ದೇವರೇ. ಅದರ ಮಧ್ಯದಲ್ಲಿ, ಒಬ್ಬರ ಮೇಲೊಬ್ಬರು ತೀರ್ಪು ಮಾಡುತ್ತಾ ಕುಳಿತುಕೊಳ್ಳುವದು ನಮ್ಮ ಕೆಲಸವೇ ಅಲ್ಲ.[17] ನಾವು ಮುಯ್ಯಿಗೆ ಮುಯ್ಯಿ ತೀರಿಸಬಾರದು ಯಾಕೆಂದರೆ ಅದು ದೇವರ ಕೆಲಸ ಎಂದು ರೋಮಾ 12:19 ಹೇಳುತ್ತದೆ. ನಾವು ತೀರ್ಪು ಸಹ ಮಾಡಬಾರದು ಯಾಕೆಂದರೆ ಅದು ದೇವರ ಜವಾಬ್ದಾರಿಯಾಗಿರುತ್ತದೆಂದು ಈ ವಚನವು ಹೇಳುತ್ತದೆ.

ಪೌಲನು ಭರವಸೆಯ ಟಿಪ್ಪಣಿಯನ್ನು ಸೇರ್ಪಡೆಗೊಳಿಸುತ್ತಾನೆ. "ಅವನು ನಿರ್ದೋಷಿಯಾಗಿ ನಿಂತರೂ ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೇ ಸೇರಿದ್ದು" ಎಂದು ಹೇಳಿದ ಬಳಿಕ, ಆತನು ಹೀಗೆ ಮುಂದುವರೆಸುತ್ತಾನೆ, **ಅವನು** [ಕರ್ತನ ಸೇವಕನು] **ನಿರ್ದೋಷಿಯಗಿ ನಿಲ್ಲಿಸಲ್ಪಡುವನು, ಅವನನ್ನು ನಿಲ್ಲಿಸುವದಕ್ಕೆ ಕರ್ತನು ಶಕ್ತನಾಗಿದ್ದಾನೆ.** ಇಲ್ಲಿ ಪ್ರಶ್ನೆಯಲ್ಲಿರುವ ಸೇವಕನು ಕರ್ತನಿಗೆ ಶ್ರದ್ಧೆಯಿಂದ ಸೇವೆಯನ್ನು ಮಾಡುವವನಾಗಿರುತ್ತಾನೆಂದು ಭಾವನೆಯನ್ನು ಈ ಹೇಳಿಕೆಯು ತೋರಿಸುತ್ತದೆ. ಆತನ ಸಹೋದರರು ಅವನನ್ನು ತುಚ್ಛವಾಗಿ ಕಂಡರೂ ಅಥವಾ ಅವನನ್ನು ಸೇರಿಸಿಕೊಳ್ಳದಿದ್ದರೂ, ದೇವರಂತೂ ಅವನನ್ನು ಸ್ವಾಗತಿಸುತ್ತಾನೆ ಮತ್ತು ದೃಢವಾಗಿ ನಿಲ್ಲುವಂತೆ ಅವನನ್ನು ಶಕ್ತಗೊಳಿಸುವನೆಂಬುದೇ ಪೌಲನು ಹೇಳಲಿಚ್ಚಿಸುವ ಅಂಶವಾಗಿರುತ್ತದೆ.

## ವಿಶೇಷ ದಿನಗಳ ವಿಷಯದಲ್ಲಿ (14:5-9)

**5ಒಬ್ಬನು ಒಂದು ದಿನಕ್ಕಿಂತ ಮತ್ತೊಂದು ದಿನವನ್ನು ವಿಶೇಷವೆಂದೆಣಿಸುತ್ತಾನೆ; ಮತ್ತೊಬ್ಬನು ಎಲ್ಲಾ ದಿವಸಗಳನ್ನೂ ವಿಶೇಷವೆಂದೆಣಿಸುತ್ತಾನೆ; ಪ್ರತಿಯೊಬ್ಬನು ತನ್ನ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು. 6ದಿನವನ್ನು ಗಣ್ಯಮಾಡುವವನು ಕರ್ತನಿಗಾಗಿ ಅದನ್ನು ಗಣ್ಯಮಾಡುತ್ತಾನೆ. ತಿನ್ನುವವನು ಕರ್ತನಿಗಾಗಿ ತಿನ್ನುತ್ತಾನೆ; ಅವನು ದೇವಸ್ತೋತ್ರ ಮಾಡುತ್ತಾನಲ್ಲಾ. ತಿನ್ನದವನು ಸಹ ಕರ್ತನಿಗಾಗಿಯೇ ತಿನ್ನದೆ ದೇವರ ಸ್ತೋತ್ರ**

**ಮಾಡುತ್ತಾನೆ. [7]ನಮ್ಮಲ್ಲಿ ಒಬ್ಬನಾದರೂ ತನಗಾಗಿ ಬದುಕುವದೂ ಇಲ್ಲ, ತನಗಾಗಿ ಸಾಯುವದೂ ಇಲ್ಲ. [8]ನಾವು ಬದುಕಿದರೆ ಕರ್ತನಿಗಾಗಿ ಬದುಕುತ್ತೇವೆ; ಸತ್ತರೆ ಕರ್ತನಿಗಾಗಿ ಸಾಯುತ್ತೇವೆ; ಬದುಕಿದರೂ ಸತ್ತರೂ ನಾವು ಕರ್ತನವರೇ. [9]ಯಾಕೆಂದರೆ ಸತ್ತವರಿಗೂ ಜೀವಿಸುವವರಿಗೂ ಒಡೆಯನಾಗಿರಬೇಕೆಂತಲೇ ಕ್ರಿಸ್ತನು ಸತ್ತು ಜೀವಿತನಾದನು.**

**ವಚನ 5.** 2 ಮತ್ತು 3 ವಚನಗಳಲ್ಲಿ, ಪೌಲನು ಮಾಂಸವನ್ನು ತಿನ್ನುವ ಅಥವಾ ತಿನ್ನದಿರುವ ವಿವಾದಾಂಶವನ್ನು ಪರಿಚಯಿಸಿದನು. 5ನೇ ವಚನದಲ್ಲಿ, ಆತನು ಅಭಿಪ್ರಾಯದಲ್ಲಿನ ಭೇದಗಳ ಎರಡನೆಯ ಉದಾಹರಣೆಯನ್ನು ಕುರಿತು ಮಾತಾಡುತ್ತಾನೆ. ವಿಚಾರವು ಹೀಗೆ ಆರಂಭಗೊಳ್ಳುತ್ತದೆ, **ಒಬ್ಬನು ಒಂದು ದಿನಕ್ಕಿಂತ ಮತ್ತೊಂದು ದಿನವನ್ನು ವಿಶೇಷವೆಂದೆಣಿಸುತ್ತಾನೆ; ಮತ್ತೊಬ್ಬನು ಎಲ್ಲಾ ದಿವಸಗಳನ್ನೂ ವಿಶೇಷವೆಂದೆಣಿಸುತ್ತಾನೆ.** "ಒಂದು ದಿನಕ್ಕಿಂತ ಮತ್ತೊಂದು ದಿನವನ್ನು" ವಿಶೇಷವೆಂದೆಣಿಸಿದವರು ಚಿಕ್ಕಂದಿನಿಂದಲೂ ಸಬ್ಬತ್ ಮತ್ತು ಇತರೆ ಪವಿತ್ರ ದಿನಗಳನ್ನು ಆಚರಿಸುವವರಾಗಿ ಬೆಳೆಸಲ್ಪಟ್ಟಿದ್ದ ಯೆಹೂದ್ಯ ಕ್ರೈಸ್ತರೇ ಆಗಿದ್ದರೆಂದು ಸಾಮಾನ್ಯವಾಗಿ ಊಹಿಸಿಕೊಳ್ಳಲಾಗುತ್ತದೆ. ಹೇಗೂ, ಅನ್ಯಜನಾಂಗದವರಿಗೆ ಸಹ ವಿಶೇಷ ದಿನಗಳು ಇದ್ದವು. ವಿವರಣೆಗೆ ಮತ್ತು ಅನ್ವಯಿಸುವಿಕೆಗೆ ಸಹಾಯಕವಾಗಲೆಂಬುದಕ್ಕಾಗಿ, ಯೆಹೂದ್ಯ ಕ್ರೈಸ್ತನೊಬ್ಬನ ಮತ್ತು ಸಬ್ಬತ್ ದಿನದ ಉದಾಹರಣೆಯನ್ನು ಬಳಸಲಾಗುವದು, ಆದರೆ ಪೌಲನು ಯಾರನ್ನು ಉದ್ದೇಶಿಸಿ (ಯೆಹೂದ್ಯರೋ ಅಥವಾ ಅನ್ಯಜನಾಂಗದವರೋ) ಬರೆದನೋ ಎಂಬುದರ ಬಗ್ಗೆ ನಾವು ಖಚಿತವಾಗಿ ಹೇಳುವದಕ್ಕಾಗುವದಿಲ್ಲ ಎಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು.

ನೀವು ಜೀವತವೆಲ್ಲಾ ಸಬ್ಬತ್ ದಿನವನ್ನು ಆಚರಿಸುತ್ತಾ ಬಂದಿರುವ ಒಬ್ಬ ಯೆಹೂದ್ಯನಾಗಿದ್ದೀರೆಂಬಂತೆ ಊಹಿಸಿಕೊಳ್ಳಿರಿ. ನೀವು ಏಳನೆಯ ದಿನದ ವಿಷಯದಲ್ಲಿ ಯೆಹೂದ್ಯ ಧರ್ಮಶಾಸ್ತ್ರದ ಮತ್ತು ಸಂಪ್ರದಾಯದ ಬಹುಸಂಖ್ಯೆಯ ಬೇಕುಬೇಡಗಳನ್ನೆಲ್ಲಾ ಆಚರಿಸುತ್ತಾ ಬಂದವರಾಗಿದ್ದಿರಿ. ಬಳಿಕ ನೀವು ಒಬ್ಬ ಕ್ರೈಸ್ತನಾಗಿ ಪರಿವರ್ತನೆಗೊಂಡಿರಿ. ನೀವು ಈಗ ನಿಮ್ಮ ಜೊತೆ ಕ್ರೈಸ್ತರ ಸಂಗಡ ವಾರದ ಮೊದಲ ದಿನದಂದು ದೇವಾರಾಧನೆಯನ್ನು ಮಾಡುತ್ತಿರುವಿರಾದರೂ, ದಶಕಗಳಿಂದ ಆಚರಿಸುತ್ತಾ ಬಂದಿರುವ ಸಬ್ಬತ್.ನ್ನು ತಳ್ಳಿಹಾಕುವದು ಕಠಿಣವೆಂದೆಣಿಸುವದಿಲ್ಲವೋ? ನೀವು ಏಳನೆಯ ದಿನದ ಬೆಳಿಗ್ಗೆ ಎಚ್ಚರಗೊಳ್ಳುವಾಗ ನಿಮಗೆ ಹೇಗನ್ನಿಸಬಹುದು? ನೀವು ಆ ದಿನವನ್ನು "ಇದು ಇನ್ನೊಂದು ದಿನದಂತಷ್ಟೆ" ಎಂದು ಯೋಚಿಸಿಕೊಳ್ಳುವಿರೋ? ಒಬ್ಬ ಯೆಹೂದಿ ಕ್ರೈಸ್ತನು "ಒಂದು ದಿನಕ್ಕಿಂತ ಮತ್ತೊಂದು ದಿನವನ್ನು" ವಿಶೇಷವೆಂದೆಣಿಸುತ್ತಾನೆಂಬುದನ್ನು ತಿಳಿಯುವದು ಸುಲಭವಾಗಿರುತ್ತದೆ.

ಇತರರು "ಎಲ್ಲಾ ದಿವಸಗಳನ್ನೂ" ವಿಶೇಷವೆಂದೆಣಿಸುತ್ತಾರೆ. ಅವರು ಹಳೆಯ ಒಡಂಬಡಿಕೆಯ ನೇಮನಿಷ್ಠೆಗಳು ಅಳಿಸಿಹಾಕಲ್ಪಟ್ಟಿವೆ, "ಶಿಲುಬೆಗೆ ಜಡಿದು ಇಲ್ಲದಂತಾಗ" ಮಾಡಲ್ಪಟ್ಟಿವೆ ಎಂಬುದನ್ನು ಅವರು ಅರ್ಥಮಾಡಿಕೊಂಡಿದ್ದರು (ಕೊಲೊಸ್ಸೆ 2:14; ನೋಡಿರಿ ಎಫೆಸ 2:15). ಸಬ್ಬತ್ ದಿನವನ್ನು ಆಚರಿಸದಿರುವದಕ್ಕೆ ಯಾರನ್ನೂ ತೀರ್ಪು (ದೋಷಿಯೆಂದು ತೀರ್ಮಾನಿಸುವಿಕೆಯನ್ನು) ಮಾಡಬಾರದಾಗಿತ್ತು (ಕೊಲೊಸ್ಸೆ 2:16).

ರೋಮಾ 14ರಲ್ಲಿ, ಈ ಒಂದು ನಿರ್ದಿಷ್ಟವಾದ ವಿವಾದಾಂಶದ ಮೇಲೆ ಒಂದು ನಿಲುವವನ್ನು "ದೃಢವಿಲ್ಲದ" ಅಥವಾ "ದೃಢವಿರುವ" ಎಂದಾಗಲಿ ಕರೆಯಲಿಲ್ಲ, ಆದರೆ

ಗಲಾತ್ಯ 4:9-11ರಲ್ಲಿ ಆತನು ವಿಶೇಷ ದಿನಗಳ ಆಚರಿಸುವ ವಿಷಯದಲ್ಲಿ ಕೆಲವರನ್ನು ಖಂಡಿಸುತ್ತಾನೆ. ಆದ್ದರಿಂದ ಈ ಪ್ರಶ್ನೆಯ ವಿಷಯವಾಗಿ, ನಾವು ಇಲ್ಲಿ ಭಾವಿಸಿಕೊಳ್ಳಬಹುದಾದ್ದೇನೆಂದರೆ, ವಿಶೇಷ ದಿನಗಳನ್ನು ಆಚರಿಸುವವನು "ದೃಢವಿಲ್ಲದ" ಸಹೋದರನಾಗಿದ್ದರೆ, ಆಚರಿಸದಿದ್ದವನು "ದೃಢವಾದ" ಸಹೋದರನಾಗಿದ್ದನು ಎಂಬದೇ.

ಪೌಲನು ವಿಶೇಷ ದಿನಗಳ ಆಚರಣೆಯ ವಿಷಯವಾಗಿ ಗಲಾತ್ಯದ ಕ್ರೈಸ್ತರನ್ನು ಅಷ್ಟೊಂದು ತೀಕ್ಷ್ಣವಾಗಿ ಖಂಡನೆ ಮಾಡುತ್ತಾನೆ, ಆದರೆ ಈ ರೋಮಾಪುರದಲ್ಲಿನ ಕ್ರೈಸ್ತರಿಗೆ ವಿಶೇಷ ದಿನಗಳನ್ನು ಆಚರಿಸುವವರನ್ನು ಸೇರಿಸಿಕೊಳ್ಳಿರೆಂದು ಏಕೆ ಹೇಳಿದನೆಂದು ಕೆಲವರು ಚಕಿತಗೊಳ್ಳುತ್ತಾರೆ. ಗಲಾತ್ಯದಲ್ಲಿ, ಮೋಶೆಯ ಧರ್ಮಶಾಸ್ತ್ರವನ್ನು (ಯೆಹೂದ್ಯರ ಪವಿತ್ರ ದಿನಗಳ ಆಚರಣೆಯೂ ಸೇರಿದಂತೆ) ಕೈಕೊಂಡು ನಡೆಯುವದು ರಕ್ಷಣೆ ಹೊಂದುವದಕ್ಕೆ ಪೂರ್ವಭಾವಿ ಷರತ್ತಾಗಿರುತ್ತದೆ ಎಂದು ಬೋಧಿಸಲಾಗುತ್ತಿತ್ತು (ಗಲಾತ್ಯ 5:1-4; ನೋಡಿರಿ ಅಪೊಸ್ತಲರ ಕೃತ್ಯಗಳು 15:1). ಬಹುಶಃ ರೋಮಾಪುರದಲ್ಲಿ ಕೆಲವರು ಮತ್ತೊಬ್ಬರ ಮೇಲೆ ಆಚರಣೆಯನ್ನು ಒತ್ತಾಯದಿಂದ ಹೇರದೆ ಸ್ವತಃ ತಾವು ವೈಯಕ್ತಿಕ ಮನವರಿಕೆಯ ವಿಚಾರವಾಗಿ ವಿಶೇಷ ದಿನವನ್ನು ಆಚರಿಸುತ್ತಿದ್ದರೆಂದು ತೋರುತ್ತದೆ.

ಈ ವಿಷಯದಲ್ಲಿ "ದೃಢವಿರುವ" ಸಹೋದರನ ನಿಲುವಿನ ಕುರಿತಾಗಿ ಇನ್ನು ಒಂದೆರಡು ಮಾತುಗಳನ್ನು ಹೇಳುವದು ಅಗತ್ಯವಿರುತ್ತದೆ. NASBಯು ಆತನು "ಎಲ್ಲಾ ದಿವಸಗಳನ್ನು ಒಂದೇ ರೀತಿ" ಎಣಿಸುತ್ತಾನೆ ಎಂದು ಹೇಳುತ್ತದೆ. ಈ ಮಾತುಗಳು ಎಲ್ಲಾ ದಿನಗಳನ್ನು ಆತನು ಸಾಧಾರಣವೆಂಬಂತೆ ಎಣಿಸಿದನು, ಆತನು ಯಾವ ದಿನವೂ ವಿಶೇಷವೆಂದು ಭಾವಿಸಿಕೊಳ್ಳಲಿಲ್ಲ ಎಂಬ ಅನಿಸಿಕೆಯನ್ನು ಉಂಟು ಮಾಡಬಹುದಾಗಿದೆ. ನಾವು ಒಂದು ವೇಳೆ "ಒಂದೇ ರೀತಿ" ಎಂಬ ಪದವನ್ನು ಕೈಬಿಟ್ಟರೆ ನಮಗೆ ಅರ್ಥಮಾಡಿಕೊಳ್ಳಲು ಸಹಾಯವಾಗಬಹುದು, ಆ ಪದವು ಅನುವಾದಕರಿಂದ ಸೇರ್ಪಡೆಗೊಳಿಸಲ್ಪಟ್ಟದ್ದಾಗಿದೆ. ಆಗ ನಮಗೆ "ಪ್ರತಿಯೊಂದು ದಿನವನ್ನು ಎಣಿಸುತ್ತಾನೆ" ಎಂಬದಷ್ಟೆ ಉಳಿಯುತ್ತದೆ. "ಎಣಿಸುತ್ತಾನೆ" ಎಂಬುದು *krinō* ಎಂಬ ಪದದಿಂದ ಬಂದದ್ದು, ಅದು ಈ ವಿಚಾರದಲ್ಲಿ "ಅನುಮೋದಿರು, ಗೌರವ ತೋರು" ಎಂಬರ್ಥವನ್ನು ಕೊಡುತ್ತದೆ.[18] ರೋಮಾ 14:5ರಲ್ಲಿ ಅದರರ್ಥವು ಏನೆಂದರೆ "ಪ್ರತಿ ದಿನವು . . . ಪವಿತ್ರವೆಂದು ಪರಿಗಣಿಸಲ್ಪಡುತ್ತದೆ" ಎಂಬದೆ.[19]

ಯಾರಾದರೂ ಹೀಗೆ ಕೇಳಬಹುದು, "ಆದರೆ ವಾರದ ಮೊದಲ ದಿನವು ಕ್ರೈಸ್ತರಿಗೆ ಪವಿತ್ರವಾದ ದಿನವೆಂದು ಭಾವಿಸಿಕೊಂಡಿದ್ದೆನು." ದೇವರು ವಾರದ ಮೊದಲನೆಯ ದಿನವನ್ನು ಆರಾಧನೆಗೋಸ್ಕರ ಪವಿತ್ರ ದಿನವಾಗಿ ಪ್ರತ್ಯೆಕಿಸಿದನೆಂಬುದು ಸತ್ಯವೇ;[20] ಆ ದಿನದಲ್ಲಿಯೇ ನಾವು ಕರ್ತನ ಭೋಜನದಲ್ಲಿ ಪಾಲುಗಾರರಾಗುವವರಾಗಿ "ರೊಟ್ಟಿ ಮುರಿಯುವದಕ್ಕೆ" ಕೂಡಿ ಬರುತ್ತೇವೆ (ಅಪೊಸ್ತಲರ ಕೃತ್ಯಗಳು 20:7).[21] ಹೇಗಿದ್ದರೂ, ನಾವು ವಾರದ ಮೊದಲನೆಯ ದಿನವು ಮಾತ್ರವೇ ಪವಿತ್ರವಾದದ್ದು ಎಂದು ಯೋಚಿಸಬಾರದು. ಪ್ರತಿ ದಿನವನ್ನು ಸಹ ಕರ್ತನಿಗೋಸ್ಕರ ಪ್ರತಿಷ್ಠಿಸಬೇಕು (ಪ್ರತ್ಯೆಕಿಸಿಡಬೇಕು). ನಮಗೆ ಸೋಮವಾರದಿಂದ ಶನಿವಾರದ ವರೆಗಿನ ದಿನಗಳು "ಪವಿತ್ರ ದಿನಗಳು" ಅಲ್ಲವಾದರೆ, ಭಾನುವಾರವು ಪವಿತ್ರವಾಗುವದು ಅಸಂಭವವಾಗಿರುತ್ತದೆ.

ಅದು ನಮ್ಮನ್ನು ಅಭಿಪ್ರಾಯ ಸಂಬಂಧಿತ ವಿಷಯಗಳ ಕುರಿತ ಒಂದು ಪ್ರಾಮುಖ್ಯವಾದ ಹೇಳಿಕೆಗೆ ತಂದು ನಿಲ್ಲಿಸುತ್ತದೆ: **ಪ್ರತಿಯೊಬ್ಬನು ತನ್ನ ತನ್ನ ಮನಸ್ಸಿನಲ್ಲಿ**

**ನಿಶ್ಚಯಿಸಿಕೊಂಡಿರಬೇಕು.** "ನಿಶ್ಚಯಿಸಿಕೊಂಡಿರಬೇಕು" ಎಂಬುದು πληροφορέω (*plērophoreō*) ಎಂಬ ಸಂಯುಕ್ತ ಪದದಿಂದ ಬಂದದ್ದು, ಅದರರ್ಥವು "ಪೂರ್ಣ ಅಳತೆಯಲ್ಲಿ." ಅದು πλήρης (*plērēs*, "ಪೂರ್ಣ") ಎಂಬುದನ್ನು φέρω (*pherō*, "ಹೊತ್ತುಕೊಳ್ಳುವರು") ಎಂಬ ಪದದೊಂದಿಗೆ ಒಂದುಗೂಡಿಸುವದಾಗಿದೆ. ರೋಮಾ 4:21ರಲ್ಲಿ, ಈ ಪದವು "ಪೂರಾ ಭರವಸವಿಟ್ಟು" ಎಂದು ಅನುವಾದಿಸಲ್ಪಟ್ಟಿದೆ. 14:5ರಲ್ಲಿ, KJVಯು "ಪೂರ್ಣ ಮನವರಿಕೆಗೊಂಡು" ಎಂದು ಹೊಂದಿರುತ್ತದೆ. NIRV ಹೀಗೆ ಹೇಳುತ್ತದೆ, "ಪ್ರತಿಯೊಬ್ಬನು ತನ್ನ ಮನಸ್ಸಿನಲ್ಲಿ ಸಂಪೂರ್ಣವಾಗಿ ನಿಶ್ಚಯತೆ ಹೊಂದಿರಬೇಕು."

ಕೆಲವರು ಭಾವಿಸಿಕೊಳ್ಳುವದೇನೆಂದರೆ, ಒಂದು ವಿವಾದಾಂಶವು ಅಭಿಪ್ರಾಯದ ವ್ಯಾಪ್ತಿಯಲ್ಲಿರುತ್ತದೆಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲ್ಪಟ್ಟರೆ, ಅವರು ಅದರ ಬಗ್ಗೆ ತಲೆಗೆ ಹಚ್ಚಿಕೊಳ್ಳುವ ಅಗತ್ಯವಿರುವದಿಲ್ಲ ಎಂಬದೆ. ಪೌಲನು ವಿಷಯವು ಹೀಗಿರುವದಿಲ್ಲ ಎಂಬುದನ್ನು ತೋರಿಸುತ್ತಾನೆ. ಯಾವದೇ ವಿವಾದಾಂಶದ ವಿಷಯದಲ್ಲಿ, ನಾವು ಆಲೋಚಿಸಬೇಕು, ಅಧ್ಯಯನ ಮಾಡಬೇಕು, ಪ್ರಾರ್ಥಿಸಬೇಕು, ಮತ್ತು ನಮ್ಮ ಮನಸ್ಸುಗಳಲ್ಲಿ ನಾವೇ ನಿಶ್ಚಯ ಪಡಿಸಿಕೊಳ್ಳಬೇಕು. ಈ ವಿಷಯದಲ್ಲಿ ನಮಗಾಗಿ ದೇವರ ಚಿತ್ತವೇನೆಂಬುದರ ಬಗ್ಗೆ ನಾವು ಪೂರ್ಣವಾಗಿ "ನಿಶ್ಚಯಿಸಿಕೊಂಡಿರಬೇಕು." ಅದು ಅಭಿಪ್ರಾಯದ ವ್ಯಾಪ್ತಿಯೊಳಗಿದ್ದಲ್ಲಿ, ನಾವು ನಮ್ಮ ನಿರ್ಣಯಗಳನ್ನು ಇತರರ ಮೇಲೆ ಕಡ್ಡಾಯಗೊಳಿಸಬಾರದು. ಹೇಗಿದ್ದರೂ, ಕರ್ತನನ್ನು ಘನಪಡಿಸುವದಕ್ಕೆ ಸಮರ್ಪಿತವಾಗಿರುವ ಜೀವಿತವನ್ನ ನಡಿಸುವದಕ್ಕೆ ವೈಯಕ್ತಿಕವಾದ ನಿಶ್ಚಿತಾಭಿಪ್ರಾಯಗಳು ಅತ್ಯಾವಶ್ಯಕವಾಗಿರುತ್ತವೆ.

**ವಚನ 6.** ಅದೇ ವೇಳೆಯಲ್ಲಿ, ಅಭಿಪ್ರಾಯ ಸಂಬಂಧಿತ ವಿಷಯಗಳಲ್ಲಿ ನಮ್ಮೊಂದಿಗೆ ಪ್ರಜ್ಞಾಪೂರ್ವಕವಾಗಿಯೇ ಭಿನ್ನಾಭಿಪ್ರಾಯ ಹೊಂದಿರುವವರ ಬಗ್ಗೆ ನಾವು ತೀರ್ಪು ಅಥವಾ ದೋಷಿಯೆಂದು ತೀರ್ಮಾನಿಸುವದನ್ನು ಮಾಡಕೂಡದು. ಏಕೆ? ಒಬ್ಬ ಸಹೋದರನನ್ನು ನಾವು ತೀರ್ಪು ಮಾಡಬಾರದು ಎಂಬದಕ್ಕೆ 6ನೇ ವಚನವು ಒಂದು ಕಾರಣವನ್ನು ನೀಡುತ್ತದೆ: ಯಾಕೆಂದರೆ ನಾವಿಬ್ಬರೂ ಕರ್ತನನ್ನು ಮಹಿಮೆ ಪಡಿಸುವದಕ್ಕಾಗಿಯೇ ಶ್ರಮಿಸುತ್ತಿದ್ದೇವೆ. ಪೌಲನು ಹೀಗೆ ಹೇಳುತ್ತಾನೆ, **ದಿನವನ್ನು ಗಣ್ಯಮಾಡುವವನು ಕರ್ತನಿಗಾಗಿ ಅದನ್ನು ಗಣ್ಯಮಾಡುತ್ತಾನೆ.** ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನು ಅದನ್ನು ಕರ್ತನ ಪ್ರಯೋಜನಾರ್ಥವಾಗಿ ಮಾಡುತ್ತಿದ್ದಾನೆಯೇ ಹೊರತು ತನ್ನ ಸ್ವಂತ ಪ್ರಯೋಜನಾರ್ಥವಾಗಿ ಅಲ್ಲ. JB ತರ್ಜುಮೆಯು ಆತನು "ಕರ್ತನ ಮಹಿಮೆಗೋಸ್ಕರ ಅದನ್ನು ಮಾಡುತ್ತಾನೆ" ಎಂದು ಹೇಳುತ್ತದೆ. ಇಲ್ಲಿ ಭಾವಿಸಿಕೊಳ್ಳಲ್ಪಡುವದೇನೆಂದರೆ ದಿನವನ್ನು ಗಣ್ಯಮಾಡುವವನು ಮನಸ್ಸಿನಲ್ಲಿ ಭಕ್ತಿಯ ಉದ್ದೇಶವನ್ನು ಹೊಂದಿದ್ದಾನೆ ಎಂಬದೆ. ಯಾವಾಗಲೂ ಅದೇ ರೀತಿಯಲ್ಲಿಯೇ ಇರದಿರಬಹುದು, ಆದರೆ ಪ್ರೀತಿಯು ಯಾವಾಗಲೂ ಅತ್ಯುತ್ತಮವಾದದ್ದನ್ನೇ ಭಾವಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತದೆ.[22]

ಗ್ರೀಕ್ ವಾಕ್ಯವು ದಿನವನ್ನು ಗಣ್ಯಮಾಡದ ವ್ಯಕ್ತಿಯ ಬಗ್ಗೆ ಉಲ್ಲೇಖಿಸುವದಿಲ್ಲ; ಬದಲಾಗಿ, ಪೌಲನು ಮಾಂಸವನ್ನು ತಿನ್ನುವ ಅಥವಾ ತಿನ್ನದಿರುವದರ ಕುರಿತ ತನ್ನ ಪ್ರಾಥಮಿಕ ಉದಾಹರಣೆಯೆಡೆಗೆ ಮುಂದಕ್ಕೆ ಸಾಗುತ್ತಾನೆ. ಹೇಗೂ, ನಾವು ಸನ್ನಿವೇಶದಿಂದ

ಅರ್ಥೈಸಿಕೊಳ್ಳಬಹುದೇನೆಂದರೆ ದಿನವನ್ನು ಗಣ್ಯಮಾಡದವನು ಸಹ ತಾನು "ಕರ್ತನಿಗಾಗಿ ಮಾಡುವ" ಕಾರ್ಯದಿಂದಾಗಿ ಆ ತೀರ್ಮಾನ ಹೊಂದಿರುತ್ತಾನೆ ಎಂಬದೆ.[23]

6ನೇ ವಚನದ ನಂತರದ ಭಾಗದಲ್ಲಿ, ಪೌಲನು ಅಧ್ಯಾಯದ ಮೊದಲಲ್ಲಿ ಪರಿಚಯಿಸಿದ ಉದಾಹರಣೆಗೆ ಹಿಂದಿರುಗುತ್ತಾನೆ. ಆತನು ಮಿಕ್ಕ ತನ್ನ ಚರ್ಚೆಯುದ್ದಕ್ಕೂ ಈ ಉದಾಹರಣೆ ಬಳಸುವದನ್ನು ಮುಂದುವರೆಸುತ್ತಾನೆ (ನೋಡಿರಿ 14:15, 17, 20, 21, 23): [ಮಾಂಸ] **ತಿನ್ನುವವನು ಕರ್ತನಿಗಾಗಿ** [ಕರ್ತನನ್ನು ಘನಪಡಿಸಲು] **ತಿನ್ನುತ್ತಾನೆ; ಅವನು ದೇವಸ್ತೋತ್ರ ಮಾಡುತ್ತಾನಲ್ಲಾ.** [ಮಾಂಸ] **ತಿನ್ನದವನು**[24] **ಸಹ ಕರ್ತನಿಗಾಗಿಯೇ** [ಮಾಂಸ] **ತಿನ್ನದೆ ದೇವಸ್ತೋತ್ರ ಮಾಡುತ್ತಾನೆ.** ಬೇರೆ ಮಾತುಗಳಲ್ಲಿ ಹೇಳುವದಾದರೆ, ಒಬ್ಬ ಸಹೋದರನು ರಾತ್ರಿ ಊಟಕ್ಕೆ ಮಾಂಸದ ಭೋಜನವನ್ನು ಮಾಡಿದರೆ ಮತ್ತೊಬ್ಬ ಸಹೋದರನು ಕೇವಲ ಕಾಯಿಪಲ್ಯಗಳನ್ನು ಸೇವಿಸಬಹುದು, ಆದರೆ ಇಬ್ಬರೂ ತಮ್ಮ ತಮ್ಮ ಆಹಾರಕ್ಕಾಗಿ ದೇವರಿಗೆ ಸ್ತೋತ್ರ ಮಾಡುತ್ತಾರೆ. ಇಬ್ಬರೂ ದೇವರನ್ನು ಮಹಿಮೆ ಪಡಿಸುತ್ತಾರೆ, ಮತ್ತು ಇಬ್ಬರೂ ದೇವರನ್ನು ಘನ ಪಡಿಸುವದಕ್ಕೆ ಶ್ರಮಿಸುತ್ತಾರೆ. ಹಾಗಾದರೆ, ಏಕೆ, ಅವರಿಬ್ಬರಲ್ಲಿ ಒಬ್ಬರು ಮತ್ತೊಬ್ಬರ ಮೇಲೆ ತೀರ್ಪು ಮಾಡಬೇಕು?

6ನೇ ವಚನದಲ್ಲಿನ ಪ್ರಮುಖ ಪದವೆಂದರೆ "ಕರ್ತನಿಗಾಗಿ"; ಆ ಪದವು ವಚನದಲ್ಲಿ ಮೂರು ಸಾರಿ ಕಾಣಿಸಿಕೊಳ್ಳುತ್ತದೆ. ನಮ್ಮ ಮುಖ್ಯ ಗಮನವು ಕರ್ತನ ಮೇಲೆಯೇ ಇರತಕ್ಕದ್ದು. ನಾವು ಏನನ್ನು ತಿನ್ನಬಹುದು ಅಥವಾ ತಿನ್ನಬಾರದು ಎಂಬುದಕ್ಕಿಂತಲೂ ಆತನನ್ನು ಮಹಿಮೆ ಪಡಿಸುವದು, ಘನಪಡಿಸುವದು, ಮತ್ತು ಆತನಿಗೆ ಮೆಚ್ಚಿಕೆಯುಂಟು ಮಾಡುವದು ಇವುಗಳೇ ನಮಗೆ ಅಪರಿಮಿತವಾಗಿ ಹೆಚ್ಚು ಪ್ರಾಮುಖ್ಯವಾಗಿರತಕ್ಕದ್ದು.

**ವಚನಗಳು 7, 8.** ಇತರ ಕ್ರೈಸ್ತರಿಗೆ ತೀರ್ಪು ಮಾಡಬಾರದೆಂಬುದಕ್ಕೆ ಇನ್ನೊಂದು ಕಾರಣವು ಮುಂದಿನ ಕೆಲವು ವಚನಗಳಲ್ಲಿ ಸಿಕ್ಕುತ್ತದೆ. ನಾವು ಒಬ್ಬರ ಮೇಲೊಬ್ಬರು ತೀರ್ಪು ಮಾಡಬಾರದು ಯಾಕೆಂದರೆ ನಾವೆಲ್ಲರೂ ಕರ್ತನಿಗೆ ಸೇರಿದವರಾಗಿದ್ದೇವೆ.

7ನೇ ವಚನವು ಅನೇಕರಿಗೆ ಪರಿಚಿತವಾಗಿರುತ್ತದೆ: **ನಮ್ಮಲ್ಲಿ ಒಬ್ಬನಾದರೂ ತನಗಾಗಿ ಬದುಕುವದೂ ಇಲ್ಲ, ತನಗಾಗಿ ಸಾಯುವದೂ ಇಲ್ಲ.** KJVಯಲ್ಲಿ "ನಮ್ಮಲ್ಲಿ ಯಾವನೂ ತನಗೋಸ್ಕರ ಬದುಕುವದಿಲ್ಲ, ಮತ್ತು ಯಾವ ಮನುಷ್ಯನೂ ತನಗೋಸ್ಕರ ಸಾಯುವದಿಲ್ಲ" ಎಂದಿರುತ್ತದೆ. KJVಯು ಬಳಸಿರುವ ಪದವಿನ್ಯಾಸವನ್ನು ಅನೇಕ ಸಾರಿ ನಾವು ನಮ್ಮನ್ನು ನಿಮ್ಮ ಮಾನವಜನಾಂಗದಿಂದ ಬೇರ್ಪಡಿಸಿಕೊಳ್ಳಲು ಸಾಧ್ಯವಿಲ್ಲ—ಒಳ್ಳೇದಕ್ಕಾಗಿರಲಿ ಅಥವಾ ಕೆಟ್ಟದ್ದಕ್ಕಾಗಿರಲಿ—ನಾವು ಪರಸ್ಪರರ ಮೇಲೆ ಪ್ರಭಾವವನ್ನು ಬೀರುವವರಾಗಿರುತ್ತೇವೆ ಎಂಬುದನ್ನು ಕಲಿಸುವದಕ್ಕೆ ಉಪಯೋಗಿಸಲಾಗಿರುತ್ತದೆ.[25] ಅದು ಒಂದು ಸತ್ಯವಾದ ಹೇಳಿಕೆಯೇ, ಆದರೆ ಬಹುಶಃ ಅದು ಪೌಲನು ತಿಳಿಸಲಿಚ್ಛಿಸಿದ ಪ್ರಾಥಮಿಕ ವಿಚಾರ ಆಗಿರಲಿಲ್ಲವೆಂದು ಅನ್ನಿಸುತ್ತದೆ. "ಬದಲಾಗಿ ಆತನ ವಿಚಾರವು ಏನಾಗಿತ್ತೆಂದರೆ ನಾವು ಏನು ಮಾಡುತ್ತೇವೆ ಮತ್ತು ಏನು ಮಾಡುವದಿಲ್ಲ ಎಂಬುವುಗಳು ದೇವರ ಮುಂದಿವೆ ಎಂಬ ವಾಸ್ತವಾಂಶವನ್ನು ಜೀವನದಲ್ಲಿಯಾಗಲಿ ಮರಣದಲ್ಲಿಯಾಗಲಿ ತಪ್ಪಿಸಿಕೊಳ್ಳಲಾರೆವು ಎಂಬದೆ."[26]

ಪುನಃ 7ನೇ ವಚನವನ್ನ ನೋಡಿರಿ ಮತ್ತು ಅದು ಹೇಗೆ 8ನೇ ವಚನದೊಂದಿಗೆ ಸಂಬಂಧ ಹೊಂದಿದೆ ನೋಡಿರಿ.[27] "ನಮ್ಮಲ್ಲಿ ಒಬ್ಬನಾದರೂ ತನಗಾಗಿ[28] ಬದುಕುವದೂ

ಇಲ್ಲ, ತನಗಾಗಿ ಸಾಯುವದೂ ಇಲ್ಲ." **ನಾವು ಬದುಕಿದರೆ ಕರ್ತನಿಗಾಗಿಯೇ ಬದುಕುತ್ತೇವೆ; ಸತ್ತರೆ ಕರ್ತನಿಗಾಗಿಯೇ ಸಾಯುತ್ತೇವೆ; ಬದುಕಿದರೂ ಸತ್ತರೂ ನಾವು ಕರ್ತನವರೇ.** ABಯು 7ನೇ ವಚನವನ್ನು ಹೀಗೆ ವಿಸ್ತರಿಸಿ ಹೇಳುತ್ತದೆ: "ನಮ್ಮಲ್ಲಿ ಒಬ್ಬನಾದರೂ ತನಗೋಸ್ಕರವಾಗಿ ಜೀವಿಸುವದಿಲ್ಲ (ಆದರೆ ಕರ್ತನಿಗಾಗಿಯೇ ಜೀವಿಸುತ್ತಾನೆ), ಮತ್ತು ನಮ್ಮಲ್ಲಿ ಒಬ್ಬನೂ ತನಗೋಸ್ಕರ ಸಾಯುವದಿಲ್ಲ (ಆದರೆ ಕರ್ತನಿಗಾಗಿಯೇ . . .)." "ನಮ್ಮಲ್ಲಿ" ಎಂದರೆ "ಕ್ರೈಸ್ತರಾದ ನಮ್ಮಲ್ಲಿ" ಎಂದರ್ಥವಾಗಿದೆ. 7 ಮತ್ತು 8 ಎರಡೂ ವಚನಗಳಲ್ಲಿ, ಪೌಲನು ತಿಳಿಸಲಿಚ್ಛಿಸುವ ಅಂಶವೆಂದರೆ ಒಬ್ಬ ಕ್ರೈಸ್ತನು ಇನ್ನು ಮೇಲೆ ಅವನ ಸ್ವಂತವಲ್ಲ; ಬದಲಾಗಿ ಆತನು "ಕರ್ತನವನೇ" ಎಂಬದೆ.

ಪೌಲನು ಬದುಕುವದು ಮತ್ತು ಸಾಯುವದು ಎಂಬದನ್ನು ಉಲ್ಲೇಖಿಸಿದ್ದು ಬಹುಶಃ ಒಬ್ಬನ ಇಡೀ ಅಸ್ತಿತ್ವವನ್ನು ಒಳಗೊಳ್ಳುವಂತೆ ಮಾಡುವದಾಗಿತ್ತು. Phillips 8ನೇ ವಚನವನ್ನು ಹೀಗೆ ಭಾವಾನುವಾದಗೊಳಿಸಿರುತ್ತದೆ: "ಜೀವನವು ಪ್ರತಿಯೊಂದು ತಿರುವಿನಲ್ಲಿ ನಮ್ಮನ್ನು ದೇವರೊಂದಿಗೆ ಜೋಡಿಸುತ್ತದೆ, ಮತ್ತು ನಾವು ಸಾಯುವಾಗ ಆತನನ್ನು ಮುಖಾಮುಖಿಯಾಗಿ ಎದುರ್ಗೊಳ್ಳುತ್ತೇವೆ. ಜೀವ ಅಥವಾ ಮರಣದಲ್ಲಿ ನಾವು ದೇವರ ಕೈಗಳಲ್ಲಿಯೇ ಇದ್ದೇವೆ."

**ವಚನ 9.** ಪೌಲನು ತನ್ನ ಜೀವ ಮತ್ತು ಮರಣದ ಸಾದೃಶ್ಯವನ್ನು ಮುಂದುವರೆಸುತ್ತಾನೆ: **ಯಾಕೆಂದರೆ ಸತ್ತವರಿಗೂ ಜೀವಿಸುವವರಿಗೂ ಒಡೆಯನಾಗಿರಬೇಕೆಂತಲೇ ಕ್ರಿಸ್ತನು ಸತ್ತು ಜೀವಿತನಾದನು.** MSGಯಲ್ಲಿ "ಆ ಕಾರಣದಿಂದಲೇ ಯೇಸು ಜೀವಿಸಿದನು ಮತ್ತು ಮರಣಿಸಿದನು ಹಾಗೂ ಪುನಃ ಜೀವಿತನಾದನು: ಹೀಗೆ ಆತನು ಇಡೀ ಜೀವ ಮತ್ತು ಮರಣಗಳ ವ್ಯಾಪ್ತಿಯಲ್ಲಿ ನಮಗೆ ಒಡೆಯನಾಗಿರುವದಕ್ಕೆ ಸಾಧ್ಯವಾಗಬೇಕೆಂತಲೇ ಆಗಿತ್ತು."

6ನೇ ವಚನದ ರೀತಿಯಲ್ಲಿಯೇ, 7ರಿಂದ 9 ವಚನಗಳು ಒತ್ತಿ ಹೇಳುವದೇನೆಂದರೆ ಯೇಸುವೇ "ಒಡೆಯನು" ಎಂಬುದು. ಈ ವಚನಗಳಿಂದ ಅನೇಕ ಅನ್ವಯಿಕೆಗಳನ್ನು ಮಾಡಿಕೊಳ್ಳಬಹುದು. ನಾವು ಕರ್ತನಿಗೆ ಸೇರಿದವರಾಗಿರುವದರಿಂದ, ನಾವು ನಮ್ಮನ್ನು ಮೆಚ್ಚಿಸಿಕೊಳ್ಳಲು ಬದುಕಬಾರದು, ಆದರೆ ಆತನನ್ನೇ ಮೆಚ್ಚಿಸುವದಕ್ಕೆ ಬದುಕಬೇಕು; ನಾವು ಬದುಕಿದರೂ ಸತ್ತರೂ ನಮ್ಮ ಆಲೋಚನೆಗಳೆಲ್ಲವೂ ಆತನ ಸುತ್ತಲು ಕೇಂದ್ರಿಕೃತವಾಗಿರತಕ್ಕದ್ದು (ನೋಡಿರಿ ಫಿಲಿಪ್ಪಿ 1:21-23). ಹೇಗೂ, ಪೌಲನು ಮುಖ್ಯ ಗಮನವು ಈಗಲೂ ನಾವು ಏಕೆ ಒಬ್ಬರಿಗೊಬ್ಬರಿಗೆ ತೀರ್ಪು ಮಾಡಬಾರದು ಎಂಬದರ ಮೇಲೆಯೇ ಇತ್ತು. JBಯು 7, 8 ಮತ್ತು 9 ವಚನಗಳನ್ನು ಒಂದುಗೂಡಿಸಿ ಈ ಕೆಳಗಿನ ವಾಗ್ದಂಡನೆಯನ್ನು ನೀಡುತ್ತದೆ: "ಈ ಕಾರಣದಿಂದ [ಈಗಷ್ಟೆ ಹೇಳಿದ ಕಾರ್ಯಗಳು] ಸಹ ನೀವು ಎಂದಿಗೂ ನಿಮ್ಮ ಸಹೋದರನಿಗೆ ತೀರ್ಪು ಮಾಡಬಾರದು" (14:10).

ಕ್ರೈಸ್ತರು ಕರ್ತನಿಗೆ ಸೇರಿದವರು ಎಂಬ ವಾಸ್ತವಾಂಶವು ಈ ರೀತಿಯ ಪ್ರಶ್ನೆಗಳನ್ನು ಎಬ್ಬಿಸತಕ್ಕದ್ದು: "ಕರ್ತನು ಒಬ್ಬ ಸಹೋದರನನ್ನು ತನ್ನವನನ್ನಾಗಿ ಸ್ವೀಕರಿಸಿಕೊಂಡಿರುವದರಿಂದ, ನಾವೇಕೆ ಆತನಿಗೆ ತೀರ್ಪು ಮಾಡುತ್ತಿದ್ದೇವೆ?"; "ನಾವು ಸಹ ಏಕೆ ಆತನನ್ನು ಸ್ವೀಕರಿಸಿಕೊಳ್ಳಕೂಡದು?"

## ದೇವರು, ಸರ್ವರ ನ್ಯಾಯಾಧಿಪತಿ (14:10-12)

**[10]ತಿನ್ನದವನೇ, ನಿನ್ನ ಸಹೋದರನ ವಿಷಯವಾಗಿ ನೀನು ತೀರ್ಪುಮಾಡುವದೇನು? ತಿನ್ನುವವನೇ, ನಿನ್ನ ಸಹೋದರನನ್ನು ನೀನು ಹೀನೈಸುವದೇನು? ನಾವೆಲ್ಲರೂ ದೇವರ ನ್ಯಾಯಸನದ ಮುಂದೆ ನಿಲ್ಲಬೇಕಲ್ಲಾ.**

**[11]ನನ್ನ ಜೀವದಾಣೆ, ಎಲ್ಲರೂ ನನಗೆ ಅಡ್ಡ ಬೀಳುವರು,**
**ಎಲ್ಲರೂ ನನ್ನನ್ನು ದೇವರೆಂದು ಪ್ರತಿಜ್ಞೆ ಮಾಡುವರು**
**ಎಂಬದಾಗಿ ಕರ್ತನು ಹೇಳಿದ್ದಾನೆ**

**ಎಂದು ಬರೆದದೆ. [12]ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು.**

ಈ ವಚನಗಳು ಒಂದು ಪ್ರಧಾನವಾದ ವಿಚಾರವಿರುವ ಒಂದು ಘಟಕವನ್ನೊಳಗೊಂಡಿರುತ್ತವೆ: ನಾವೆಲ್ಲರೂ ದೇವರ ಮುಂದೆ ನ್ಯಾಯತೀರ್ಪಿನಲ್ಲಿ ನಿಂತುಕೊಳ್ಳುವೆವು.

**ವಚನ 10.** 10ನೇ ವಚನದ ಮೊದಲ ಭಾಗವು ಆ ವಿಚಾರದೊಳಗೆ ನಡಿಸುತ್ತದೆ. ಇಲ್ಲಿ ಮಾಡಲ್ಪಡುವ ತರ್ಕವೇನೆಂದರೆ ನಾವು ಕ್ರಿಸ್ತನಲ್ಲಿ ಸಹೋದರರು ಹಾಗೂ ಸಹೋದರಿಯರು ಆಗಿದ್ದೇವಾದ್ದರಿಂದ ನಾವು ಇನ್ನು ಮೇಲೆ ಒಬ್ಬರಿಗೊಬ್ಬರು ತೀರ್ಪು ಮಾಡಬಾರದು ಎಂಬದೆ.[29]

ಮೊದಲ ಪ್ರಶ್ನೆಯು "ದೃಢವಿಲ್ಲದ" ಸಹೋದರನನ್ನು ಗುರಿ ಮಾಡಿ ಹೇಳಲ್ಪಟ್ಟಿರಬಹುದಾಗಿದೆ (ನೋಡಿರಿ 14:2, 3): **ತಿನ್ನದವನೇ**, **ನಿನ್ನ ಸಹೋದರನ ವಿಷಯವಾಗಿ ನೀನು ತೀರ್ಪು ಮಾಡುವದೇನು?** ಎರಡನೆಯ ಪ್ರಶ್ನೆಯನ್ನು "ದೃಢವಿರುವ" ಸಹೋದರನನ್ನು ಸಂಬೋಧಿಸಿ ಕೇಳಿರಬಹುದಾಗಿದೆ (ನೋಡಿರಿ 14:3): **ತಿನ್ನುವವನೇ**, **ನಿನ್ನ ಸಹೋದರನನ್ನು ನೀನು ಹೀನೈಸುವದೇನು?** ಎರಡೂ ಪ್ರಶ್ನೆಗಳು 4ನೇ ವಚನದಲ್ಲಿ ಕೇಳಲಾದ ಪ್ರಶ್ನೆಯ ಭಾವುಕತೆಯನ್ನು ಪ್ರತಿಧ್ವನಿಸುತ್ತವೆ: "ಮತ್ತೊಬ್ಬನ ಸೇವಕನ ವಿಷಯವಾಗಿ ತೀರ್ಪುಮಾಡುವದಕ್ಕೆ ನೀನು ಯಾರು?" ಹೇಗೂ, 10ನೇ ವಚನದಲ್ಲಿ ಕೇಳಲಾಗಿರುವ ಪ್ರಶ್ನೆಗಳಲ್ಲಿ ಒಂದು ಮಹತ್ವಪೂರ್ಣತೆ ಇದೆ: "ಸಹೋದರನು" ಎಂಬ ಪದ. ಇಡೀ ಪತ್ರಿಕೆಯುದ್ದಕ್ಕೂ ಇರುವ ರೀತಿಯಲ್ಲಿಯೇ, "ಸಹೋದರನು" ಎಂಬದನ್ನು ಕ್ರಿಸ್ತನಲ್ಲಿನ ಸಹೋದರರು ಮತ್ತು ಸಹೋದರಿಯರು ಇಬ್ಬರನ್ನೂ ಸೂಚಿಸುವದಕ್ಕೆ ಜಾತಿವಿಶಿಷ್ಟ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಪೌಲನು ತನ್ನ ವಾಚಕರಿಗೆ ನಾವು ಕುಟುಂಬವಾಗಿದ್ದೇವೆ ಎಂಬುದನ್ನು ಜ್ಞಾಪಕಕ್ಕೆ ತರುತ್ತಾನೆ!

ನಾವು ಕುಟುಂಬವಾಗಿದ್ದೇವೆ, ಆದ್ದರಿಂದ ಒಬ್ಬರೊಬ್ಬರ ವಿಷಯವಾಗಿ ತೀರ್ಪು ಮಾಡಬಾರದು. ನಮ್ಮಲ್ಲಿ ಬಹುತೇಕರು ಕುಟುಂಬದ ವಿಷಯಕ್ಕೆ ಬಂದರೆ ಸೈರಣೆಯುಳ್ಳವರಾಗಿರುವದಕ್ಕೆ ಮನಸ್ಸು ಮಾಡುತ್ತೇವೆ. ನಾವು ನಮ್ಮ ಶರೀರಸಂಬಂಧದ ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳಿದ್ದರೆ ಸಹಿಸಿಕೊಳ್ಳುವದಕ್ಕೆ ಮನಸ್ಸುಳ್ಳವರಾಗಿದ್ದರೆ, ನಮ್ಮ ಆತ್ಮೀಕ ಕುಟುಂಬದಲ್ಲಿರುವವರನ್ನು ಸೇರಿಸಿಕೊಳ್ಳುವದಕ್ಕೆ ನಾವು ಇನ್ನು ಎಷ್ಟೋ ಮನಸ್ಸುಳ್ಳವರಾಗಿರಬೇಕಲ್ಲವೇ! Charles R. Swindoll ಅಭಿಪ್ರಾಯ ಪಟ್ಟದ್ದೇನೆಂದರೆ

ರೋಮಾ 14ರಲ್ಲಿನ ಸಮಸ್ಯೆಯು ಆಹಾರದ ಸಮಸ್ಯೆಯಾಗಿರಲಿಲ್ಲ. ಅದು ಪ್ರೀತಿಯ ಸಮಸ್ಯೆಯಾಗಿತ್ತು.[30] ಪೇತ್ರನು ಹೀಗೆ ಬರೆದನು, "ಮೊಟ್ಟ ಮೊದಲು ನಿಮ್ಮ ಮಿಮ್ಮೊಳಗೆ ಯಥಾರ್ಥವಾದ ಪ್ರೀತಿಯಿರಲಿ; ಪ್ರೀತಿಯು ಬಹುಪಾಪಗಳನ್ನು ಮುಚ್ಚುತ್ತದೆ" (1 ಪೇತ್ರ 4:8).

ಇದು ನಮ್ಮನ್ನು ನಾವು ಏಕೆ ಒಬ್ಬರೊಬ್ಬರ ವಿಷಯವಾಗಿ ತೀರ್ಪು ಮಾಡಬಾರದು ಎಂಬದರ ಅಂತಿಮ ಕಾರಣಕ್ಕೆ ತಂದು ನಿಲ್ಲಿಸುತ್ತದೆ: ಯಾಕೆಂದರೆ ನಮ್ಮಲ್ಲಿ ಎಲ್ಲರೂ ಕರ್ತನಿಂದ ನ್ಯಾಯತೀರಿಸಲ್ಪಡುವೆವು. ನಾವು ದೇವರಿಂದ ನ್ಯಾಯತೀರಿಸಲ್ಪಡುವೆವು ಎಂಬ ವಾಸ್ತವಾಂಶವು 4ನೇ ವಚನದಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿರುತ್ತದೆ. ಇಲ್ಲಿ ಅದು ಬಹು ಸ್ಪಷ್ಟಗೊಳಿಸಲ್ಪಟ್ಟಿರುತ್ತದೆ: **ನಾವೆಲ್ಲರೂ ದೇವರ ನ್ಯಾಯಾಸನದ ಮುಂದೆ ನಿಲ್ಲಬೇಕಲ್ಲಾ**.[31] "ನ್ಯಾಯಾಸನ" ಎಂಬುದು βῆμα (*bēma*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಅದು ತೆರೆದ ಮೈದಾನದಲ್ಲಿ, ಎತ್ತರಿಸಲ್ಪಟ್ಟು ನಿರ್ಮಿತವಾಗಿರುವ ವೇದಿಕೆಯನ್ನು, ಅದರ ಮುಂದೆ ಆರೋಪಿಯು ನಿಂತಿರುವದನ್ನು ಸೂಚಿಸುತ್ತದೆ.[32] *Bēma* ಮುಂದೆ ಕೈದಿಗಳು ನಿಂತಿರುವದನ್ನು ನೋಡುವದು ಪೌಲನ ವಾಚಕರಿಗೆ ಸಾಮಾನ್ಯ ದೃಶ್ಯವಾಗಿದ್ದಿರಬೇಕು.

ಎರಡನೆಯ ಸುವಾರ್ತಾ ಪ್ರಯಾಣದ ವೇಳೆ ಕೊರಿಂಥದಲ್ಲಿ ಉಳಿದುಕೊಂಡಿದ್ದಾಗ, ಪೌಲನು ಗಲ್ಲಿಯೋನನ "ನ್ಯಾಯಸ್ಥಾನದ" (*bēma*) ಮುಂದೆ ನಿಂತಿದ್ದನು (ಅಪೊಸ್ತಲರ ಕೃತ್ಯಗಳು 18:12). ಕೊರಿಂಥದ ಹಳೇ ಪಟ್ಟಣಕ್ಕೆ ಭೇಟಿ ಕೊಡುವವರು ಇಂದಿಗೂ ಮರುನಿರ್ಮಾಣ ಮಾಡಲ್ಪಟ್ಟಿರುವ *bēma* ವನ್ನು ಅಲ್ಲಿ ಕಾಣಬಹುದಾಗಿದೆ. ಅದರ ಮುಂದುಗಡೆಯಲ್ಲಿ ಒಂದು ಚಿಕ್ಕ ತೆರೆದ ಮೈದಾನ ಇದ್ದು ಮಧ್ಯದಲ್ಲೊಂದು ಸ್ತಂಭವಿರುತ್ತದೆ, ಅಲ್ಲಿಯೇ ಆರೋಪಿಯು ನಿಂತುಕೊಳ್ಳುತ್ತಿದ್ದನು.

ಪೌಲನು ದಿನದಲ್ಲಿ ಜನರು ರೋಮನ್ ನ್ಯಾಯಮಂಡಲಿಗಳ ಮುಂದೆ ನಿಲ್ಲುತ್ತಿದ್ದ ಪ್ರಕಾರವಾಗಿಯೇ, ಒಂದು ದಿನ ನಾವು ನಮ್ಮ ನಿತ್ಯವಾದ ತೀರ್ಪು ಪಡೆದುಕೊಳ್ಳಲು ದೇವರ ನ್ಯಾಯಾಸನದ ಮುಂದೆ ನಿಲ್ಲುತ್ತೇವೆ. MSG ಯು ಭಾವಾನುವಾದವನ್ನು ಹೊಂದಿರುತ್ತದೆ: "ಕ್ರಮೇಣದಲ್ಲಿ, ನಾವೆಲ್ಲರೂ . . . ದೇವರೆಡೆಗೆ ಮುಖ ಮಾಡಿಕೊಂಡು ಅಕ್ಕ ಪಕ್ಕದಲ್ಲಿ ನ್ಯಾಯತೀರ್ಪಿನ ಸ್ಥಳದಲ್ಲಿ ನಿಂತುಕೊಳ್ಳಲಿದ್ದೇವೆ."

**ವಚನ 11.** ಅದು ಹಾಗೆಯೇ ಇರಲಿದೆ ಎಂಬುದಕ್ಕೆ ಪುರಾವೆಯಾಗಿ, ಪೌಲನು ಯೆಶಾಯ 45:23ರಿಂದ ಉಲ್ಲೇಖಿಸುತ್ತಾನೆ: **ನನ್ನ ಜೀವದಾಣೆ, ಎಲ್ಲರೂ ನನಗೆ ಅಡ್ಡ ಬೀಳುವರು, ಎಲ್ಲರೂ ನನ್ನನ್ನು ದೇವರೆಂದು ಪ್ರತಿಜ್ಞೆ ಮಾಡುವರು ಎಂಬದಾಗಿ ಕರ್ತನು[33] ಹೇಳಿದ್ದಾನೆ ಎಂದು ಬರೆದದೆ.** ಯೆಶಾಯ 45ರ ವಾಕ್ಯಭಾಗದಲ್ಲಿ "ದೇವರು ತನ್ನ ವಾಸ್ತವಿಕತೆ ಮತ್ತು ಸೃಷ್ಟಿಯಲ್ಲಿ ತನ್ನ ಶಕ್ತಿ ಮತ್ತು ವಿಮೋಚನೆಯನ್ನು ವಿಗ್ರಹಗಳ ಶೂನ್ಯತೆ ಹಾಗೂ ಸಾಮರ್ಥ್ಯತೆಯೊಂದಿಗೆ ವಿರುದ್ಧ ಹೋಲಿಕೆ ಮಾಡುತ್ತಾನೆ."[34] ಒಂದು ಕಾಲ ಬರುತ್ತದೆ ಆಗ ಪ್ರತೊಯೊಬ್ಬನು ಕರ್ತನೇ ಏಕೈಕ ಸತ್ಯ ದೇವರು ಎಂಬುದನ್ನು ಒಪ್ಪಿಕೊಳ್ಳುವರು ಎಂಬುದನ್ನು ಈ ವಾಕ್ಯಭಾಗವು ಪರೋಕ್ಷವಾಗಿ ಸೂಚಿಸುತ್ತದೆ. ನಾವು ನ್ಯಾಯತೀರ್ಪಿನ ದಿನದಂದು ಆತನ ಮುಂದೆ ನಿಲ್ಲುವಾಗ ಇದು ಸಂಭವಿಸುವದು (ಫಿಲಿಪ್ಪಿ 2:10, 11).

ನಾವೆಲ್ಲರೂ ಒಂದು ದಿನ ದೇವರ ನ್ಯಾಯಾಸನದ ಮುಂದೆ ಕಾಣಿಸಿಕೊಳ್ಳಲಿದ್ದೇವಾದ್ದರಿಂದ, ನಾವು ಒಬ್ಬರೊಬ್ಬರ ವಿಷಯವಾಗಿ ತೀರ್ಪು ಮಾಡುವದು

ಎಷ್ಟು ಅಸಮಂಜವಾದದ್ದು! *Bēma* ದ ಮುಂದೆ ನ್ಯಾಯತೀರ್ಪಿಗಾಗಿ ಕಾಯುತ್ತಾ ಕೈದಿಗಳು ಸಾಲಾಗಿ ನಿಂತಿರುವದನ್ನು ಕಲ್ಪಿಸಿಕೊಳ್ಳಿರಿ. ಒಮ್ಮೆಲೆ, ಅವರಲ್ಲೊಬ್ಬನು ಗುಂಪಿನಿಂದ ಹೊರಬಂದು *bēma* ಮೇಲೆ ಏರಿ ಕುಳಿತುಕೊಳ್ಳುತ್ತಾನೆ. ಆತನು "ಈಗ, ನಾನೇ ನ್ಯಾಯಾಧಿಪತಿ!" ಎಂದು ಕೂಗುತ್ತಾನೆ. ಎಂಥಾ ಒಬ್ಬ ಮೂರ್ಖನು, ಎಂಥಾ ಮೂರ್ಖ ಮನುಷ್ಯನು! ಸೈನಿಕರು ಆತನನ್ನು ಪುನಃ ಸಾಲಿನಲ್ಲಿದ್ದ ಆತನ ಸ್ಥಾನಕ್ಕೆ ಎಳೆದುಕೊಂಡು ಹೋಗುತ್ತಿದ್ದಂತೆ ಆತನು ಬೇರೆಯವರಿಗೆ ತೀರ್ಪು ಮಾಡುವ ಸ್ಥಾನದಲ್ಲಿಯೇ ಇಲ್ಲದವನೆಂಬುದು ಆತನಿಗೆ ಸ್ಪಷ್ಟಗೊಳಿಸಲ್ಪಡುವದು.

**ವಚನ 12.** ಪೌಲನು ಹೀಗೆ ಹೇಳುತ್ತಾನೆ, **ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು.** ಇಲ್ಲಿ ಪ್ರಮುಖ ವಿಚಾರವೇನೆಂದರೆ ಪ್ರತಿಯೊಬ್ಬ ವ್ಯಕ್ತಿಯು ದೇವರ ಮುಂದೆ ಜವಾಬ್ದಾರನಾಗಿರುತ್ತಾನೆ. ನಾನು ನಿಮ್ಮ ಪರವಾಗಿ ಲೆಕ್ಕವನ್ನು ಒಪ್ಪಿಸುವದಿಲ್ಲ, ಮತ್ತು ನೀವು ನನ್ನ ಪರವಾಗಿ ಲೆಕ್ಕವನ್ನು ಒಪ್ಪಿಸುವದಿಲ್ಲ. "ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡುವನು." 12ನೇ ವಚನದಲ್ಲಿ ಇನ್ನಷ್ಟು ಸೂಚ್ಯಾರ್ಥಗಳಿರಬಹುದಾಗಿದೆ: (1) ನಾವು ಬೇರೆಯವರಿಗೆ ಲೆಕ್ಕವನ್ನು ಒಪ್ಪಿಸಬೇಕಾಗಿರುವದಿಲ್ಲ, ಆದರೆ ದೇವರೊಬ್ಬನಿಗೆ ಒಪ್ಪಿಸಿಬೇಕಾಗಿರುತ್ತದೆ; (2) ನಾವು ತೀರ್ಪುಮಾಡಿದವರಾಗಿದ್ದರೆ, ನಾವು ಆ ವಿಷಯದಲ್ಲಿ ಸಹ ಲೆಕ್ಕವನ್ನು ಒಪ್ಪಿಸಬೇಕಾಗುತ್ತದೆ (ನೋಡಿರಿ ಮತ್ತಾಯ 7:1, 2).

ಯೇಸುವಿನ ಪುನರುತ್ಥಾನದ ಬಳಿಕ, ಆತನು ತನ್ನ ಶಿಷ್ಯರಿಗೆ ತಿಬೇರಿಯ (ಗಲಿಲಾಯ) ಸಮುದ್ರ ಬಳಿಯಲ್ಲಿ ಕಾಣಿಸಿಕೊಂಡನು (ಯೋಹಾನ 21). ಯೇಸು ತನ್ನನ್ನು ನಿರಾಕರಿಸಿದ್ದ ಪೇತ್ರನೊಂದಿಗೆ ಮಾತಾಡುವದಕ್ಕೆ ಅವಕಾಶವನ್ನು ಉಪಯೋಗಿಸಿಕೊಂಡನು. ಆ ಸಂಭಾಷಣೆಯ ಮುಕ್ತಾಯದ ಹಂತದಲ್ಲಿ, ಪೇತ್ರನು ಹತ್ತಿರದಲ್ಲೇ ನಿಂತುಕೊಂಡಿದ್ದ ಯೋಹಾನನ ವಿಷಯವಾಗಿ ಯೇಸುವನ್ನು ಹೀಗೆ ಕೇಳುತ್ತಾನೆ: "ಸ್ವಾಮೀ, ಇವನ ವಿಷಯವೇನು" ಅದಕ್ಕೆ ಯೇಸು ". . . ಅದು ನಿನಗೇನು? ನೀನು ನನ್ನನ್ನು ಹಿಂಬಾಲಿಸು" ಎಂದು ಹೇಳಿದನು (ಯೋಹಾನ 21:21, 22). ಬೇರೆ ಮಾತುಗಳಲ್ಲಿ ಹೇಳುವದಾದರೆ, "ಮತ್ತೊಬ್ಬರ ಬಗ್ಗೆ ಚಿಂತಿಸುವದನ್ನು ನಿಲ್ಲಿಸಿ ಬಿಟ್ಟು ನನ್ನೊಂದಿಗಿನ ನಿನ್ನ ಸ್ವಂತ ಸಂಬಂಧದ ಬಗ್ಗೆ ಚಿಂತಿಸಲಾರಂಭಿಸು!" MSG ಯು ರೋಮಾ 14:12ನ್ನು ಹೀಗೆ ಭಾವಾನುವಾದಗೊಳಿಸಿರುತ್ತದೆ: "ದೇವರ ಮುಂದೆ ನಿನ್ನ ಜೀವಿತವನ್ನೇ ನೋಡಿಕೊಳ್ಳುವದರಲ್ಲಿ ನಿನಗೆ ಕೈಯಲ್ಲಿ ಸಾಕಷ್ಟು ಕೆಲಸವಿರುತ್ತದೆ."

## ಪ್ರೀತಿಯಲ್ಲಿ ಒಬ್ಬರನ್ನೊಬ್ಬರು ಸ್ವೀಕರಿಸಿಕೊಳ್ಳುವದು (14:13-18)

**[13]ಆದಕಾರಣ ಇನ್ನು ಮೇಲೆ ಒಬ್ಬರ ವಿಷಯದಲ್ಲೊಬ್ಬರು ತೀರ್ಪುಮಾಡದೆ ಇರೋಣ. ಅದಕ್ಕೆ ಬದಲಾಗಿ ಸಹೋದರನ ಎದುರಿಗೆ ಅಡ್ಡಿಯನ್ನಾಗಲಿ ಎಡತಡೆಯನ್ನಾಗಲಿ ಹಾಕಬಾರದೆಂದು ತೀರ್ಮಾನಿಸಿಕೊಳ್ಳಿರಿ. [14]ಯಾವ ಪದಾರ್ಥವೂ ಸ್ವತಃ ಅಶುದ್ಧವಾದದ್ದವೆಂದು ಬಲ್ಲೆನು, ಮತ್ತು ಕರ್ತನಾದ ಯೇಸುವಿನಲ್ಲಿದ್ದುಕೊಂಡು ದೃಢವಾಗಿ ನಂಬಿದ್ದೇನೆ; ಆದರೆ ಯಾವದಾದರೂ ಒಂದು ಪದಾರ್ಥವನ್ನು ಅಶುದ್ಧವೆಂದು ಒಬ್ಬನು ಭಾವಿಸಿದರೆ ಅವನಿಗೆ ಅದು ಅಶುದ್ಧ.**

**[15]ನೀನು ತೆಗೆದುಕೊಳ್ಳುವ ಆಹಾರದಿಂದ ನಿನ್ನ ಸಹೋದರನ ಮನಸ್ಸಿಗೆ ನೋವಾದರೆ ನೀನು ಪ್ರೀತಿಗೆ ತಕ್ಕಂತೆ ಇನ್ನು ನಡೆಯುವವನಲ್ಲ. ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ ಅವನನ್ನು ನಿನಗೆ ಇಷ್ಟವಾದ ಆಹಾರದ ನಿಮಿತ್ತ ಕೆಡಿಸಬಾರದು. [16]ನಿಮಗಿರುವ ಮೇಲು ದೂಷಣೆಗೆ ಆಸ್ಪದವಾಗಬಾರದು. [17]ಯಾಕೆಂದರೆ ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪವಿತ್ರಾತ್ಮಿಂದಾಗುವ ಆನಂದವೂ ಆಗಿದೆ. [18]ಈ ಪ್ರಕಾರವಾಗಿ ಕ್ರಿಸ್ತನ ಸೇವೆಯನ್ನು ಮಾಡುವವನು ದೇವರಿಗೆ ಮೆಚ್ಚಿಕೆಯಾದವನಾಗಿಯೂ ಮನುಷ್ಯರಿಗೆ ಸಂಭಾವಿತನಾಗಿಯೂ ಇರುವನಷ್ಟೆ.**

ಸಭೆಗಳಲ್ಲಿ ಉದ್ಭವವಾಗುವ ವ್ಯಾಜ್ಯಗಳು ಅನೇಕ ಸಾರಿ ಕ್ಷುಲ್ಲಕವಾಗಿರುತ್ತವೆ. ಅವುಗಳಲ್ಲಿ ಅನೇಕ ವ್ಯಾಜ್ಯಗಳು, "ನಿರ್ವಹಣ, ರೂಢಿ, ಪ್ರತಿಷ್ಠೆ" ಗಳಂತಹ ಸಣ್ಣಪುಟ್ಟ ವಿಷಯಗಳಿಗಾಗಿಯೇ ಆಗಿರುತ್ತದೆ.[35]

ನಿರ್ವಹಣ: "ಈ ಯೋಜನೆಯನ್ನು ಜಾರಿಗೆ ತರಬೇಕು?"
ರೂಢಿ: "ನಾವು ಇದಕ್ಕೆ ಮುಂದೆ ಇದನ್ನು ಈ ವಿಧದಲ್ಲಿ ಎಮದಾದರೂ ಮಾಡಿದ್ದೇವಾ?"
ಪ್ರತಿಷ್ಠೆ: "ಕೆಲಸವು ಸಾಧಿಸಲ್ಪಟ್ಟ ಅದರ ಶ್ಲಾಘ್ಯವು ಯಾರಿಗೆ ಸಿಕ್ಕುವದು?"

ರೋಮಾ 14:13-18ರಲ್ಲಿ, ಪೌಲನು ಅಂಥ ಭಿನ್ನಾಭಿಪ್ರಾಯಗಳನ್ನು[36] ಒಂದು ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತಾನೆ. ನಾವು ಒಬ್ಬ ಸಹೋದರನೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವಾಗ ಅವನನ್ನು ಅಭಿಪ್ರಾಯದಲ್ಲಿ ಹಠವಾದಿ, ಮೊಂಡನು, ಅಥವಾ ಬಹುಶಃ ದ್ವೇಷಕಾರಿ ಎಂಬದಾಗಿ ಸಹ ಕಾಣಬಹುದಾಗಿದೆ. ನಾವು "ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ" ಆತನನ್ನಾಗಿ ಅವನನ್ನು ಕಾಣಬೇಕೆಂಬದು ಪೌಲನ ಬಯಕೆಯಾಗಿತ್ತು (14:15). ಈ ನಾಲ್ಕು ಪದಗಳು ನಮ್ಮ ಹೃದಯಗಳಲ್ಲಿ ಆಳವಾಗಿ ಬೇರೂರಲಿ: "ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ ಅವನನ್ನು." ಆ ನಾಲ್ಕು ಮಾತುಗಳು "[ಅಮೆರಿಕದಲ್ಲಿ] ಗುಲಾಮತನವನ್ನು ನಾಶಗೊಳಿಸಿದವು" ಎಂದು T. R. Glover ಅಭಿಪ್ರಾಯ ಪಡುತ್ತಾನೆ.[37] Halford E. Luccock ಅವುಗಳನ್ನು "ಎಂದಾದರೂ ರಚಿಲ್ಪಟ್ಟಂತಹ . . . ನಿಸ್ವಾರ್ಥ ನಡವಳಿಕೆಯ ಕುರಿತ ಅತ್ಯಂಥ ಬಲವಾದ ವಾದವಾಗಿರುತ್ತದೆ."[38]

ರೋಮಾ 14ರ ಮೊದಲ 12 ವಚನಗಳಲ್ಲಿ, ಪೌಲನು "ದೃಢವಿಲ್ಲದ" ಮತ್ತು "ದೃಢವಿರುವ" ಕ್ರೈಸ್ತರಿಬ್ಬರನ್ನೂ ಕುರಿತು ಮಾತಾಡಿದನು. ಅಧ್ಯಾಯದ ಮಿಕ್ಕ ಭಾಗದಲ್ಲಿ, ಆತನು ತನ್ನ ಹೇಳಿಕೆಗಳನ್ನೆಲ್ಲಾ "ದೃಢವಿರುವ" ಸಹೋದರನ ಕಡೆಗೆ ತಿರುಗಿಸುತ್ತಾನೆ. "ದೃಢವಿರುವ" ಸಹೋದರನು "ದೃಢವಿಲ್ಲದ" ಸಹೋದರನ ಬಗ್ಗೆ ಮತ್ತೊಮ್ಮೆ ಯೋಚನೆ ಮಾಡಬೇಕೆಂಬದು ಪೌಲನ ಬಯಕೆಯಾಗಿತ್ತು. "ದೃಢವಿಲ್ಲದ" ಸಹೋದರನನ್ನು ಒಬ್ಬ ವಿರೋಧಿಯಂತೆ ಕಾಣುವ ಬದಲಾಗಿ, "ದೃಢವಿರುವ" ಸಹೋದರನು ಆತನನ್ನು ಒಂದು ಅವಕಾಶದ ರೂಪದಲ್ಲಿ—"ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ" ಅವನಿಗೆ ಸಹಾಯ ಮಾಡುವ ಅವಕಾಶ—ಕಾಣಬೇಕೆಂಬುದು ಪೌಲನ ಬಯಕೆಯಾಗಿತ್ತು.

**ವಚನ 13. ಆದಕಾರಣ** ಎಂಬ ಆರಂಭಿಕ ಪದವು ಈ ಹೇಳಿಕೆಯನ್ನು 1ರಿಂದ 12

ವಚನಗಳೊಂದಿಗೆ ಜೋಡಿಸುತ್ತದೆ. ಅದು ಆ ಮುಂಚಿನ ವಚನಗಳಲ್ಲಿನ ಸಂದೇಶಕ್ಕೆ ಒಂದು ಮುಕ್ತಾಯದ ರೂಪ ಕೊಡುತ್ತದೆ: **ಇನ್ನು ಮೇಲೆ ಒಬ್ಬರ ವಿಷಯದಲೊಬ್ಬರು ತೀರ್ಪುಮಾಡದೆ ಇರೋಣ.** ನಾವು ಮತ್ತೊಬ್ಬರ ವಿಷಯವಾಗಿ ತೀರ್ಪು ಮಾಡುವದರಲ್ಲಿ ಏಕೆ ನಿಧಾನವಾಗಿರಬೇಕೆಂಬುದಕ್ಕೆ ಅನೇಕ ಕಾರಣಗಳಿರುತ್ತವೆ.

> ಸರ್ವಜ್ಞಾನಿಗಳಲ್ಲದವರಾದ, ನಮಗೆ ಎಲ್ಲಾ ವಾಸ್ತವಾಂಶಗಳೂ ಗೊತ್ತಿರುವದಿಲ್ಲ. ಜನರ ಹೃದಯಗಳೊಳಗೆ ನೋಡುವದಕ್ಕೆ ಅಶಕ್ತರು, ಅವರ ಉದ್ದೇಶಗಳನ್ನು ತಿಳಿಯುವದಕ್ಕೆ ಸಾಧ್ಯವಿಲ್ಲದವರಾಗಿದ್ದೇವೆ. ಪರಿಮಿತಿಯುಳ್ಳವರಾಗಿ, ನಾವು "ಒಟ್ಟಾರೆ ಚಿತ್ರಣ" ಏನೆಂಬುದರ ಅರಿವಿನ ಕೊರತೆಯುಳ್ಳವರಾಗಿರುತ್ತೇವೆ. ಮಂದವಾದ ಆತ್ಮೀಕ ದೃಷ್ಟಿಯುಳ್ಳವರಾಗಿ, ನಾವು ಕುರುಡಾದ ಕಲೆಗಳನ್ನು ಮತ್ತು ಮಬ್ಬಾದ ದೃಷ್ಟಿಕೋನಗಳಿಂದ ಜೀವಿಸುವವರು. ನಮ್ಮಲ್ಲಿ ಬಹುತೇಕರು, ಮಾನವರಾಗಿ, ಪರಿಪೂರ್ಣರಲ್ಲದವರು, ಅಸ್ಥಿರರು ಮತ್ತು ವ್ಯಕ್ತಿನಿಷ್ಠ ಆಗಿದ್ದೇವೆ.[39]

13ನೇ ವಚನದ ಆರಂಭಿಕ ಬೋಧನೆಗಳು ಶಬ್ದಾಡಂಬರ ಹೊಂದಿರುತ್ತವೆ: "ಆದಕಾರಣ ಇನ್ನು ಮೇಲೆ ಒಬ್ಬರ ವಿಷಯದಲ್ಲೊಬ್ಬರು ತೀರ್ಪುಮಾಡದೆ [*krinō*] ಇರೋಣ." **ಅದಕ್ಕೆ ಬದಲಾಗಿ . . .** [*krinō*] **ತೀರ್ಮಾನಿಸಿಕೊಳ್ಳಿರಿ.** KJVಯು ಈ *krinō*ದ ಇಮ್ಮಡಿ ಬಳಕೆಯನ್ನು ಪ್ರತಿಫಲಿಸುತ್ತದೆ: "ಇನ್ನು ಮೇಲೆ ನಾವು ಒಬ್ಬರೊಬ್ಬರ ವಿಷಯದಲ್ಲಿ ತೀರ್ಪು ಮಾಡದಿರೋಣ: ಆದರೆ ಬದಲಾಗಿ ಇದನ್ನು ತೀರ್ಪು ಮಾಡೋಣ."[40] ನಾವು ಇತರರಿಗೆ ತೀರ್ಪು ಮಾಡುವದನ್ನು ನಿಲ್ಲಿಸಬೇಕು ಮತ್ತು ನಮಗೆ ತೀರ್ಪು ಮಾಡಿಕೊಳ್ಳುವದನ್ನು ಆರಂಭಿಸಬೇಕು.

ಪೌಲನು ಒಂದು ಸರಿಯಾದ ಮನೋಭಾವವು ಅಗತ್ಯವೆಂಬುದರೊಂದಿಗೆ ಒಂದು ಸರಿಯಾದ ಕ್ರಿಯೆಯ ಅಗತ್ಯವಿದೆ ಎಂಬುದನ್ನು ಮಿಶ್ರಣಗೊಳಿಸುತ್ತಾ, **ಸಹೋದರನ ಎದುರಿಗೆ ಅಡ್ಡಿಯನ್ನಾಗಲಿ ಎಡತಡೆಯನ್ನಾಗಲಿ ಹಾಕಬಾರದೆಂದು** "ತೀರ್ಮಾನಿಸಿಕೊಳ್ಳಿರಿ" ಎಂದು ಹೇಳುತ್ತಾನೆ. "ಅಡ್ಡಿಯನ್ನಾಗಲಿ" ಮತ್ತು "ಎಡತಡೆಯನ್ನಾಗಲಿ" ಎಂಬ ಪದಗಳ ಅನುವಾದಿತ ಗ್ರೀಕ್ ಪದಗಳು ಒಂದೇ ರೀತಿಯ ಅರ್ಥವನ್ನು ಹೊಂದಿರುತ್ತವೆ. "ಅಡ್ಡಿಯನ್ನಾಗಲಿ" ಎಂಬುದು πρόσκομμα (*proskomma*) ಎಂಬ ಪದದಿಂದ ಬಂದ್ದು, ಅದು πρός (*pros*, "ಗೆ") ಮತ್ತು κόπτω (*koptō*, "ತಗುಲಿಸು") ಎಂಬ ಪದಗಳ ಸಂಯೋಜನೆಯಾಗಿರುತ್ತದೆ. ಪದವು "ಒಬ್ಬನು ತನ್ನ ಕಾಲನ್ನು ತಗುಲಿಸಿಕೊಳ್ಳುವ ಒಂದು ಅಡ್ಡಿಯನ್ನು" ಸೂಚಿಸುತ್ತದೆ.[41] "ಎಡತಡೆಯನ್ನಾಗಲಿ" ಎಂಬುದು σκάνδαλον (*skandalon*) ಎಂಬ ಪದದಿಂದ ಬಂದದ್ದು, ಆ ಪದದಿಂದಲೇ "scandal" ಮತ್ತು "scandalous" ಎಂಬ ಪದಗಳು ಬಂದಿರುತ್ತವೆ.[42] ಮೂಲತಃ, *skandalon* ಎಂಬ ಪದವು "ಬೇಟೆಯನ್ನು ಹಿಡಿಯಲು ಗಾಳಕ್ಕೆ ಜೋಡಿಸಲ್ಪಟ್ಟಿರುತ್ತಿದ್ದ ಬಲೆಯ ಹೆಸರಾಗಿತ್ತು." (CJB ಯು ಆ ಪದವನ್ನು "ಬಲೆ" ಎಂದು ಅನುವಾದಿಸುತ್ತದೆ; R. C. H. Lenski ಅನುವಾದವು "ಮರಣಬಲೆ" ಎಂಬ ಪದವನ್ನು ಬಳಸುತ್ತದೆ.[43]) ಹೊಸ ಒಡಂಬಡಿಕೆಯಲ್ಲಿ, *skandalon* ಎಂಬುದು ಯಾವಾಗಲೂ ರೂಪಕಾರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ ಮತ್ತು "ಇತರರಿಗೆ ಎಡತಡೆಯಾದುವ, ಅಥವಾ ದಾರಿಯಲ್ಲಿ ಎಡವಿ ಬೀಳುವಂತೆ ಮಾಡುವದನ್ನು"

ಸೂಚಿಸುವದಾಗಿರುತ್ತದೆ.[44]

ಅಪೊಸ್ತಲನು ನಮಗೆ ಸಹೋದರನೊಬ್ಬನ ದಾರಿಯಲ್ಲಿ ಅಡ್ಡಿಯನ್ನಾಗಲಿ ಅಥವಾ ಎಡತಡೆಯನ್ನಾಗಲಿ ಇಡಬಾರದೆಂದು ನಮ್ಮನ್ನು ಬೇಡಿಕೊಳ್ಳುತ್ತಿದ್ದಾನೆ. ಒಬ್ಬ ಸಹೋದರನಿಗೆ ಅಡ್ಡಿಯಾಗುವ ಅಥವಾ ಬೀಳುವಂತೆ ಮಾಡುವ ಯಾವುದನ್ನೂ ಮಾಡಕೂಡದು. ಒಂದು ಪ್ರಶ್ನೆಯು ಯಾವಾಗಲೂ ನಮ್ಮ ಮನಸ್ಸಿನಲ್ಲಿರತಕ್ಕದ್ದು: "ನಾನು ಮಾಡುವಂಥ ಕಾರ್ಯವು ನನ್ನ ಸಹೋದರನ ಮೇಲೆ ಹೇಗೆ ಪರಿಣಾಮ ಬೀರುವದು?" ಲೋಕದಲ್ಲಿರುವವರು ತಮ್ಮ ಹಕ್ಕುಗಳ ಬಗ್ಗೆ ಚಿಂತೆಯುಳ್ಳವರಾಗಿರುತ್ತರೆ; ಕ್ರೈಸ್ತರು ತಮ್ಮ ಜವಾಬ್ದಾರಿಗಳ ಬಗ್ಗೆ ಹೆಚ್ಚು ಚಿಂತೆಯುಳ್ಳವರಾಗಿರತಕ್ಕದ್ದು.[45]

**ವಚನ 14.** ಈ ವಚನವು ಮಾಂಸ ಸೇವನೆಯ ವಿಷಯದಲ್ಲಿ ಪೌಲನಿಗಿರುವ ಪ್ರೇರಿತವಾದ ನಿಲುವಿನ ಕುರಿತಾದ ಬಲವಾದ ಮಾತುಗಳಿಂದ ಆರಂಭಗೊಳ್ಳುತ್ತದೆ: **ಯಾವ ಪದಾರ್ಥವೂ ಸ್ವತಃ ಅಶುದ್ಧವಾದದ್ದಲ್ಲವೆಂದು ಬಲ್ಲೆನು, ಮತ್ತು ಕರ್ತನಾದ ಯೇಸುವಿನಲ್ಲಿದ್ದುಕೊಂಡು ದೃಢವಾಗಿ ನಂಬಿದ್ದೇನೆ.** ಪೌಲನು ಹೇಳುವ ವಿಧವು ಹೀಗಿತ್ತು, "ನನ್ನ ಮನಸ್ಸಿನಲ್ಲಿ ಯಾವ ಸಂಶಯವು ಇಲ್ಲವೇ ಇಲ್ಲ." "ಕರ್ತನಾದ ಯೇಸುವಿನಲ್ಲಿದ್ದುಕೊಂಡು" ಎಂಬದರರ್ಥವು ಅಪೊಸ್ತಲನು ಆ ವಿಷಯದಲ್ಲಿ ಯೇಸುವಿನಿಂದ ಒಂದು ವಿಶೇಷವಾದ ಪ್ರಕಟನೆಯನ್ನು ಪಡೆದಿದ್ದನು ಎಂದಾಗಿರಬಹುದು, ಅಥವಾ ಆತನು ಕರ್ತನ ಜೊತೆಗಿನ ತನ್ನ ದೀರ್ಘಕಾಳದ ಸಹವಾಸದಿಂದಾಗಿ ಈ ನಿರ್ಣಯಕ್ಕೆ ಬಂದಿದ್ದನೆಂದು ಆ ಪದಗಳ ಅರ್ಥವಾಗಿರಬಲ್ಲದು.[46]

ಪೌಲನು ಯಾವುದರ ಬಗ್ಗೆ ಸಂಪೂರ್ಣವಾಗಿ ಮನದಟ್ಟು ಮಾಡಲ್ಪಟ್ಟಿದ್ದನು? **ಯಾವ ಪದಾರ್ಥವೂ ಸ್ವತಃ ಅಶುದ್ಧವಾದದ್ದಲ್ಲವೆಂದು.** "ಅಶುದ್ಧ" ಎಂಬುದಕ್ಕೆ ಇರುವ ಗ್ರೀಕ್ ಪದವು κοινός (*koinos*), ಅದು "ಸಾಮಾನ್ಯ" ಎಂಬ ಅರ್ಥವನ್ನು ಸಹ ಕೊಡುತ್ತದೆ. ಅದು "ಧಾರ್ಮಿಕ ವಿಧಿಗಳ ಪ್ರಕಾರ ಅಶುದ್ಧ"ವಾದದ್ದನ್ನ ಸೂಚಿಸುವದಕ್ಕೆ ಯೆಹೂದ್ಯರು ಬಳಸುತ್ತಿದ್ದ ಪದವಾಗಿತ್ತು.[47] ಪೌಲನು ಹೇಳಿಕೆಗೆ ಇಲ್ಲಿ ಸ್ವಲ್ಪ ಅರ್ಹತೆಗೊಳಿಸುವ ಅಗತ್ಯವಿರುತ್ತದೆ, ಯಾಕೆಂದರೆ ಇತರ ಪತ್ರಿಕೆಗಳಲ್ಲಿ, ಆತನು "ನಮ್ಮ ಕೆಲವು ಆಲೋಚನೆಗಳು, ಮಾತುಗಳು ಮತ್ತು ಕೃತ್ಯಗಳು ಸ್ವಭಾವಿಕವಾಗಿಯೇ ಕೆಟ್ಟವುಗಳೆಂದು ಬಹಳ ಸ್ಪಷ್ಟವಾಗಿ ಹೇಳಿರುತ್ತಾನೆ."[48] ಮೂಲತಃ, ತಾನು ಉಂಟು ಮಾಡಿದ್ದೆಲ್ಲವೂ "ಒಳ್ಳೇದು" ಎಂದು ದೇವರು ಘೋಷಿಸಿದನು (ಆದಿ 1:31), ಆದರೆ ಆತನ ಸೃಷ್ಟಿಯ ಬಹುಪಾಲು (ಎಲ್ಲವೂ ಅಲ್ಲವಾದರೂ) ಕೆಟ್ಟದ್ದಕ್ಕಾಗಿ ಉಪಯೋಗಿಸಲ್ಪಟ್ಟಿದೆ ಮತ್ತು ದುರುಪಯೋಗ ಪಡಿಸಿಕೊಳ್ಳಲ್ಪಟ್ಟಿದೆ. ಹೇಗಿದ್ದರೂ, "ಸ್ವತಃ" (ಅದರ ಸಾರಭೂತವಾದ ಸ್ವಭಾವದಲ್ಲಿ), ಸೃಷ್ಟಿಯು "ಒಳ್ಳೇದು" ("ಶುದ್ಧ") ಆಗಿಯೇ ಉಳಿದಿರುತ್ತದೆ (ನೋಡಿರಿ 1 ತಿಮೊಥೆ 4:4). ಸನ್ನಿವೇಶದಲ್ಲಿ, ಪೌಲನು ನಿರ್ದಿಷ್ಟವಾಗಿ ಮಾಂಸದ ಕುರಿತಾಗಿ ಮಾತಾಡುತ್ತಿದ್ದಾನೆ. ಮಾಂಸವು ವಿಗ್ರಹಕ್ಕೆ ನೈವೇದ್ಯ ಮಾಡಲ್ಪಟ್ಟಿದ್ದಾಗ್ಯೂ, ಅಥವಾ ಅದು ಕೋಷರ್ ವಿಧಿಗಳನುಸಾರವಾಗಿ ಸಿದ್ಧಗೊಳಿಸಲ್ಪಟ್ಟಿಲ್ಲದೆ ಇದ್ದಾಗ್ಯೂ, ಯಾವ ಮಾಂಸವೂ "ಸ್ವತಃ ಅಶುದ್ಧವಾದದ್ದಾಗಿರಲಿಲ್ಲ."

ಪೌಲನು ಬಳಿಕ ಹೀಗೆ ಹೇಳುತ್ತಾನೆ, **ಆದರೆ ಯಾವನಾದರೂ ಒಂದು ಪದಾರ್ಥವನ್ನು ಅಶುದ್ಧವೆಂದು ಭಾವಿಸಿದರೆ ಅವನಿಗೆ ಅದು ಅಶುದ್ಧ.** ಏಕೆ? "ಏಕೆಂದರೆ ಆತನು ಒಂದು ಶುದ್ಧ ಮನಸ್ಸಾಕ್ಷಿಯಿಂದ ಅದನ್ನು ಉಪಯೋಗಿಸಲಾರನು ಅಥವಾ ಸೇವಿಸಲಾರನು."[49] ನಾವು

ಮನಸ್ಸಾಕ್ಷಿಯ ಕುರಿತಾದ ಈ ಮಹತ್ವದ ಸತ್ಯವನ್ನು ಗ್ರಹಿಸಿಕೊಳ್ಳುವ ಅಗತ್ಯವಿರುತ್ತದೆ: ಒಂದು ಸಂಗತಿಯು ತಪ್ಪು ಎಂದು ನಿಮ್ಮ ಮನಸ್ಸಾಕ್ಷಿಯು ನಿಮಗೆ ಹೇಳುವದಾದರೆ, ನಿಮಗೆ ಅದು ತಪ್ಪೇ ಆಗಿರುವದು. ರೋಮಾ 2:14, 15 ವಚನಗಳ ಮೇಲಿನ ನಮ್ಮ ವ್ಯಾಖ್ಯೆಗಳಲ್ಲಿ, ಒಬ್ಬನ ಮನಸ್ಸಾಕ್ಷಿಯನ್ನು ಮೀರಿ ಹೋಗದಿರುವದು ಎಷ್ಟು ಪ್ರಾಮುಖ್ಯವಾದದ್ದೆಂದು ಗಮನಿಸಿದೆವು. ಒಬ್ಬನು ತನ್ನ ಮನಸ್ಸಾಕ್ಷಿಯು ಯಾವುದನ್ನು ತಪ್ಪು ಎಂದು ಹೇಳುತ್ತದೋ ಅದನ್ನು ನಿರಂತರವಾಗಿ ಮಾಡುತ್ತಲೇ ಇದ್ದರೆ, ಆತನು ತನ್ನ ಮನಸ್ಸಾಕ್ಷಿಗೆ ಅಪರಾಧಿಗಳೆಂಬ ಬರೆ ಹಾಕಿಕೊಳ್ಳುವವನಾಗಿದ್ದಾನೆ (1 ತಿಮೊಥೆ 4:2), ಅದು ದೇವರಿಂದ ಕೊಡಲ್ಪಟ್ಟಿರುವ ಸುರಕ್ಷತಾಕವಚವಾಗಿ ಕಾರ್ಯನಿರ್ಹಿಸದಂತೆ ಅದನ್ನು ಅಶಕ್ತಗೊಳಿಸುವವನಾಗಿರುತ್ತಾನೆ. ಒಬ್ಬನು ತಪ್ಪಾದ ಭಾವನೆಗೆ ("ದೃಢವಿಲ್ಲದ" ಸಹೋದರನು ಮಾಡಿದ ಹಾಗೆ) ಎಡೆಗೊಡುವದಾದರೆ, ಮನಸ್ಸಾಕ್ಷಿಗೆ ಹೊಸದಾಗಿ ಕಲಿಸಿಕೊಡುವ ಅಗತ್ಯವಿರುತ್ತದೆ; ಹೇಗೂ, ಅದನ್ನು ಮಾಡುವ ತನಕ, ಆತನು ತನ್ನ ಮನಸ್ಸಾಕ್ಷಿಗೆ ವಿರುದ್ಧವಾಗಿ ನಡೆಯದಿರಬೇಕು. ಆತನು "ಒಂದು ಪದಾರ್ಥವನ್ನು ಅಶುದ್ಧವೆಂದು . . . ಭಾವಿಸಿದರೆ ಅವನಿಗೆ ಅದು ಅಶುದ್ಧ."

"ದೃಢವಿಲ್ಲದವರು" ಇರಲಿ ಅಥವಾ "ದೃಢವಿರುವವರು" ಇರಲಿ, ಎಲ್ಲಾ ಕ್ರೈಸ್ತರಿಗಾಗಿಯೂ ಒಂದು ಸಂದೇಶವು 14ನೇ ವಚನದಲ್ಲಿ ಸೇರ್ಪಡೆಗೊಳಿಸಲ್ಪಟ್ಟಿದೆ—ಆದರೆ ಪೌಲನ ಮಾತುಗಳು ವಿಶೇಷವಾಗಿ "ದೃಢವಿರುವ"ವರನ್ನು ಉದ್ದೇಶಿಸಿಯೇ ಇದ್ದವೆಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು. "ದೃಢವಿರುವ" ಸಹೋದರನು "ದೃಢವಿಲ್ಲದ" ಸಹೋದರನ ಬಗ್ಗೆ ಹೆಚ್ಚು ಅರ್ಥಮಾಡಿಕೊಳ್ಳಬೇಕು, ಆತನಿಗಾಗಿ ಹೆಚ್ಚು ಕನಿಕರ ಹೊಂದಿರಬೇಕು ಎಂಬುದು ಅಪೊಸ್ತಲನ ಬಯಕೆಯಾಗಿತ್ತು. "ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ" ಆ ಅಮೂಲ್ಯವಾದ ಸಹೋದರನು ಆತನಾಗಿದ್ದನು.

**ವಚನ 15.** (*γάρ*, *gar*) ಎಂದರೆ "ಕ್ಕಾಗಿ ಕಾರಣವನ್ನು ತೋರಿಸುವದು" ಎಂದರ್ಥವಾಗಿದೆ. ಆ ಪದವು ಬಹುಶಃ 13ನೇ ವಚನಕ್ಕೆ ಒಂದು ಕೊಂಡಿ ಆಗಿರುತ್ತದೆ, ಆ ವಚನವು, "ಸಹೋದರನ ಎದುರಿಗೆ ಅಡ್ಡಿಯನ್ನಾಗಲಿ ಎಡತಡೆಯನ್ನಾಗಲಿ ಹಾಕಬಾರದು" ಎಂದು ಹೇಳುತ್ತದೆ. ಏಕೆ ಹಾಕಬಾರದು? ಈ ಕಾರಣಕ್ಕಾಗಿಯೇ: **ನೀನು ತೆಗೆದುಕೊಳ್ಳುವ ಆಹಾರದಿಂದ ನಿನ್ನ ಸಹೋದರನ ಮನಸ್ಸಿಗೆ ನೋವಾದರೆ ನೀನು ಪ್ರೀತಿಗೆ ತಕ್ಕಂತೆ ಇನ್ನು ನಡೆಯುವವನಲ್ಲ.** ಇಲ್ಲಿ "ಆಹಾರ" (*βρῶμα*, *brōma*) ಎಂಬುದಕ್ಕೆ ಬಳಸಲಾಗಿರುವ ಗ್ರೀಕ್ ಪದವು ಸಾಮಾನ್ಯ ಪದವಾಗಿದೆ, ಆದರೆ ಅದು ಕ್ರೈಸ್ತರಲ್ಲಿ ಕೆಲವರು ಸೇವಿಸುತ್ತಿದ್ದ ಮತ್ತು ಇನ್ನು ಕೆಲವರು ಸೇವಿಸದೆ ಇರುತ್ತಿದ್ದ ಮಾಂಸವನ್ನು ಸೂಚಿಸುತ್ತದೆ.

"ನೋವಾದರೆ" ಎಂಬ ಪದಗುಚ್ಛವು *λυπέω* (*lupeō*) ಎಂಬ ಪದದಿಂದ ಬಂದದ್ದು, "ಒಂದು ಬಲವಾದ ಪದವಾಗಿದ್ದು"[50] ಅದರರ್ಥವು "ಖಿನ್ನನಾಗು, ಸಂಕಷಪಡು, ದುಃಖಿಸು."[51] ಸನ್ನಿವೇಶದಲ್ಲಿ, *lupeō* ವು ಭಾವಾನಾತ್ಮಕವಾಗಿ ಬೇಸರಗೊಂಡಿರುವ ದಕ್ಕಿಂತಲೂ ಹೆಚ್ಚಿನದ್ದನ್ನು ಸೂಚಿಸುತ್ತದೆ. 15ನೇ ವಚನದಲ್ಲಿನ ಮುಂದಿನ ವಾಕ್ಯವು "ನೋವಾದರೆ" ಎಂಬುದನ್ನು ಕೆಡಿಸುವಿಕೆಯೊಂದಿಗೆ ಜೋಡಿಸುತ್ತದೆ. ಪೌಲನು ಇಲ್ಲಿ ಒಬ್ಬ ಸಹೋದರನು *ಆತ್ಮೀಕವಾಗಿ* ನೋವು ಮಾಡಲ್ಪಟ್ಟರೆ, ಅದು *ನಿತ್ಯವಾಗಿ* ಕೆಡಿಸಿದಂತೆಯೇ ಎಂಬದರ ಕುರಿತು ಮಾತಾಡುತ್ತಿದ್ದಾನೆ.

ಮಾಂಸವನ್ನು ತಿನ್ನುವದು ಹೇಗೆ "ದೃಢವಿಲ್ಲದ" ಸಹೋದರನಿಗೆ ದುಃಖವುಂಟು ಮಾಡಿ, ಎಡವಿ ಬೀಳುವಂತೆ ಮಾಡಿ, ಕೆಡಿಸುವದಕ್ಕೆ ಸಾಧ್ಯ? ಇದಕ್ಕೆ ಉತ್ತಮವಾದ ಉತ್ತರವು 1 ಕೊರಿಂಥ 8ರಲ್ಲಿ ಸಿಕ್ಕುತ್ತದೆ, ಅದು ಒಂದು ವೇಳೆ ಇದೇ ರೀತಿಯ ವಿಚಾರವಲ್ಲದಿದ್ದರೂ, ಇದನ್ನು ಹೋಲುವಂತಹ ಪರಿಸ್ಥಿತಿಯನ್ನು ಬಣ್ಣಿಸುತ್ತದೆ:

> ವಿಗ್ರಹಗಳಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನುವದರ ವಿಷಯದಲ್ಲಿ ನಾನು ಹೇಳುವದೇನಂದರೆ—ಜಗತ್ತಿನಲ್ಲಿ ವಿಗ್ರಹವು ಏನೂ ಅಲ್ಲವೆಂದೂ ಒಬ್ಬ ದೇವರಿದ್ದಾನೆ ಹೊರತು ಬೇರೆ ದೇವರಿಲ್ಲವೆಂದೂ ಬಲ್ಲೆವು. . .ಆದರೆ ಈ ಜ್ಞಾನವು ಎಲ್ಲರಲ್ಲಿಯೂ ಇಲ್ಲ. ಕೆಲವರು ಈ ವರೆಗೂ ವಿಗ್ರಹದ ಬಳಿಗೆ ಹೋಗುವ ರೂಢಿಯಲ್ಲಿದ್ದದರಿಂದ ತಾವು ತಿನ್ನುವ ಪದಾರ್ಥಗಳನ್ನು ವಿಗ್ರಹಕ್ಕೆ ನೈವೇದ್ಯ ಮಾಡಿದ್ದೆಂದು ತಿನ್ನುತ್ತಾರೆ; ಹೀಗೆ ಅವರ ಮನಸ್ಸು ಬಲಹೀನವಾಗಿದ್ದು ಕಲೆಯನ್ನು ಹೊಂದುತ್ತದೆ. ಆದರೆ ಆಹಾರವು ನಮ್ಮನ್ನು ದೇವರ ಸನ್ನಿಧಿಗೆ ಸೇರಿಸಲಾಗದು. ತಿನ್ನದಿದ್ದರೆ ನಮಗೆ ಕಡಿಮೆಯಿಲ್ಲ, ತಿಂದರೆ ನಮಗೆ ಹೆಚ್ಚಿಲ್ಲ. ಆದರೂ ಈ ನಿಮ್ಮ ಸ್ವಾತಂತ್ರ್ಯವು ನಂಬಿಕೆಯಲ್ಲಿ ಬಲವಿಲ್ಲದವರಿಗೆ ಒಂದು ವೇಳೆ ವಿಘ್ನವಾದೀತು, ಎಚ್ಚರಿಕೆಯಾಗಿರಿ. ಜ್ಞಾನಿಯಾದ ನೀನು ವಿಗ್ರಹಾಲಯದಲ್ಲಿ ಊಟಕ್ಕೆ ಕೂತಿರುವಾಗ ನಿರ್ಬಲವಾದ ಮನಸ್ಸುಳ್ಳ ಸಹೋದರನು ಕಂಡರೆ ಅವನೂ ವಿಗ್ರಹಕ್ಕೆ ನೈವೇದ್ಯಮಾಡಿದ ಪದಾರ್ಥಗಳನ್ನು ತಿನ್ನುವದಕ್ಕೆ ಧೈರ್ಯತಂದುಕೊಂಡಾನಲ್ಲವೇ. ಹೀಗೆ ಆ ಬಲಹೀನನು ನಿನ್ನ ಜ್ಞಾನದಿಂದ ನಾಶವಾಗುತ್ತಾನೆ. ಅವನು ಸಹೋದರನಲ್ಲವೇ. ಅವನಿಗಾಗಿಯೂ ಕ್ರಿಸ್ತನು ತನ್ನ ಪ್ರಾಣಕೊಟ್ಟನಲ್ಲವೇ (1 ಕೊರಿಂಥ 8:4-11).

Moo ಎರಡನೆಯ ಸಾಧ್ಯತೆಯನ್ನು ಸೇರ್ಪಡೆಗೊಳಿಸುತ್ತಾನೆ: ಒಬ್ಬ "ದೃಢವಿರುವ" ಸಹೋದರನು ಮಾಂಸ ತಿನ್ನುವ ತನ್ನ ಸ್ವಾತಂತ್ರ್ಯವನ್ನು ಪ್ರದರ್ಶಿಸುವದರಿಂದಾಗಿ "ದೃಢವಿಲ್ಲದ" ಸಹೋದರನು ಎಷ್ಟೊಂದು ನೋವುಗೊಳ್ಳಬಹುದೆಂದರೆ ಅದು ಅವನನ್ನು ಒಟ್ಟಾರೆಯಾಗಿ ದೂರಕ್ಕೆ ಓಡಿಸಿ ಬಿಡಬಲ್ಲದು.[52] ಹೇಗೂ, ಪೌಲನ ಪ್ರಾಥಮಿಕ ಕಳಕಳಿಯು ಬಹುಶಃ ಏನಾಗಿತ್ತೆಂದರೆ, "ದೃಢವಿರುವ" ಸಹೋದರನು ಮಾಂಸ ತಿನ್ನುವದನ್ನು "ದೃಢವಿಲ್ಲದ" ಸಹೋದರನು ಕಂಡರೆ, ಆತನು ಸಹ ಮಾಂಸವನ್ನು ತಿನ್ನುವನು—ಅದು ತಪ್ಪು ಎಂದು ಆತನ ಮನಸ್ಸಾಕ್ಷಿಯು ಅವನಿಗೆ ಹೇಳಿದಾಗ್ಯೂ ಸೇವಿಸುವನು—ಎಂಬುದೆ. ಹಾಗೆ ಮಾಡುವ ಮೂಲಕ, ಆತನು ಪಾಪ ಮಾಡಿದವನಾಗುವನು ಮತ್ತು ದೋಷಿಯೆಂದು ಎಣಿಸಲ್ಪಡುವನು (14:23).

ಪೌಲನು ತಿಳಿಸಲಿಚ್ಛಿಸಿದ ಬಲವಾದ ಸಂದೇಶವು ಇದೇ ಆಗಿತ್ತು: ಒಬ್ಬ ಕ್ರೈಸ್ತನು ತನ್ನ ಕೃತ್ಯಗಳ ಮೂಲಕ ತನ್ನ ಸಹೋದರನಿಗೆ ಆತ್ಮೀಕವಾಗಿ ನೋವುಂಟು ಮಾಡುವದಾದರೆ, ಆತನು "ಪ್ರೀತಿಗೆ ತಕ್ಕಂತೆ ಇನ್ನು ನಡೆಯುವವಲ್ಲ."[53] ಪೌಲನಿಗೆ ಯಾರು ಸರಿ ಮತ್ತು ಯಾರು ತಪ್ಪು ಎಂಬದಕ್ಕಿಂತಲೂ ಪ್ರೀತಿಯು ತೋರಿಸಲ್ಪಡುವದರ ಕುರಿತಾಗಿಯೇ ಹೆಚ್ಚು ಕಳಕಳಿಯಿತ್ತು.

ರೋಮಾ 13:8ರಲ್ಲಿ, ಪೌಲನು ಹೀಗೆ ಆಜ್ಞಾಪಿಸಿದ್ದನು, "ಒಬ್ಬರನ್ನೊಬ್ಬರು *ಪ್ರೀತಿ* ಸಬೇಕೆಂಬ ಋಣವೇ ಹೊರತು ಬೇರೆ ಯಾವ ಸಾಲವೂ ನಿಮಗೆ ಇರಬಾರದು" (ಒತ್ತಿ ಹೇಳಿದ್ದು ನನ್ನದು). Leon Morris ಹೀಗೆ ಬರೆಯುತ್ತಾನೆ, "ಕ್ರೈಸ್ತರಿಗಾದರೋ[,] ಪ್ರೀತಿಯೇ ಮಾನದಂಡ ಮತ್ತು ಪ್ರೀತಿಯೇ ಪ್ರೇರಣೆ."[54] ನಮ್ಮಲ್ಲಿ ಬಹುತೇಕರು ಭಿನ್ನಾಭಿಪ್ರಾಯಗಳನ್ನು

ಇಷ್ಟಪಡುವದಿಲ್ಲ ಮತ್ತು ಅವುಗಳನ್ನು ನಕಾರಾತ್ಮಕವಾಗಿ ಕಾಣುತ್ತೇವೆ. ಬಹುಶಃ ನಾವು ಅವುಗಳನ್ನು "ಕ್ರೈಸ್ತ ಪ್ರೀತಿಯನ್ನು ಅಭ್ಯಾಸ ಮಾಡಿಕೊಳ್ಳುವದಕ್ಕೆ ಸಿಕ್ಕುವ ಅವಕಾಶಗಳು" ಎಂದು ಕಾಣುವದಾದರೆ ಸಹಾಯಕವಾಗಿರಬಹುದಾಗಿದೆ.[55]

15ನೇ ವಚನವು ಈ ಪ್ರಚೋದನಕಾರಿ ಆಜ್ಞಾಪಣೆಯೊಂದಿಗೆ ಮುಕ್ತಾಯಗೊಳ್ಳುತ್ತದೆ: **ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ ಅವನನ್ನು ನಿನಗೆ ಇಷ್ಟವಾದ ಆಹಾರದ ನಿಮಿತ್ತ ಕೆಡಸಬಾರದು** (ನೋಡಿರಿ 1 ಕೊರಿಂಥ 8:11). ಪುನಃ, ಪೌಲನು ಕಠಿಣ ಮಾತುಗಳನ್ನು ಉಪಯೋಗಿಸುತ್ತಾನೆ. "ಕೆಡಿಸಬಾರದು" ಎಂಬುದು ἀπόλλυμι (*apollumi*) ಎಂಬ ಪದದಿಂದ ಬಂದಿದ್ದು ಅದರ್ಥವು "ಸಂಪೂರ್ಣವಾಗಿ ನಾಶಗೊಳಿಸು" ಎಂದಾಗಿರುತ್ತದೆ.[56] ಯಾರು ಸಂಪೂರ್ಣವಾಗಿ ನಾಶಗೊಳ್ಳುವ ಅಪಾಯದಲ್ಲಿದ್ದರು? "ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ" ಆತನೇ—ಕರ್ತನಿಂದ ಬಹುವಾಗಿ ಅಮೂಲ್ಯನೆಂದೆಣಿಸಲ್ಪಡುವ ಸಹೋದರನು, ಎಷ್ಟು ಅಮೂಲ್ಯನೆಂದರೆ ಅವನಿಗೋಸ್ಕರ ಶಿಲುಬೆಯ ಮರಣವನ್ನು ಅನುಭವಿಸಿದನು.

ಇದು ಪೌಲನ ವಾಚಕರಿಗೆ ಎಲ್ಲವನ್ನು ಕುರಿತು ಒಂದು ಸ್ಪಷ್ಟವಾದ ಚಿತ್ರಣವನ್ನು ಒದಗಿಸಿರಹುದಾಗಿದೆ. ಒಂದು ಕಡೆಯಲ್ಲಿ ಮಾಂಸವನ್ನು ತಿನ್ನುವದಕ್ಕೆ ಹಕ್ಕು, ಮತ್ತು ಇನ್ನೊಂದು ಕಡೆಯಲ್ಲಿ ಯಾರಿಗಾಗಿ ಕ್ರಿಸ್ತನು ಸತ್ತನೋ ಆತನ ನಿತ್ಯವಾದ ಅಂತ್ಯಸ್ಥಿತಿಯು ಇರುತ್ತದೆ. R. W. Stott ಹೀಗೆ ಕೇಳುತ್ತಾನೆ, "ಕ್ರಿಸ್ತನು ಅವನಿಗೋಸ್ಕರ ಸಾಯುವಷ್ಟರ ಮಟ್ಟಿಗೆ ಆತನನ್ನು ಪ್ರೀತಿಸಿದನೋ, ಮತ್ತು ನಾವು ಆತನ ಮನಸ್ಸಾಕ್ಷಿಗೆ ನೋವುಂಟು ಮಾಡದಂತಿರುವಷ್ಟರ ಮಟ್ಟಿಗೆ ಆತನನ್ನು ಪ್ರೀತಿಸಬೇಕಲ್ಲವೇ?"[57] ಪೌಲನ ಮಾತುಗಳು ಸಹ ನಮಗೆ ವಿಷಯಗಳನ್ನು ಸ್ಪಷ್ಟಗೊಳಿಸತಕ್ಕದ್ದು. ನೀವು ಮುಂದಿನ ಸಾರಿ ಮತ್ತೊಬ್ಬರೊಂದಿಗೆ ಒಂದು ಗಂಭೀರವಾದ ಸಂಘರ್ಷ ಎದುರುಗೊಂಡಾಗ, ಭಿನ್ನಾಭಿಪ್ರಾಯದ ಚರ್ಚೆಯಾಂಶವನ್ನು ಶಿಲುಬೆಯೊಂದಿಗೆ ಹೋಲಿಸಿ ನೋಡಿರಿ. ಯಾವದು ಅಧಿಕ ಪ್ರಾಮುಖ್ಯವಾದದ್ದು? ಪೌಲನು ನಮಗೆ ಹೀಗೆ ಹೇಳಬಹುದಾಗಿದೆ,

"ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ ಅವನನ್ನು *ನಿಮ್ಮಿಷ್ಟದಂತೆಯೇ ಆಗಬೇಕೆಂಬ ನಿಮ್ಮ ಬಯಕೆಯಿಂದ* ಕೆಡಿಸಬಾರದು."

"ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ ಅವನನ್ನು *ನಿಮ್ಮ ಹಕ್ಕುಗಳನ್ನು ಸಾಧಿಸಿಬೇಕೆಂಬ ಹಠದಿಂದ* ಕೆಡಿಸಬಾರದು."

"ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ ಅವನನ್ನು *ನಿಮ್ಮ ಭಾವನೆಗಳಿಗೆ ನೋವುಂಟಾದಾಗ ಪ್ರತೀಕಾರ ಸಲ್ಲಿಸುವ ಮೂಲಕ* ಕೆಡಿಸಬಾರದು."

**ವಚನ 16.** NASB ತರ್ಜುಮೆಯಲ್ಲಿ ಇನ್ನೊಂದು "ಆದುದರಿಂದ" ಎಂಬದರೊಂದಿಗೆ ಈ ವಚನವು ಆರಂಭಗೊಳ್ಳುತ್ತದೆ. ಪೌಲನು ಇನ್ನಷ್ಟು ಉಪಸಂಹಾರಗಳನ್ನು ಮುಂದಿಡುವದಕ್ಕೆ ಸಿದ್ಧಗೊಂಡಿದ್ದನು: ಆತನು ಹೀಗೆ ಹೇಳುತ್ತಾನೆ, **ನಿಮಗಿರುವ ಮೇಲು ದೂಷಣೆಗೆ ಆಸ್ಪದವಾಗಬಾರದು.** "ನಿಮಗಿರುವ ಮೇಲು" ಎಂಬುದು ಮಾಂಸ ತಿನ್ನುವದನ್ನು ಸೂಚಿಸುತ್ತದೆ. "ದೃಢವಿರುವ" ಸಹೋದರನಿಗಾದರೋ ಮಾಂಸವನ್ನು ತಿನ್ನುವದು "ಮೇಲು" ಆಗಿತ್ತು, ಅದು ಆಹ್ಲಾದಕರವಾದ ಮತ್ತು ದೇವರಿಂದ ಅನುಮೋದಿಸಲ್ಪಟ್ಟಂತಹ

ಸಂಗತಿಯಾಗಿತ್ತು. ಹೇಗಿದ್ದರೂ, ಕೆಲವೊಂದು ಪರಿಸ್ಥಿತಿಗಳಲ್ಲಿ, ಆಚರಣೆ ಮತ್ತು ಅದರಿಂದಾಗುವ ಪರಿಣಾಮಗಳನ್ನು "ದೂಷಣೆ" ಎಂದು ಹೇಳಲ್ಪಡಬಹುದಾಗಿದೆ. "ದೂಷಣೆಗೆ ಆಸ್ಪದವಾಗಬಾರದು" ಎಂಬುದು ಗ್ರೀಕ್.ನ βλασφημέω (*blasphēmeō*) ಎಂಬ ಪದದಿಂದ ಬಂದಿರುತ್ತದೆ, ಅದು ಅಕ್ಷರಶಃ "ದೂಷಣೆಗೊಳ್ಳು" ಎಂದು ಅರ್ಥವಾಗಿರುತ್ತದೆ.

ಮಾಂಸ ತಿನ್ನುವದನ್ನು "ದೂಷಣೆ" ಎಂದು ಯಾರು ಹೇಳುವರು? ಪೌಲನು ಮನಸ್ಸಿನಲ್ಲಿ "ದೃಢವಿಲ್ಲದ" ಸಹೋದರರನನ್ನು ಇಟ್ಟುಕೊಂಡವನಾಗಿ ಈ ಮಾತುಗಳನ್ನು ಹೇಳಿರುವ ಸಾಧ್ಯತೆಯಿದೆ; ಆದರೆ 16ರಿಂದ 18 ವಚನಗಳಲ್ಲಿ, ಅಪೊಸ್ತಲನು ಈ ವಿವಾದಾಂಶದ ಸಂಕೀರ್ಣವಾದ ಪರಿಣಾಮಗಳನ್ನು ವಿಸ್ತರಿಸುತ್ತಾ ಅದರಲ್ಲಿ ಒಟ್ಟಾರೆಯಾಗಿ ಮಾನವ ಜನಾಂಗವನ್ನೆಲ್ಲಾ ಸೇರ್ಪಡೆಗೊಳಿಸಿರುತ್ತಾನೆ. (18ನೇ ವಚನವು "ಮನುಷ್ಯರಿಗೆ" ಎಂದು ಸೂಚಿಸುತ್ತದೆ.) ಬಹು ಸಂಭಾವ್ಯವಾಗಿ, ಸಭೆಯಲ್ಲಿನ ಕಚ್ಚಾಟಗಳು ಒಟ್ಟಾರೆಯಾಗಿ ಹೇಗೆ ಕ್ರಿಸ್ತನ ಧ್ಯೇಯಕ್ಕೆ ದಕ್ಕೆಯನ್ನುಂಟು ಮಾಡುತ್ತದೆಂಬದರ ಬಗ್ಗೆ ಪೌಲನು ಕಳಕಳಿ ಹೊಂದಿದ್ದನು. ಮಾಂಸವನ್ನು ತಿನ್ನುವದರ ಬಗ್ಗೆ ಸ್ವಭಾವತಃ ಯಾವದೇ ತಪ್ಪು ಇರಲಿಲ್ಲ—ಆದರೆ ಆ ಪರಿಪಾಠವು ಘರ್ಷಣೆಗೆ, ಬೇಸರದ ಭಾವನೆಗಳಿಗೆ ಕಾರಣವಾದಲ್ಲಿ, ಮತ್ತು ಸಭೆಗಳಲ್ಲಿ ಪಂಗಡವುಂಟಾಗುವದಕ್ಕೆ ಸಹ ಕಾರಣವಾದಲ್ಲಿ, ಅದು ಬಹಳ ತಪ್ಪಾದದ್ದು ಎಂದಾಗುತ್ತದೆ. ಕ್ರಿಸ್ತನ ಧ್ಯೇಯಕ್ಕೆ ಹಾನಿಯುಂಟು ಮಾಡುವಂತದ್ದು ಸಭೆಯಲ್ಲಿನ ಸದಸ್ಯರು ಒಬ್ಬರೊಂದಿಗೊಬ್ಬರು ಹೊಂದಾಣಿಕೆಯಾಗಿ ಹೋಗದಿರುವದೇ ಹೊರತು ಬೇರೆ ಇನ್ನಾವದೂ ಅಲ್ಲ. ಯಾವಾಗಲೂ ನಡೆಯುವಂತೆಯೇ, ಸಭಿಕರಲ್ಲಿ ಸಮಸ್ಯೆಯಿದೆ ಎಂದರೆ ಆ ಸುದ್ದಿಯು ಸಮುದಾಯದಲ್ಲೆಲ್ಲಾ ಹರಡಿಕೊಳ್ಳುತ್ತದೆ ಮತ್ತು ಸಭೆಯು ಅಪಹಾಸ್ಯಕ್ಕೆ ಗುರಿಯಾಗುತ್ತದೆ. ಅದು ಸಂಭವಿಸುವದೇ ಆದಲ್ಲಿ, "ಮೇಲು" ಖಂಡಿತವಾಗಿಯೂ "ದೂಷಣೆಗೆ" ಒಳಗಾಗುವದಕ್ಕೆ ಆಸ್ಪದವಾಗಬಹುದು.

ನಾವು ಮಾಡುವಂತದ್ದೆಲ್ಲದರ ಕುರಿತಾಗಿ, ನಾವು ನಮ್ಮನ್ನು "ಇದು ಕ್ರಿಸ್ತನ ಧ್ಯೇಯ ಮತ್ತು ಸುವಾರ್ತೆಯ ಪ್ರಸರಣೆಯ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರುತ್ತದೆ?"; "ಇದು ಸಭೆಯ ಬೆಳವಣಿಗೆಗೆ ಸಹಾಯಕವಾಗುವದೋ ಅಥವಾ ಅಡ್ಡಿಯಾಗುವದೋ?" ಎಂಬಂತಹ ಪ್ರಶ್ನೆಗಳನ್ನು ಕೇಳಿಕೊಳ್ಳುವ ಅಗತ್ಯವಿರುತ್ತದೆ.

**ವಚನ 17. ಯಾಕೆಂದರೆ ತಿನ್ನುವದೂ ಕುಡಿಯುವದೂ** [ಒಂದು ಊಟವನ್ನು ಮಾಡುವದಲ್ಲ[58]] **ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ.** "ದೇವರ ರಾಜ್ಯವು" ಎಂಬುದು ಇಲ್ಲಿ ಸಭೆಯನ್ನು ಸೂಚಿಸುತ್ತದೆ.[59] ಪೌಲನು ಒಬ್ಬ ಸಹೋದರನ ಕುರಿತ ಕಳಕಳಿಯಿಂದ ಒಟ್ಟಾರೆಯಾದ ಸಹೋದರತ್ವದ ಕುರಿತಾಗಿ ಮಾತಾಡಲು ಸಾಗುತ್ತಾನೆ—ಅಂದರೆ, ಯಾರಾರಿಗೋಸ್ಕರ "ಕ್ರಿಸ್ತನು ಪ್ರಾಣಕೊಟ್ಟನೋ" ಅವ*ರೆಲ್ಲರಿ*ಗೋಸ್ಕರವಾಗಿ ಕಳಕಳಿ (ನೋಡಿರಿ ಎಫೆಸ 5:23, 25). ರಾಜ್ಯವನ್ನು/ಸಭೆಯನ್ನು ಅಸ್ತಿತ್ವಕ್ಕೆ ತರುವದಕ್ಕೋಸ್ಕರ ದೇವರು ಮಾಡಿದ್ದೆಲ್ಲವನ್ನೂ ಕುರಿತು ಒಮ್ಮೆ ಯೋಚಿಸಿರಿ. ಜನರು ಕುಳಿತುಕೊಂಡು ರಾತ್ರಿ ಊಟಕ್ಕೆ ಏನು ಬಡಿಸುತ್ತೇವೆಂಬ ಬಗ್ಗೆ ವಾದವಿವಾದ ಮಾಡುತ್ತಿರಬೇಕೆಂಬುದಕ್ಕಾಗಿ ಆತನು ರಾಜ್ಯವನ್ನು/ಸಭೆಯನ್ನು ಅಸ್ತಿತ್ವಕ್ಕೆ ತಂದನೋ? ಇಲ್ಲ. ದೇವರ ರಾಜ್ಯವೆಂದರೆ ಕೇವಲ ಇದೇ ಆಗಿರುವ*ದಿಲ್ಲ* ಎಂದು ಪೌಲನು ಹೇಳುತ್ತಾನೆ (ನೋಡಿರಿ 1 ಕೊರಿಂಥ 8:8). ಬದಲಾಗಿ,

"ದೇವರ ರಾಜ್ಯ . . . ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ."[60]

> "ನೀತಿಯೂ" (δικαιοσύνη, *dikaiosunē*): ನಾವು ಜೀವಿಸಬೇಕೆಂದು ದೇವರು ಬಯಸುವ ವಿಧದಲ್ಲಿ ಜೀವಿಸುವದು.
>
> "ಸಮಾಧಾನವೂ" (εἰρήνη, *eirēnē*): ನಮ್ಮ ಸಹೋದರರು ಹಾಗೂ ಸಹೋದರಿಯರ ಸಂಗಡ ಸಮಾಧಾನದಿಂದ ಬದುಕುವದಕ್ಕೆ ಶ್ರಮಿಸುವದು.
>
> "ಆನಂದವೂ" (χαρά, *chara*): ಇತರರ ಜೀವಿತಗಳಲ್ಲಿ ಆನಂದವನ್ನುಂಟು ಮಾಡುವದಕ್ಕೆ ಪ್ರಯತ್ನಿಸುವದು, ಅದು "ಪವಿತ್ರಾತ್ಮನಿಂದ" ಮಾತ್ರವೇ ಸಿಕ್ಕುವಂತಹ ಆನಂದವಾಗಿರುತ್ತದೆ.

ಪುನಃ, ಪೌಲನು ಸರಿಯಾದ ಆದ್ಯತೆಗಳನ್ನು ಬೆಳೆಸಿಕೊಳ್ಳಬೇಕೆಂದು ಕರೆ ಕೊಡುತ್ತಾನೆ. ಮುಂದಿನ ಸಾರಿ ಯಾವದಾದರೂ ಕ್ಷುಲ್ಲಕ ವಿಚಾರದಲ್ಲಿ ನಮ್ಮ ತಾಳ್ಮೆಯನ್ನು ಕಳೆದುಕೊಳ್ಳುವ ಸಂದರ್ಭವುಂಟಾದರೆ, ನಾವು ಒಂದು ಕ್ಷಣ ತಡೆದು ಹೀಗೆ ಕೇಳಿಕೊಳ್ಳಬೇಕು, "ದೇವರ ರಾಜ್ಯವು ಒಟ್ಟಾರೆಯಾಗಿ ಇದೇನೋ? ಇದು ನೀತಿ, ಸಮಾಧಾನ, ಮತ್ತು ಆನಂದಗಳನ್ನು ಉತ್ತೇಜಿಸುವದಕ್ಕೆ ಅವಶ್ಯಕವಾದದ್ದೋ?"

**ವಚನ 18.** ಪೌಲನು ಚರ್ಚೆಯಲ್ಲಿ ಈ ಯೋಚನೆಯೊಂದಿಗೆ ತನ್ನ ವಿಚಾರಗಳನ್ನು ಮುಕ್ತಾಯಕ್ಕೆ ತರುತ್ತಾನೆ: **ಈ ಪ್ರಕಾರವಾಗಿ ಕ್ರಿಸ್ತನ ಸೇವೆಯನ್ನು ಮಾಡುವವನು ದೇವರಿಗೆ ಮೆಚ್ಚಿಕೆಯಾದವನಾಗಿಯೂ ಮನುಷ್ಯರಿಗೆ ಸಂಭಾವಿತನಾಗಿಯೂ ಇರುವನಷ್ಟೆ.** "ಈ ಪ್ರಕಾರವಾಗಿ" ಎಂಬುದು ಅಪೊಸ್ತಲನು 1ನೇ ವಚನದಿಂದ ಹೇಳಿರುವದನ್ನೆಲ್ಲಾ ಒಳಗೊಳ್ಳುವಂತದ್ದಾಗಿದೆ. ಅದರಲ್ಲಿ ಒಬ್ಬ ಸಹೋದರನನ್ನು ಸ್ವೀಕರಿಸಿಕೊಳ್ಳುವದು ಮತ್ತು ಆತನಿಗೆ ತೀರ್ಪು ಮಾಡದಿರುವದು ಸೇರಿರುತ್ತದೆ. ಅದರಲ್ಲಿ ಒಬ್ಬ ಸಹೋದರನ ಎದುರಿಗೆ ಅಡ್ಡಿಯನ್ನು ಹಾಕದಿರುವಂತಿರುವದಕ್ಕಾಗಿ ಒಬ್ಬನು ತನ್ನ ಹಕ್ಕುಗಳನ್ನು ತ್ಯಜಿಸಿ ಬಿಡುವದು ಸೇರಿರುತ್ತದೆ. ಅದರಲ್ಲಿ "ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ" ಆ ಸಹೋದರನಿಗೆ ಯಾವಾಗಲೂ ಪ್ರೀತಿ ತೋರಿಸುವದು ಸೇರಿರುತ್ತದೆ. ನಾವು ಇದೆಲ್ಲವನ್ನೂ *ಸಹೋದರನಿಗೆ* ಸೇವೆ ಮಾಡಿದಂತೆ ಎಂಬದಾಗಿ ಭಾವಿಸಬಹುದು, ಆದರೆ ಪೌಲನು ಅದನ್ನು *ಕ್ರಿಸ್ತನಿಗೆ* ಸೇವೆ ಎಂಬದಾಗಿ ಸೂಚಿಸುತ್ತಾನೆ. ಪೌಲನು ಎಲ್ಲವನ್ನೂ ಕ್ರಿಸ್ತನಿಗೆ ಸಂಬಂಧ ಪಡಿಸುತ್ತಾನೆ (ನೋಡಿರಿ 1 ಕೊರಿಂಥ 2:2). ಪುನಃ, ಆತನು ಯಾರು ಸರಿ ಮತ್ತು ಯಾರು ತಪ್ಪು ಎಂಬ ಪ್ರಶ್ನೆಯನ್ನು ಮೀರಿ ವಿವಾದಾಂಶವನ್ನು ಮೇಲಕ್ಕೆ ಕೊಂಡೊಯ್ಯುತ್ತಾನೆ. ನಾವು ಕರ್ತನಿಗೆ ಸೇವೆ ಮಾಡುತ್ತಿದ್ದೇವೋ ಅಥವಾ ಇಲ್ಲವೋ ಎಂಬದರ ವಿಚಾರವಾಗುವಂತೆ ಅದನ್ನು ಮಾಡುತ್ತಾನೆ.

ನಾವು ಕ್ರಿಸ್ತನು ನಿರ್ದೇಶಿಸಿರುವ ಪ್ರಕಾರ ಜೀವಿಸುವ ಮೂಲಕ ಕ್ರಿಸ್ತನ ಸೇವೆಯನ್ನು ಮಾಡುವದಾದರೆ, ಮೊದಲು ನಾವು "ದೇವರಿಗೆ ಮೆಚ್ಚಿಕೆಯಾದವರಾಗಿ" ಇರುವೆವು. ದೇವರಿಗೆ ಮೆಚ್ಚಿಕೆಯುಳ್ಳವರಾಗಿರುವದು ಪ್ರಾಥಮಿಕವಾಗಿ ಮಹತ್ವವಾದದ್ದು. ಹೇಗೂ, ಇನ್ನೊಂದು ಬಯಸತಕ್ಕ ಫಲಿತವು ಉಂಟಾಗಹುದಾಗಿದೆ: ನಾವು "ಮನುಷ್ಯರಿಗೆ

ಸಂಭಾವಿತರಾಗಿ" ಇರುವೆವವು.[61] ಸಭಿಕರಲ್ಲಿ ಪ್ರೀತಿ ಮತ್ತು ಸಾಮರಸ್ಯಗಳು ಮೇಲುಗೈಯಾಗುವಾಗ, ಹೊರಗಿನ ಲೋಕವು ಸಹ ಪ್ರಭಾವಿತಗೊಳ್ಳುತ್ತದೆ. McCord ತರ್ಜುಮೆಯಲ್ಲಿ "ಈ ವಿಧದಲ್ಲಿ ಕ್ರಿಸ್ತನ ಸೇವೆ ಮಾಡುವವನು . . . ಮನುಷ್ಯರೊಳಗೆ ಮರ್ಯಾದೆ ಪಡೆಯುತ್ತಾನೆ" ಎಂದಿರುತ್ತದೆ.

## ಸಮಾಧಾನದಲ್ಲಿ ಒಬ್ಬರನ್ನೊಬ್ಬರು ಸ್ವೀಕರಿಸಿಕೊಳ್ಳುವದು (14:19-23)

**[19]ಆದದರಿಂದ ನಾವು ಸಮಾಧಾನಕ್ಕೂ ಪರಸ್ಪರರ ಭಕ್ತಿವೃದ್ಧಿಗೂ ಅನುಕೂಲವಾಗಿರುವವುಗಳನ್ನು ಸಾಧಿಸಿಕೊಳ್ಳೋಣ. [20]ದೇವರು ಕಟ್ಟಿದ್ದನ್ನು ನೀನು ಆಹಾರದ ನಿಮಿತ್ತವಾಗಿ ಕೆಡವಬೇಡ. ಎಲ್ಲಾ ಪದಾರ್ಥಗಳೂ ಶುದ್ಧವೇ; ಆದರೆ ತಿಂದು ಮತ್ತೊಬ್ಬರಿಗೆ ವಿಘ್ನವನ್ನುಂಟುಮಾಡುವದು ಕೆಟ್ಟದ್ದು. [21]ಮಾಂಸ ತಿನ್ನುವದನ್ನಾಗಲಿ ದ್ರಾಕ್ಷಾರಸ ಕುಡಿಯುವದನ್ನಾಗಲಿ ನಿನ್ನ ಸಹೋದರನಿಗೆ ಅಡ್ಡಿಯನ್ನುಂಟುಮಾಡುವ ಬೇರೆ ಯಾವದನ್ನಾಗಲಿ ಬಿಟ್ಟುಬಿಡುವದೇ ಒಳ್ಳೇದು. [22]ನೀನಗಿರುವ ನಂಬಿಕೆಯು ದೇವರಿಗೆ ಮಾತ್ರ ಗೋಚರವಾಗಿ ನಿನ್ನ ಮಟ್ಟಿಗೇ ಇರಲಿ. ತಾನು ಒಪ್ಪಿದ ಕೆಲಸದ ವಿಷಯದಲ್ಲಿ ಇದು ಸರಿಯೋ ಸರಿಯಲ್ಲವೋ ಎಂದು ಸಂಶಯ ಪಡದವನೇ ಧನ್ಯನು. [23]ಸಂಶಯಪಟ್ಟು ಉಣ್ಣುವವನು ಸಂಶಯದಿಂದ ಉಣ್ಣುವ ಕಾರಣದಿಂದ ದೋಷಿಯಾಗಿದ್ದಾನೆ. ಯಾವುದಕ್ಕೆ ನಂಬಿಕೆಯು ಆಧಾರವಿಲ್ಲವೋ ಅದು ಪಾಪ.**

**ವಚನ 19.** ಈ ವಿಭಾಗವು **ಆದದರಿಂದ** ಎಂದು ಆರಂಭಗೊಳ್ಳುತ್ತದೆ, ಅದು "ಆದದರಿಂದ" ಎಂಬುದು οὖν (*oun*) ಎಂಬ ಪದದಿಂದ ಬಂದದ್ದು, ಈ ಪದವು 13 ಮತ್ತು 16 ವಚನಗಳಲ್ಲಿ "ಆದಕಾರಣ" ಎಂದು ಅನುವಾದಿಸಲ್ಪಟ್ಟಿದೆ. ಪೌಲನು ಈ ವಿಚಾರವನ್ನು ವಿಸ್ತಾರಗೊಳಿಸುತ್ತಾ ಹೋದಂತೆ, ನಮಗೆ ಈ ಗುರಿಯು ಇರತಕ್ಕದ್ದು ಎಂದು ಆತನು ಒತ್ತಿ ಹೇಳುತ್ತಾನೆ: **ಸಮಾಧಾನಕ್ಕೂ ಪರಸ್ಪರ ಭಕ್ತಿವೃದ್ಧಿಯೂ ಅನುಕೂಲವಾಗಿರುವವುಗಳನ್ನು ಸಾಧಿಸಿಕೊಳ್ಳೋಣ.** "ಸಾಧಿಸಿಕೊಳ್ಳೋಣ" (διώκω, *diōkō* ಎಂಬದರಿಂದ ಬಂದದ್ದು) ಎಂಬುದು ಒಂದು ಕ್ರಿಯಾತ್ಮಕ ಪದವಾಗಿದೆ. AB ತರ್ಜುಮೆಯಲ್ಲಿ "ಹಾಗಾದರೆ ನಾವು ನಿಶ್ಚಯವಾಗಿ ಗುರಿಯಿಟ್ಟುಕೊಳ್ಳೋಣ ಮತ್ತು ಅತ್ಯಾಸಕ್ತಿಯಿಂದ ಅದನ್ನು ಸಾಧಿಸಿಕೊಳ್ಳೋಣ" ಎಂದಿರುತ್ತದೆ.

ನಾವು ಏನನ್ನು ಅತ್ಯಾಸಕ್ತಿಯಿಂದ ಸಾಧಿಸಿಕೊಳ್ಳಬೇಕು? ಮೊದಲನೆಯದಾಗಿ, "ಸಮಾಧಾನಕ್ಕೂ . . . ಅನುಕೂಲವಾಗಿರುವವುಗಳನ್ನು." ಕೆಲವು ಸಂಗತಿಗಳು ಹಗೆತನಕ್ಕೆ ಅನುಕೂಲವನ್ನು ಕಲ್ಪಿಸುತ್ತವೆ, ಮತ್ತು ಇನ್ನು ಕೆಲವು ಸಮಾಧಾನಕ್ಕೆ ದಾರಿ ಮಾಡುತ್ತವೆ. ಒಬ್ಬನು ತಾನು ಹೇಳಿದ್ದೇ ಆಗಬೇಕೆಂದು ಹಠ ಹಿಡಿಯುವದು ಜಗಳವನ್ನುಂಟು ಮಾಡುತ್ತದೆ, ಅದೇ ವೇಳೆಯಲ್ಲಿ ಒಳಪಡುವ ಅಂತಃಕರಣವು ಸಮಾಧಾನವನ್ನುಂಟು ಮಾಡುತ್ತದೆ (ನೋಡಿರಿ ಯಾಕೋಬ 3:17). ಸ್ವಾರ್ಥದ ಬಗ್ಗೆ ಅತಿಯಾಗಿ ಚಿಂತೆಯುಳ್ಳವರಾಗಿರುವದು ಕಾದಾಟಕ್ಕೆ ದಾರಿ ಮಾಡಿದರೆ, ಮತ್ತೊಬ್ಬನ ಕುರಿತು ಹೆಚ್ಚು ಚಿಂತೆಯುಳ್ಳವರಾಗಿದ್ದರೆ ಸಮಾಧಾನವನ್ನು ಉಂಟು ಮಾಡುತ್ತದೆ (ನೋಡಿರಿ ಫಿಲಿಪ್ಪಿ 2:4). ಒಂದು ವಾದದಲ್ಲಿ ಜಯಿಸಬೇಕೆಂದು ಪ್ರಯತ್ನಿಸುವದು ಹಿಂಸಾಚಾರಕ್ಕೆ ನಡಿಸಿದರೆ, ಇತರ ವ್ಯಕ್ತಿಯನ್ನು

ಅರ್ಥಮಾಡಿಕೊಳ್ಳಲು ಪ್ರಯತ್ನಿಸುವದರಿಂದ ಸಮಾಧಾನವು ಕಾಯ್ದುಕೊಳ್ಳಲ್ಪಡುತ್ತದೆ (ನೋಡಿರಿ ಜ್ಞಾನೋಕ್ತಿ 15:1).

ಎರಡನೆಯದಾಗಿ, ನಾವು "ಪರಸ್ಪರ ಭಕ್ತಿವೃದ್ಧಿಗೂ ಅನುಕೂಲವಾಗಿರುವವುಗಳನ್ನು" ಸಾಧಿಸಿಕೊಳ್ಳಬೇಕು. "ಭಕ್ತಿವೃದ್ಧಿ" ಎಂಬುದು ಅನೇಕ ಸಾರಿ "ಆತ್ಮೋದ್ಧಾರ" ಎಂದು ಅನುವಾದಿಸಲ್ಪಡುವ ಪದದಿಂದ ಬಂದದ್ದಾಗಿದೆ: οἰκοδομη (*oikodomē*).[62] ಈ ಪದವು οἶκος (*oikos*, "ಮನೆ") ಮತ್ತು δέμω (*demō*, "ಕಟ್ಟು") ಎಂಬ ಪದಗಳನ್ನೊಳಗೊಂಡಿರುತ್ತದೆ; ಅದರ ಅಕ್ಷರಶಃ ಅರ್ಥವು "ಒಂದು ಮನೆಯನ್ನು ಕಟ್ಟು" ಅಥವಾ ಇತರ ಭವನ ಕಟ್ಟು ಎಂದಾಗಿರುತ್ತದೆ.[63] ಹೊಸ ಒಡಂಬಡಿಕೆಯಲ್ಲಿ, ಈ ಪದವು ಇತರರನ್ನು ಆತ್ಮೀಕವಾಗಿ ಅಭಿವೃದ್ಧಿಗೊಳಿಸುವದು ಮತ್ತು ಬಲಪಡಿಸುವದು ಎಂಬುದನ್ನು ಸೂಚಿಸುವದಕ್ಕೆ ಸಾಂಕೇತಿಕವಾಗಿ ಬಳಸಲ್ಪಟ್ಟಿರುತ್ತದೆ. ಸಭೆಗೆ ಇದು ಎಷ್ಟೊಂದು ಅಗತ್ಯವಿದೆ! ಬೇರೊಂದು ಕಡೆಯಲ್ಲಿ, ಪೌಲನು ಹೀಗೆ ಹೇಳುತ್ತಾನೆ, "ನೀವು ಏನು ನಡಿಸಿದರೂ ಭಕ್ತಿವೃದ್ಧಿಗಾಗಿಯೇ ನಡಿಸಿರಿ" (1 ಕೊರಿಂಥ 14:26; ನೋಡಿರಿ 8:1).

ನಾವು "ಪರಸ್ಪರ ಭಕ್ತಿವೃದ್ಧಿಗೂ" ಎಂಬದರಲ್ಲಿನ "ಪರಸ್ಪರ" ಎಂಬ ಪದಗುಚ್ಛವನ್ನು ಅಸಡ್ಡೆ ಮಾಡದಿರೋಣ. ಪೌಲನು ಪ್ರಸ್ತಾಪಿಸುತ್ತಿರುವದು "ದೃಢವಿಲ್ಲದ" ಸಹೋದರ ಹಾಗೂ "ದೃಢವಿರುವ" ಸಹೋದರ ಇಬ್ಬರಿಗೂ ಸಹಾಯಕವಾಗುವದಾಗಿತ್ತು. "ದೃಢವಿಲ್ಲದ" ಸಹೋದರನಿಗೆ ಆತನು ಜ್ಞಾನದಲ್ಲಿ ಬೆಳೆಯುತ್ತಿರುವ ಹಾಗೆ ಪೋಷಣೆ ಮತ್ತು ಭದ್ರತೆಯ ಅಗತ್ಯವಿತ್ತು. ಹೇಗೂ, "ದೃಢವಿರುವ" ಸಹೋದರನು ಸಹ ಬೆಳೆಯುವ ಅಗತ್ಯವಿತ್ತು; ಆತನು ಪ್ರೀತಿಯಲ್ಲಿ ಬೆಳೆಯುವ ಅಗತ್ಯವಿತ್ತು.

Allen ರೋಮಾ 14:19ನ್ನು "ಇಡೀ ವಿಭಾಗಕ್ಕಾಗಿ ಬಹು ಮುಖ್ಯ ವಚನ" ಎಂದು ಪರಿಗಣಿಸುತ್ತಾನೆ.[64] ಈ ವಚನವು ಇತರ ಕ್ರೈಸ್ತರೊಂದಿಗಿನ ನಮ್ಮ ಸಂಬಂಧದ ಬಗ್ಗೆ ಪರಿಗಣಿಸಿಕೊಳ್ಳುವಂತೆ ಸವಾಲುಗೊಳಿಸುತ್ತದೆ. ನಾವು ನಮಗೆ ಈ ಎರಡು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು: "ನನ್ನ ಕೃತ್ಯಗಳು ನನ್ನ ಸಹೋದರನ ಭಕ್ತಿವೃದ್ಧಿ ಮಾಡುತ್ತವೋ?" ಮತ್ತು "ಅವುಗಳು ಸಭೆಗೆ ಭಕ್ತಿವೃದ್ಧಿ ಉಂಟು ಮಾಡುತ್ತವೊ?" (ನೋಡಿರಿ ಎಫೆಸ 4:12).

**ವಚನ 20.** ಕಟ್ಟುವದಕ್ಕೆ ವಿರುದ್ಧವಾದದ್ದೆಂದರೆ ಕೆಡವಿ ಹಾಕುವದು. ಈ ವಚನದಲ್ಲಿ, ಪೌಲನು ತನ್ನ ಕಟ್ಟುವ ಸಾದೃಶ್ಯದ ಬಳಕೆಯನ್ನು ಮುಂದುವರೆಸುತ್ತಾನೆ: **ದೇವರು ಕಟ್ಟಿದ್ದನ್ನು ನೀನು ಆಹಾರದ ನಿಮಿತ್ತವಾಗಿ ಕೆಡವಬೇಡ.**[65] "ಕೆಡವಬೇಡ" ಎಂಬುದು καταλύω (*kataluō*) ಎಂಬ ಪದದಿಂದ ಬಂದದ್ದು, ಅದು κατά (*kata*) ಎಂಬದರಿಂದ ತೀವ್ರಗೊಳಿಸಲ್ಪಟ್ಟ λύω (*luō*, "ಬಿಚ್ಚು, ವಿಘಟಕಗೊಳಿಸು, ಕತ್ತರಿಸು, ಮುರಿದುಹಾಕು, ನೆಲಸಮ ಮಾಡು") ಎಂದಾಗಿರುತ್ತದೆ. *Kataluō* ಎಂದರೆ "ಸಂಪೂರ್ಣವಾಗಿ ನಾಶಗೊಳಿಸು, ಪೂರ್ಣವಾಗಿ ಉರುಳಿಸಿ ಬಿಡು" ಎಂದಾಗಿರುತ್ತದೆ.[66]

ನಾವು ಏನನ್ನು ಕೆಡವಬಾರದು? "ದೇವರು ಕಟ್ಟಿದ್ದನ್ನು." ಈ ಪದಗುಚ್ಛವು ಮನುಷ್ಯರಿಗೆ ರಕ್ಷಣೆಯನ್ನು ತರುವದಕ್ಕಾಗಿ ದೇವರು ಮಾಡಿರುವಂತದ್ದೆಲ್ಲವನ್ನೂ ಒಳಗೊಂಡಿರಬಹುದಾಗಿದೆ. ಸನ್ನಿವೇಶದಲ್ಲಿ, ಅದು ಆ ಕಾರ್ಯದ ಅಂತಿಮ ಫಲಿತವನ್ನು ಸೂಚಿಸಿ ಹೇಳುವಾಗಿರುತ್ತದೆ:[67] ಕ್ರಿಸ್ತನಲ್ಲಿನ ಸಹೋದರರು ಹಾಗೂ ಸಹೋದರಿಯರು. ಪೌಲನು ಮಾತುಗಳು ಅಭಿಪ್ರಾಯ ಕುರಿತಾದ ಕಚ್ಚಾಟಗಳು ಎಷ್ಟೊಂದು ಅಸಂಬದ್ಧ ಮತ್ತು

ದುರಂತಕರ ಎಂಬುದನ್ನು ತೋರಿಸಿ ಕೊಡುವದಕ್ಕೆ ರಚಿಸಲ್ಪಟ್ಟಿದ್ದವು. 20ನೇ ವಚನದ ಮೊದಲ ಭಾಗವನ್ನು Phillips ತರ್ಜುಮೆಯು ಹೀಗೆ ಭಾವಾನುವಾದ ಗೊಳಿಸುತ್ತದೆ: "ನಿಶ್ಚಯವಾಗಿಯೂ ನಾವು ಒಂದು ತಟ್ಟೆ ಮಾಂಸಕ್ಕಾಗಿ ದೇವರ ಕೆಲಸವನ್ನು ನಿರರ್ಥಕಗೊಳಿಸುವದಕ್ಕೆ ಅಪೇಕ್ಷಿಸಬಾರದು!"

14:14ರಲ್ಲಿ, ಪೌಲನು "ಯಾವ ಪದಾರ್ಥವೂ ಸ್ವತಃ ಅಶುದ್ಧವಾದದ್ದಲ್ಲ" ಎಂದು ಹೇಳಿದನು. ಇಲ್ಲಿ, 14:20ರಲ್ಲಿ, ಆತನು ಅದೇ ರೀತಿಯಾಗಿ ಒತ್ತಿ ಹೇಳುತ್ತಾನೆ: **ಎಲ್ಲಾ ಪದಾರ್ಥಗಳೂ ಶುದ್ಧವೇ** (καθαρός, *katharos*)**.** ಮುಂಚಿನ ಹೇಳಿಕೆಯಂತೆಯೇ (14:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಈ ಹೇಳಿಕೆಗೆ ಸ್ವಲ್ಪ ಅರ್ಹಗೊಳಿಸುವಿಕೆಯ ಅಗತ್ಯವಿರುತ್ತದೆ. ಈ ಮುಂಚೆ, ಪೌಲನು "ಹೊಲಸಾದ"ದ್ದರ (ἀκαθαρσία, *akatharsia*, "ಅಶುದ್ಧತೆ") ಬಗ್ಗೆ ಮಾತಾಡಿದ್ದನು (1:24; 6:19), ಆದ್ದರಿಂದ ಯಾವದೇ ಆಗಲಿ ಮತ್ತು ಎಲ್ಲವೂ ಆಗಲಿ "ಶುದ್ಧ" ಎಂಬುದನ್ನು ಆತನು ನಂಬಲಿಲ್ಲ. ಈ ಚರ್ಚೆಯಲ್ಲಿ, ಆತನು ನಿರ್ದಿಷ್ಟವಾಗಿ ಮಾಂಸವನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಮಾತುಗಳನ್ನಾಡುತ್ತಾನೆ: ಎಲ್ಲಾ ಮಾಂಸಗಳು ಸ್ವತಃ "ಶುದ್ಧವೇ." (NIVಯು "ಎಲ್ಲಾ ಆಹಾರವು ಶುದ್ಧ" ಎಂದು ಹೇಳುತ್ತದೆ.)

ಪೌಲನು ಸೇರಿಸಿ ಹೇಳಿದ್ದೇನೆಂದರೆ **ಆದರೆ ತಿಂದು ಮತ್ತೊಬ್ಬರಿಕೆ ವಿಘ್ನವನ್ನುಂಟು ಮಾಡುವದು ಕೆಟ್ಟದ್ದು.**[68] ಮೂಲ ವಾಕ್ಯವು ಈ "ಮತ್ತೊಬ್ಬನಿಗೆ" ಎಂಬವನ ಗುರುತಿನ ಬಗ್ಗೆ ದ್ವಂದ್ವಾರ್ಥ ಹೊಂದಿರುತ್ತದೆ. ಗ್ರೀಕ್ ಅಕ್ಷರಶಃ "ನೋವುಂಟು ಮಾಡಿಯೂ ತಿನ್ನುವದು" ಎಂದರ್ಥವನ್ನು ಹೊಂದಿರುತ್ತದೆ. ಇಲ್ಲಿನ ಮಾತುಗಳ ಬಳಕೆಯು ಮಾಂಸವನ್ನು ತಿನ್ನುವ ಮೂಲಕ ತನ್ನ ಮನಸ್ಸಾಕ್ಷಿಗೆ ನೋವುಂಟು ಮಾಡಿದ ಒಬ್ಬ "ದೃಢವಿಲ್ಲದ" ಸಹೋದರನನ್ನು ಸೂಚಿಸಬಹುದಾಗಿದೆ (ನೋಡಿರಿ 14:23), ಹೇಗೂ ನಂತರದಲ್ಲಿ ಬರುವ ವಚನದ ಬೆಳಕಿನಲ್ಲಿ, ಆ ಮಾತುಗಳು ಬಹುಶಃ "ದೃಢವಿಲ್ಲದ" ಸಹೋದರನ ಮುಂದೆ ಮಾಂಸವನ್ನು ತಿನ್ನುವ, ಆ ಮೂಲಕ ಅವನು ತನ್ನ ಮನಸ್ಸಾಕ್ಷಿಗೆ ವಿರುದ್ಧವಾಗಿ ನಡೆಯುವಂತೆ ಆತನನ್ನು ಪ್ರೋತ್ಸಾಹಗೊಳಿಸುವ "ದೃಢವಿರುವ" ಸಹೋದರನನ್ನು ಸೂಚಿಸುತ್ತಿರಬಹುದು. McCord ತರ್ಜುಮೆಯಲ್ಲಿ "ಮತ್ತೊಬ್ಬರಿಗೆ ಎಡವಿ ಬೀಳುವಂತೆ ಮಾಡುವಂತದ್ದನ್ನು ತಿನ್ನುವ ವ್ಯಕ್ತಿಯು" ಎಂದಿರುತ್ತದೆ.

**ವಚನ 21.** ಅದು "ಕೆಟ್ಟದ್ದು" ಆಗಿರುವದಾದರೆ "ಒಳ್ಳೇದು" ಯಾವುದು? ಪೌಲನು ಈ ಪ್ರಶ್ನೆಗೆ ಉತ್ತರ ಕೊಡುತ್ತಾನೆ: **ಮಾಂಸ ತಿನ್ನುವದನ್ನಾಗಲಿ ದ್ರಾಕ್ಷಾರಸ ಕುಡಿಯುವದನ್ನಾಗಲಿ ನಿನ್ನ ಸಹೋದರನಿಗೆ ಅಡ್ಡಿಯನ್ನುಂಟುಮಾಡುವ ಬೇರೆ ಯಾವದನ್ನಾಗಲಿ ಬಿಟ್ಟುಬಿಡುವದೇ ಒಳ್ಳೇದು.** 17ನೇ ವಚನದಲ್ಲಿ, ಪೌಲನು "ತಿನ್ನುವದೂ *ಕುಡಿಯುವದೂ* ದೇವರ ರಾಜ್ಯವಲ್ಲ" ಎಂದು ಹೇಳಿದನು (ಒತ್ತಿ ಹೇಳಿದ್ದು ನನ್ನದು), ಚರ್ಚೆಗೆ ದ್ರಾಕ್ಷಾರಸ ಕುಡಿಯುವದನ್ನು ಸೇರ್ಪಡೆಗೊಳಿಸಿದನು.[69] ಈ ಹೆಚ್ಚುವರಿ ಸೇರ್ಪಡೆಗೆ ಪೌಲನು ಯಾವದೇ ವಿವರಣೆಯನ್ನು ಕೊಡಲಿಲ್ಲವಾದ್ದರಿಂದ, ಆತನು ಮನಸ್ಸಿನಲ್ಲಿ ಏನು ಹೊಂದಿದ್ದನೆಂಬುದರ ಬಗ್ಗೆ ನಾವು ಖಚಿತವಾಗಿ ತಿಳಿಯಲಾರೆವು. ಬಹುಶಃ ತಿನ್ನುವದು ಮತ್ತು ಕುಡಿಯುವದು ಒಂದು ಭೋಜನದ ಭಾಗಗಳಾಗಿರುತ್ತವೆಂದಷ್ಟೆ ಅರ್ಥವಿರಬಹುದಾಗಿದೆ. ಪೌಲನು ಹೀಗೆ ಹೇಳುತ್ತಿದ್ದಿರಬಹುದಾಗಿದೆ, "ನನ್ನ ಸಹೋದರನಿಗೆ ಹಾನಿಯನ್ನುಂಟು ಮಾಡುವ ಬದಲಾಗಿ ನಾನು ಉಪವಾಸವೇ ಇದ್ದು ಬಿಡುತ್ತೇನೆ!" "ದ್ರಾಕ್ಷಾರಸ" ಎಂಬ ಪದಕ್ಕೆ ಮಹತ್ವವನ್ನು

ಕೊಡಬೇಕೆಂದು ಅಪೊಸ್ತಲನ ಉದ್ದೇಶವಾಗಿದ್ದಿದ್ದರೆ, ಬಹುಶಃ ಅದಕ್ಕೆ ದ್ರಾಕ್ಷಾರಸವು ಒಂದು ವಿಧದಲ್ಲಿ ವಿಗ್ರಹಕ್ಕೆ ಸಂಬಂಧ ಪಟ್ಟದ್ದಾಗಿತ್ತು ಎಂಬುದೇ ಕಾರಣವಾಗಿರಬಹುದು.[70] ಹಳೆಯ ಒಡಂಬಡಿಕೆಯಲ್ಲಿ, ದಾನಿಯೇಲನು ಅರಸನು ನೀಡಿದ ಭೋಜನದಿಂದ ಆಹಾರ ಹಾಗೂ ದ್ರಾಕ್ಷಾರಸ ಎರಡನ್ನೂ ನಿರಾಕರಿಸಿದನು (ದಾನಿ 1:8). ಬಹುಶಃ ಆತನು ಹಾಗೆ ಮಾಡಿದ್ದಕ್ಕೆ ಕಾರಣವೆಂದರೆ, ಭೋಜನಕ್ಕೆ ಮುನ್ನ, ಆಹಾರ ಮತ್ತು ದ್ರಾಕ್ಷಾರಸಗಳು ಬಾಬೆಲಿನ ದೇವರುಗಳಿಗೆ ಸಮರ್ಪಿಸಲ್ಪಟ್ಟಿರುತ್ತಿದ್ದವು; ಆಹಾರ ಮತ್ತು ದ್ರಾಕ್ಷಾರಸದ ಒಂದು ಭಾಗವನ್ನು ವಿಗ್ರಹಗಳಿಗೆ ನೈವೇದ್ಯ ಮಾಡಲಾಗಿರುತ್ತಿತ್ತು.[71]

ಹೇಗೂ, ನಾವು ಒಂದು ಬದಿಯ ವಿವಾದಾಂಶದಲ್ಲಿ ಸಿಕ್ಕಿಕೊಂಡು ಪೌಲನು ಹೇಳಲಿಚ್ಛಿಸುವ ಮೂಲ ಅಂಶದ ಮೇಲಿನ ನಮ್ಮ ದೃಷ್ಟಿಯನ್ನು ಕಳೆದುಕೊಳ್ಳದ ಹಾಗೆ ಜಾಗರೂಕತೆ ವಹಿಸಬೇಕು. ಆತನು ಹೀಗೆ ಹೇಳಿದನು, ". . . ನಿನ್ನ ಸಹೋದರನಿಗೆ ಅಡ್ಡಿಯನ್ನುಂಟುಮಾಡುವ ಬೇರೆ *ಯಾವದನ್ನಾಗಲಿ* ಬಿಟ್ಟುಬಿಡುವದೇ ಒಳ್ಳೇದು." 1 ಕೊರಿಂಥ 8:13ರಲ್ಲಿ, ಪೌಲನು ಹೀಗೆ ಹೇಳುತ್ತಾನೆ, "ಆದದರಿಂದ ಭೋಜನಪದಾರ್ಥದಿಂದ ನನ್ನ ಸಹೋದರನಿಗೆ ವಿಘ್ನವಾಗುವದಾದರೆ *ನಾನು ಎಂದಿಗೂ ಮಾಂಸವನ್ನು ತಿನ್ನುವದಿಲ್ಲ*; ನಾನು ನನ್ನ ಸಹೋದರನಿಗೆ ವಿಘ್ನವನ್ನುಂಟುಮಾಡಬಾರದಲ್ಲಾ" (ಒತ್ತಿ ಹೇಳಿದ್ದು ನನ್ನದು). ಕೆಲವರು ಈ ಹೇಳಿಕೆಯನ್ನು ಅತಿರೇಕವಾದದ್ದೆಂದು ಕಾಣುತ್ತಾರೆ. ಅವರು ಆಕ್ಷೇಪಣೆಯೆತ್ತಿ ನಮಗೆ ಇದನ್ನು ಅಥವಾ ಅದನ್ನು ಮಾಡುವದಕ್ಕೆ "ಹಕ್ಕು ಇರುತ್ತದೆ" ಎಂದು ಹೇಳುತ್ತಾರೆ. ಪೌಲನು, ತತ್ಪರಿಣಾಮವಾಗಿ, ಉಪದೇಶಿಸಿದ್ದೇನೆಂದರೆ, "ನಿನ್ನ ಸಹೋದರಿನಿಗೆ ಸಹಾಯ ಮಾಡುವದಕ್ಕಾಗಿ ನಿನ್ನ ಹಕ್ಕನ್ನು ತ್ಯಜಿಸುವದು ನಿನ್ನ ಹಕ್ಕಾಗಿರುತ್ತದೆ."[72]

**ವಚನ 22.** ಪೌಲನು "ದೃಢವಿರುವ" ಸಹೋದರನಿಗೆ ಬುದ್ಧಿವಾದ ಹೇಳುವದನ್ನು ಮುಂದುವರೆಸುತ್ತಾನೆ. ಆತನು ಆ ಸಹೋದರನಿಗೆ ತಾನು ಮಾಂಸ ಸೇವನೆಯು ಅಂಗೀಕಾರವಾದದ್ದು ಎಂಬದಾಗಿ ನಂಬುತ್ತಾನೆಂಬುದನ್ನು ಎಲ್ಲರಿಗೂ ಜಾಹೀರು ಮಾಡಬೇಡ ಎಂದು ಹೇಳಿದನು: **ನೀನಗಿರುವ ನಂಬಿಕೆಯು ದೇವರಿಗೆ ಮಾತ್ರ ಗೋಚರವಾಗಿ ನಿನ್ನ ಮಟ್ಟಿಗೇ[73] ಇರಲಿ.** "ನಂಬಿಕೆಯು" ಇಲ್ಲಿ ಮಾಂಸವನ್ನು ತಿನ್ನುವದರಲ್ಲಿ ಯಾವದೇ ತಪ್ಪಿಲ್ಲವೆಂಬ "ದೃಢವಿರುವ" ಸಹೋದರನಿಗಿದ್ದ ವೈಯಕ್ತಿಕವಾದ ನಂಬಿಕೆಯನ್ನು ಸೂಚಿಸುತ್ತದೆ. CEV ತರ್ಜುಮೆಯು 22ನೇ ವಚನದ ಮೊದಲ ಭಾಗವನ್ನು ಹೀಗೆ ವ್ಯಕ್ತಪಡಿಸುತ್ತದೆ: "ಈ ವಿಷಯಗಳ ಕುರಿತಾಗಿ ನೀನು ನಂಬುವಂತದ್ದು ನಿನ್ನ ಹಾಗೂ ದೇವರ ನಡುವೆ ಮಾತ್ರವೇ ಇರತಕ್ಕದ್ದು." ಕ್ರೈಸ್ತರು ಕಪಟ ಹಾಗೂ ವಂಚಕರಾಗಿ ಇರಬೇಕೆಂಬುದು ಪೌಲನು ಸಲಹೆ ಮಾಡುತ್ತಿದ್ದಾನೋ? ಎಂದಿಗೂ ಇಲ್ಲ. ಅವರು ತಮ್ಮ ಅಭಿಪ್ರಾಯಗಳನ್ನು ಹೇಳಿಕೊಳ್ಳುವದರಿಂದ ಜೊತೆ ಕ್ರೈಸ್ತರಿಗೆ ಹಾನಿಯನ್ನುಂಟು ಮಾಡುವದಾದಲ್ಲಿ ಅವುಗಳನ್ನು ತಮ್ಮಲ್ಲಿಯೇ ಇಟ್ಟುಕೊಳ್ಳಬೇಕೆಂದು ಆತನು ಪ್ರೋತ್ಸಾಹಿಸುತ್ತಿದ್ದಾನಷ್ಟೆ.

ನಂತರ ಪೌಲನು ಮುಂದುವರೆಸಿ ಹೇಳಿದ್ದೇನೆಂದರೆ, **ತಾನು ಒಪ್ಪಿದ ಕೆಲಸದಲ್ಲಿ ಇದು ಸರಿಯೋ ಸರಿಯಲ್ಲವೋ ಎಂದು ಸಂಶಯ ಪಡದವನೇ ಧನ್ಯನು.** "ತಾನು ಒಪ್ಪಿದ" ಎಂಬುದು ಮಾಂಸ ತಿನ್ನುವದನ್ನು ಸೂಚಿಸುತ್ತದೆ. ಒಬ್ಬ "ದೃಢವಿರುವ" ಸಹೋದರನು ಮಾಂಸ ತಿನ್ನುವ ಮೂಲಕ ಅಥವಾ ಆ ವಿಷಯದಲ್ಲಿನ ತನ್ನ ಅಭಿಪ್ರಾಯವನ್ನು ಹೇಳಿಕೊಳ್ಳುವ ಮೂಲಕ "ದೃಢವಿಲ್ಲದ" ಸಹೋದರನಿಗೆ ನೋವುಂಟು ಮಾಡಿದರೆ, ಆತನ ಕೃತ್ಯಗಳು

ಅವನನ್ನು ದೋಷಿಯೆಂದು ಹೇಳುವವು. ಒಂದು ವೇಳೆ, ಹೇಗೂ, ಆತನು ತನ್ನ ಅಭಿಪ್ರಾಯವನ್ನು ತನ್ನಷ್ಟಕ್ಕೇ ಇಟ್ಟುಕೊಂಡರೆ, ಆತನು "ಸಂತೋಷ"[74] ವಾಗಿರುವನು (NASB). "ಸಂತೋಷ" ಎಂಬುದು μακάριος (*makarios*) ಎಂಬ ಪದದಿಂದ ಬಂದದ್ದು, ಈ ಪದವು ಮತ್ತಾಯ 5:3-11ರಲ್ಲಿ ಮತ್ತು ಇತರ ವಾಕ್ಯಭಾಗಗಳಲ್ಲಿ "ಧನ್ಯರು" ಎಂದು ಅನುವಾದಿಸಲ್ಪಟ್ಟಿರುತ್ತದೆ. Morris ಪ್ರಕಾರವಾಗಿ, "ಪದವು 'ಸಂತೋಷ'ದ ಕೊರತೆಯುಳ್ಳ ಧಾರ್ಮಿಕ ಹುರುಳನ್ನೊಳಗೊಂಡಿರುತ್ತದೆ; ಅದೊಂದು ಕೇವಲ ಭಾವನೆಯಲ್ಲ ಆದರೆ ಸ್ವತಃ ದೇವರ ಆಶೀರ್ವಾದವೇ ಆಗಿದೆ."[75] ತಮ್ಮ ಕುರಿತಾಗಿ ಇರುವದಕ್ಕಿಂದಲೂ ಕ್ರಿಸ್ತನಲ್ಲಿನ ತಮ್ಮ ಸಹೋದರರು ಹಾಗೂ ಸಹೋದರಿಯರ ಕುರಿತು ಹೆಚ್ಚು ಚಿಂತೆಯುಳ್ಳವರ ಮೇಲೆ ದೇವರು ತನ್ನ ಆಶೀರ್ವಾದಗಳನ್ನು ಸುರಿಸುತ್ತಾನೆ.

**ವಚನ 23.** ಅದು ನಮ್ಮನ್ನು ರೋಮಾ 14ರಲ್ಲಿ ಈಗಾಗಲೇ ಚರ್ಚಿಸಿರುವ ವಚನಕ್ಕೆ ತರುತ್ತದೆ: [ಮಾಂಸವನ್ನು ತಿನ್ನುವದರಲ್ಲಿ ಯಾವ ತಪ್ಪಿಲ್ಲವೆಂಬುದನ್ನು] **ಸಂಶಯಪಟ್ಟು ಉಣ್ಣುವವನು** [ಮಾಂಸವನ್ನು] **ಸಂಶಯದಿಂದ ಉಣ್ಣುವ ಕಾರಣ ದೋಷಿಯಾಗಿದ್ದಾನೆ. ಯಾವದಕ್ಕೆ ನಂಬಿಕೆಯು ಆಧಾರವಿಲ್ಲವೋ ಅದು ಪಾಪ.** 14ನೇ ಅಧ್ಯಾಯದ ಬೇರೆ ಕಡೆಗಳಲ್ಲಿರುವ ಪ್ರಕಾರವೇ, "ನಂಬಿಕೆ" ಎಂಬುದು ಇಲ್ಲಿ ವೈಯಕ್ತಿಕ ಮನವರಿಕೆಯನ್ನು ಸೂಚಿಸುತ್ತದೆ. McCord ತರ್ಜುಮೆಯು 23ನೇ ವಚನವನ್ನು ಹೀಗೆ ಭಾವಾನುವಾದಗೊಳಿಸುತ್ತದೆ: "ಸಂಶಯ ಪಡುವವನು ತಿನ್ನುವದಾದರೆ ದೋಷಿಯಾಗಿ ಎಣಿಸಲ್ಪಡುವನು, ಯಾಕೆಂದರೆ ಆತನಲ್ಲಿ *ಮನವರಿಕೆಯ* ಕೊರತೆಯಿರುತ್ತದೆ; ಮತ್ತು *ಮನವರಿಕೆಯಿಂದ* ಇರದಂತಹ ಎಲ್ಲವೂ ಪಾಪ" (ಒತ್ತಿ ಹೇಳಿದ್ದು ನನ್ನದು). ಒಬ್ಬನು ತನ್ನ ಮನಸ್ಸಾಕ್ಷಿಯನ್ನು ಮೀರಿ ಹೋಗಬಾರದು ಎಂಬದರ ಕುರಿತು ಬೈಬಲಿನಲ್ಲಿರುವ ಮುಖ್ಯ ಹೇಳಿಕೆಯಾಗಿರುತ್ತದೆ. Phillips ತರ್ಜುಮೆಯಲ್ಲಿ ಹೀಗೆ ಭಾವಾನುವಾದವಿರುತ್ತದೆ, "ಒಬ್ಬನು ಮಾಂಸ ತಿನ್ನುವ ಬಗ್ಗೆ ಆತಂಕಗೊಂಡ ಮನಸ್ಸಾಕ್ಷಿಯಿಂದ ಅದನ್ನು ತಿನ್ನುವದಾದರೆ, ಆತನು ಹಾಗೆ ಮಾಡುವದು ತಪ್ಪು ಎಂದು ನೀವು ಖಚಿತವಾಗಿ ತಿಳಿಯಬಹುದು . . . ನಾವು ನಮ್ಮ ನಂಬಿಕೆಯನ್ನು ಬಿಟ್ಟು ನಡೆದುಕೊಳ್ಳುವದಾದರೆ ಪಾಪ ಮಾಡಿದವರಾಗುತ್ತೇವೆ."

ಪೌಲನು 23ನೇ ವಚನದಲ್ಲಿ ಕಠಿಣ ಮಾತುಗಳನ್ನು ಉಪಯೋಗಿಸುತ್ತಾನೆ: "ಸಂಶಯಪಟ್ಟು ಉಣ್ಣುವವನು ಸಂಶಯದಿಂದ ಉಣ್ಣುವ ಕಾರಣ *ದೋಷಿಯಾಗಿದ್ದಾನೆ*. ಯಾಕೆಂದರೆ ಯಾವದಕ್ಕೆ ನಂಬಿಕೆಯು ಆಧಾರವಾಗಿಲ್ಲವೋ ಅದು *ಪಾಪ*." ಕೆಲವರು ಸ್ವಲ್ಪ ಮೃದುವಾಗಿರುವದಕ್ಕೆ ಪ್ರಯತ್ನಿಸುವವರಾಗಿ ಆತನನ್ನು ದೇವರು ಅಲ್ಲ, ಆತನ ಮನಸ್ಸಾಕ್ಷಿಯು ದೋಷಿಯೆಂದು ತೀರ್ಪು ಮಾಡುವದಾಗಿದೆ ಎನ್ನುತ್ತಾರೆ; ಹೇಗೂ ಆಂಗ್ಲದಲ್ಲಿ ವಚನವು "ಆದರೆ" (δέ, *de*) ಎಂದು ಆರಂಭವಾಗುತ್ತದೆ, ಅದು ಅದನ್ನು ಮುಂಚಿನ ವಚನದೊಂದಿಗೆ ಜೋಡಿಸುವದಾಗಿದೆ. ದೇವರು 22ನೇ ವಚನದಲ್ಲಿ ದೇವರು ಆಶೀರ್ವದಿಸುವದನ್ನು 23ನೇ ವಚನದಲ್ಲಿ ದೇವರು ದೋಷಿಯಾಗಿ ತೀರ್ಪುಮಾಡುವದರ ವಿರುದ್ಧವಾಗಿ ಹೋಲಿಸುವವನಾಗಿದ್ದಾನೆ.

ಬಹುಶಃ ನಾವು ಇಲ್ಲಿ ಧಾರ್ಮಿಕ ವಿಚಾರಗಳಲ್ಲಿ "ನಿಮ್ಮ ಮನಸ್ಸಾಕ್ಷಿಯೇ ನಿಮಗೆ ಮಾರ್ಗದರ್ಶಿಯಾಗಿರಲಿ" ಎಂಬದಾಗಿ ಪೌಲನು ಪ್ರಸ್ತಾಪಿಸುವವನಾಗಿರ*ಲಿಲ್ಲ* ಎಂಬುದನ್ನು

ಪುನಃ ಒತ್ತಿ ಹೇಳಬೇಕಾಗಿರುತ್ತದೆ. ನಮ್ಮ ಧಾರ್ಮಿಕ ಅಧಿಕಾರವು ದೇವರ ವಾಕ್ಯವೇ, ಹೊರತು ನಮ್ಮ ಮನಸ್ಸಾಕ್ಷಿಯಲ್ಲ. ಮನಸ್ಸಾಕ್ಷಿಯು ಎಷ್ಟರ ಮಟ್ಟಿಗೆ ದೇವರ ಸತ್ಯದಿಂದ ಸುರಕ್ಷಿತವಾಗಿ ದಾರಿನಡಿಸಲ್ಪಡುತ್ತದೋ ಅಷ್ಟರ ಮಟ್ಟಿಗೆ ಮಾತ್ರವೇ ಅದು ನಮಗೆ ಒಂದು ಸುರಕ್ಷಿತ ಮಾರ್ಗದರ್ಶಿಯಾಗಿರುತ್ತದಷ್ಟೆ. ಇಷ್ಟು ವರ್ಷಗಳಿಂದಲೂ, ಅನೇಕರು ಶುದ್ಧ ಮನಸ್ಸಾಕ್ಷಿಯಿಂದ ದೇವರಿಗೆ ಅವಿಧೇಯರಾಗಿ ರುತ್ತಾರೆ (ನೋಡಿರಿ 8:3; 23:1). ಹೇಗಿದ್ದರೂ, ಇಷ್ಟರ ಮಟ್ಟಿಗೆಯಷ್ಟೆ, ನಮ್ಮ ಮನಸ್ಸಾಕ್ಷಿಯು ನಮಗೆ "ಮಾರ್ಗದರ್ಶಿ" ಆಗಿರತಕ್ಕದ್ದು: ನಾವು ನಮ್ಮ ಮನಸ್ಸಾಕ್ಷಿಯನ್ನು ಮೀರಬಾರದು. Coy Roper ಅದನ್ನು ಈ ರೀತಿಯಲ್ಲಿ ಹೇಳುತ್ತಾನೆ: "ಮನಸ್ಸಾಕ್ಷಿಯು . . . ಒಂದು ತಪ್ಪನ್ನು ಸರಿ ಮಾಡಲಾರದು, ಆದರೆ ಅದು ಒಂದು ಸರಿ ಸಂಗತಿಯನ್ನು ತಪ್ಪು ಮಾಡುವ ಸಾಧ್ಯತೆಯಿರುತ್ತದೆ."[76]

ಈ ಸತ್ಯವನ್ನು ಅತಿಯಾಗಿ ಒತ್ತಿ ಹೇಳಲ್ಪಡಲು ಸಾಧ್ಯವಿಲ್ಲ: ನಿಮ್ಮ ಮನಸ್ಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳ *ಬೇಡಿರಿ*. Stott ಈ ಆಲೋಚನೆಯನ್ನು ಸೇರ್ಪಡೆಗೊಳಿ ಸುತ್ತಾನೆ: "ನಮ್ಮ ಮನಸ್ಸಾಕ್ಷಿಯನ್ನು ಮೀರಬಾರದು ಎಂಬ ಈ ಸ್ಪಷ್ಟವಾದ ಬೋಧನೆಯ ಜೊತೆಯಲ್ಲಿ, ಅದಕ್ಕೆ ಶಿಕ್ಷಣ ನೀಡಬೇಕೆಂಬ ಸೂಚ್ಯಾರ್ಥದ ಅಪ್ಪಣೆಯೂ ಇರುತ್ತದೆ."[77] ಅದಕ್ಕೆ ಮರು–ಶಿಕ್ಷಣ ನೀಡುವ ವೇಳೆಯಲ್ಲಿ, ಮನಸ್ಸಾಕ್ಷಿಯು ಯಾವುದನ್ನೆಲ್ಲಾ ತಪ್ಪು ಎಂದು ಹೇಳುತ್ತದೋ ಅದನ್ನೆಲ್ಲಾ ನಾವು ಮಾಡತಕ್ಕದ್ದು. ಒಂದು ಹಳೆಯ ಗಾದೆ ಹೀಗೆ ಹೇಳುತ್ತದೆ, "ಸಂಶಯವಿದ್ದರೆ, ಮಾಡಬೇಡ." ಆ ಸೂಕ್ತಿಯು ಮನಸ್ಸಾಕ್ಷಿಯ ವಿಷಯದಲ್ಲಂತೂ ವಿಶೇಷವಾಗಿ ಸಮಂಜಸವಾಗಿರುತ್ತದೆ. ಇಂಥದ್ದನ್ನು ಮಾಡುವದು ಸರಿ ಎಂಬದರ ಬಗ್ಗೆ ನಿಮಗೆ ಸಂಶಯವಿದ್ದಲ್ಲಿ, ಅದನ್ನು *ಮಾಡಬೇಡಿರಿ*.

ನಾವು 23ನೇ ವಚನದಿಂದ ಮುಂದಕ್ಕೆ ಹೋಗುವ ಮುನ್ನ, ಇದನ್ನು ಜ್ಞಾಪಕಕ್ಕೆ ತಂದುಕೊಳ್ಳೋಣ: ಈ ಮಾತುಗಳು ನಮ್ಮೊಬ್ಬೊಬ್ಬರಿಗೂ ಒಂದು ಸಂದೇಶವನ್ನು ಹೊಂದಿವೆಯಾದರೂ, ಪೌಲನು ನಿರ್ದಿಷ್ಟವಾಗಿ "ದೃಢವಿರುವ" ಸಹೋದರರನ್ನು ಉದ್ದೇಶಿಸಿ ಆ ಮಾತುಗಳನ್ನು ಹೇಳಿದನು. ಒಬ್ಬ "ದೃಢವಿಲ್ಲದ" ಸಹೋದರನು ತನ್ನ ಮನಸ್ಸಾಕ್ಷಿಯನ್ನು ಮೀರಿದವನಾಗಿ ಪಾಪ ಮಾಡುವದರ ಫಲಿತವಾಗಿ ದೋಷಿಯಾಗುವಂತೆ ಆತನನ್ನು ಪ್ರೋತ್ಸಾಹಿಸುವಂತಹ ಯಾವುದನ್ನು ಮಾಡಬಾರದೆಂದು ಆತನು "ದೃಢವಿರುವ" ಸಹೋದರನಿಗೆ ಹೇಳುವವನಾಗಿದ್ದನು. ಅದು ನಾನೇ ಸರಿ ಎಂಬುದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾಗಿತ್ತು—ಎಷ್ಟೋ ಹೆಚ್ಚು ಪ್ರಾಮುಖ್ಯವಾಗಿತ್ತು.

*ನಂಬಿಕೆ* ವಿಚಾರಗಳಲ್ಲಿ ಸರಿಯಾಗಿ ಇರುವದು ಅತ್ಯಂಥ ಪ್ರಾಮುಖ್ಯವಾಗಿರುತ್ತದೆ. Allen ಹೀಗೆ ಒತ್ತಿ ಹೇಳುತ್ತಾನೆ, "ಕೆಲವೊಂದು ಕ್ಷೇತ್ರಗಳಲ್ಲಿ ನಾವು ಮೌನದಿಂದರಲು ಮತ್ತು ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಯೇಸು ಹಾಗೂ ಅಪೊಸ್ತಲರು [ಜೀವಿತಗಳು] ವಾದದಿಂದ ತುಂಬಿದ್ದವು. ನಾವು ನಂಬಿಕೆಗೋಸ್ಕರ ಅತ್ಯಾಸಕ್ತಿಯಿಂದ ಹೋರಾಡಬೇಕು (ಯೂದನು 3)."[78] ಸುಳ್ಳು ಬೋಧಕರ ವಿಷಯದಲ್ಲಿ, ಪೌಲನು ಹೀಗೆ ಹೇಳಿದನು, "ನಾವು ಅವರಿಗೆ ವಶವಾಗುವದಕ್ಕೆ ಒಂದು ಗಳಿಗೆ ಹೊತ್ತಾದರೂ ಸಮ್ಮತಿಪಡಲಿಲ್ಲ" (ಗಲಾತ್ಯ 2:5).

*ಅಭಿಪ್ರಾಯದ* ವಿಷಯಗಳಲ್ಲಿ, ಹೇಗೂ, ಕೆಲವು ಸಂಗತಿಗಳು ಸರಿಯೆಂದು ಇರುವದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾಗಿರುತ್ತವೆ. ನಾನೇ ಸರಿ ಎಂದು ಇರುವದಕ್ಕಿಂತಲೂ ಒಬ್ಬ ಸಹೋದರನಿಗೆ *ನೋವುಂಟು ಮಾಡದಂತೆ* ಜಾಗ್ರತೆ

ವಹಿಸುವದು ಹೆಚ್ಚು ಪ್ರಾಮುಖ್ಯವಾಗಿರುತ್ತದೆ. ನಾನೇ ಸರಿ ಎಂದು ಇರುವದಕ್ಕಿಂತಲೂ ಒಬ್ಬ ಸಹೋದರನಿಗೆ ಸಹಾಯ ಮಾಡುವದಕ್ಕೆ ಶ್ರಮಿಸುವದು ಹೆಚ್ಚು ಪ್ರಾಮುಖ್ಯವಾಗಿರುತ್ತದೆ. ನಾವು ನಮ್ಮ ಕುರಿತಾಗಿರುವದಕ್ಕಿಂತಲೂ ನಮ್ಮ ಸಹೋದರರಿ ಹಾಗೂ ಸಹೋದರಿಯರ ವಿಷಯದಲ್ಲಿ ಹೆಚ್ಚು ಕಳಕಳಿಯುಳ್ಳವರಾಗಿರುವಂತೆ ದೇವರು ನಮಗೆ ಸಹಾಯ ಮಾಡಲಿ.

## ಹೆಚ್ಚಿನ ಅಧ್ಯಯನಕ್ಕಾಗಿ: "ತೀರ್ಪುಮಾಡು" (*KRINŌ*) ಕುರಿತ ಪದ ಅಧ್ಯಯನ

ಗ್ರೀಕ್‌ನ κρίνω (*krinō*, ಬಹಳಷ್ಟು ಸಾರಿ "ತೀರ್ಪು ಮಾಡು" ಎಂದು ಅನುವಾದಿಸಲ್ಪಟ್ಟಿರುತ್ತದೆ) ಎಂಬ ಪದವು ರೋಮಾ 14ರಲ್ಲಿ ಒಂಬತ್ತು ಸಾರಿ ಕಾಣಿಸಿಕೊಳ್ಳುತ್ತದೆ. ಈ ಪದವು "ಪ್ರಾಥಮಿಕವಾಗಿ 'ಪ್ರತ್ಯೇಕಿಸು, ಆರಿಸಿಕೊ, ಆಯ್ಕೆಮಾಡು'; ಹೀಗೆ 'ತೀರ್ಮಾನಿಸಿಕೊಳ್ಳಲು,' ಮತ್ತು 'ತೀರ್ಪು ಮಾಡಲು, ತೀರ್ಪನ್ನು ಪ್ರಕಟಿಸು' ಎಂಬರ್ಥವನ್ನು ಸೂಚಿಸುತ್ತದೆ."[79] ಈ ಪದದಿಂದ ವ್ಯಕ್ತವಾಗುವ ಆಲೋಚನೆಯು ಧನಾತ್ಮಕವಾಗಿರಬಲ್ಲದು ಅಥವಾ ನಕಾರಾತ್ಮವಾಗಿರಬಲ್ಲದು, ಮತ್ತು ಎರಡೂ ಬಳಕೆಗಳನ್ನು ವಾಕ್ಯಭಾಗದಲ್ಲಿ ಕಾಣಬಹುದು. ಕೆಳಗಿನ ವಚನಗಳಲ್ಲಿರುವ ಓರೆಯಾಗಿರುವ (italic) ಪದಗಳನ್ನು ಗಮನಿಸಿರಿ, ಅವುಗಳೆಲ್ಲಾ *krinō* ರೂಪದ ಪದಗಳಿಂದ ಅನುವಾದಿಸಲ್ಪಟ್ಟವುಗಳಾಗಿವೆ:

> 14:3—ತಿನ್ನುವವನು ತಿನ್ನದವನನ್ನು ಹೀನೈಸಬಾರದು; ತಿನ್ನದವನು ತಿನ್ನುವವನನ್ನು *ದೋಷಿಯೆಂದು ಎಣಿಸಬಾರದು*. ದೇವರು ಇಬ್ಬರನ್ನೂ ಸೇರಿಸಿಕೊಂಡಿದ್ದಾನಲ್ಲಾ.

> 14:4—ಮತ್ತೊಬ್ಬನ ಸೇವಕನ ವಿಷಯವಾಗಿ *ತೀರ್ಪುಮಾಡುವದಕ್ಕೆ* ನೀನು ಯಾರು? ಅವನು ನಿರ್ದೋಷಿಯಾಗಿ ನಿಂತರೂ ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೇ ಸೇರಿದ್ದು.

> 14:5—ಒಬ್ಬನು ಒಂದು ದಿನಕ್ಕಿಂತ ಮತ್ತೊಂದು ದಿನವನ್ನು ವಿಶೇಷ*ವೆಂದೆಣಿಸುತ್ತಾನೆ*; ಮತ್ತೊಬ್ಬನು ಎಲ್ಲಾ ದಿವಸಗಳನ್ನೂ ವಿಶೇಷ*ವೆಂದೆಣಿಸುತ್ತಾನೆ*; ಪ್ರತಿಯೊಬ್ಬನು ತನ್ನ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು.

> 14:10—ತಿನ್ನದವನೇ, ನಿನ್ನ ಸಹೋದರನ ವಿಷಯವಾಗಿ ನೀನು *ತೀರ್ಪುಮಾಡುವದೇನು*? ತಿನ್ನುವವನೇ, ನಿನ್ನ ಸಹೋದರನನ್ನು ನೀನು ಹೀನೈಸುವದೇನು? ನಾವೆಲ್ಲರೂ ದೇವರ ನ್ಯಾಯಸನದ ಮುಂದೆ ನಿಲ್ಲಬೇಕಲ್ಲಾ.

> 14:13—ಆದಕಾರಣ ಇನ್ನು ಮೇಲೆ ಒಬ್ಬರ ವಿಷಯದಲ್ಲೊಬ್ಬರು *ತೀರ್ಪುಮಾಡದೆ* ಇರೋಣ. ಅದಕ್ಕೆ ಬದಲಾಗಿ ಸಹೋದರನ ಎದುರಿಗೆ ಅಡ್ಡಿಯನ್ನಾಗಲಿ ಎಡತಡೆಯನ್ನಾಗಲಿ ಹಾಕಬಾರದೆಂದು *ತೀರ್ಮಾನಿಸಿಕೊಳ್ಳಿರಿ.*

14:22—ನಿನಗಿರುವ ನಂಬಿಕೆಯು ದೇವರಿಗೆ ಮಾತ್ರ ಗೋಚರವಾಗಿ ನಿನ್ನ ಮಟ್ಟಿಗೇ ಇರಲಿ. ತಾನು ಒಪ್ಪಿದ ಕೆಲಸದ ವಿಷಯದಲ್ಲಿ *ಸಂಶಯ ಪಡದವನೇ* ಧನ್ಯನು.

14:23—ಸಂಶಯಪಟ್ಟು ಉಣ್ಣುವವನು ಸಂಶಯದಿಂದ ಉಣ್ಣುವ ಕಾರಣ *ದೋಷಿಯಾ ಗಿದ್ದಾನೆ*. ಯಾವುದಕ್ಕೆ ನಂಬಿಕೆಯು ಆಧಾರವಿಲ್ಲವೋ ಅದು ಪಾಪ.

14ನೇ ಅಧ್ಯಾಯದಲ್ಲಿ, *krinō* ಕೆಲವು ಸಾರಿ ಧನಾತ್ಮಕ ಅರ್ಥದಲ್ಲಿ ಬಳಸಲ್ಪಟ್ಟಿದೆ. ಅದು 5ನೇ ವಚನದಲ್ಲಿ ಎರಡು ಸಾರಿ "ಎಣಿಸುತ್ತಾನೋ" ಎಂದು ಮತ್ತು 13bರಲ್ಲಿ "ತೀರ್ಮಾನಿಸಿಕೊಳ್ಳಿರಿ" ಎಂದು ಅನುವಾದಿಸಲ್ಪಟ್ಟಿದೆ. ಹೇಗಿದ್ದರೂ, ಕ್ರಿಯಾಪದವು ಪ್ರಾಥಮಿಕವಾಗಿ ಒಂದು ನಕಾರಾತ್ಮಕ ಸೂಚ್ಯಾರ್ಥವನ್ನು ಹೊಂದಿರುತ್ತದೆ ಮತ್ತು ಸಾಮಾನ್ಯವಾಗಿ "ತೀರ್ಪುಮಾಡು" ಎಂದು ಅನುವಾದಿಸಲ್ಪಡುತ್ತದೆ (14:3, 4, 10, 13a). ಅಧ್ಯಾಯದ ಅಂತ್ಯದಲ್ಲಿ, "ದೋಷಿ" ಮತ್ತು "ದೋಷಿಯಾಗಿದ್ದಾನೆ" ಎಂದು ಅನುವಾದಿಸಲ್ಪಟ್ಟಿದೆ (14:22, 23).

ಅಧ್ಯಾಯದ ಕಡೆಯ ಅರ್ಧಭಾಗವು ಈ ಬುದ್ಧಿವಾದದೊಂದಿಗೆ ಆರಂಭಗೊಳ್ಳುತ್ತದೆ: "ಆದಕಾರಣ ಇನ್ನು ಮೇಲೆ ಒಬ್ಬರ ವಿಷಯದಲ್ಲೊಬ್ಬರು ತೀರ್ಪುಮಾಡದೆ ಇರೋಣ. ಅದಕ್ಕೆ ಬದಲಾಗಿ ಸಹೋದರನ ಎದುರಿಗೆ ಅಡ್ಡಿಯನ್ನಾಗಲಿ ಎಡತಡೆಯನ್ನಾಗಲಿ ಹಾಕಬಾರದೆಂದು ತೀರ್ಮಾನಿಸಿಕೊಳ್ಳಿರಿ" (14:13). *ತೀರ್ಪು* ಮಾಡಬಾರದು ಎಂಬ ಪೌಲನ ಮಾತುಗಳನ್ನು ಕೆಲವರು ಅಪಾರ್ಥ ಕಲ್ಪಿಸಿ ನಾವು ಇತರರು ಉಪದೇಶವನ್ನು ನಾವು ಪ್ರಶ್ನಿಸಲೇ ಬಾರದು, ಅವರು ಏನೇ ಹೇಳಿದರೂ ಅವರ ಎಲ್ಲಾ ಅಭಿಪ್ರಾಯಗಳ ಬಗ್ಗೆಯೂ ನಾವು ಸೈರಣೆಯುಳ್ಳವರಾಗಿರಬೇಕು ಎಂದು ಹೇಳುತ್ತಾರೆ. ಹೇಗೂ, 15:7ರಲ್ಲಿ "ಒಬ್ಬರನ್ನೊಬ್ಬರು *ಸೇರಿಸಿಕೊಳ್ಳಿರಿ"* ಎಂದು ಹೇಳಿದ ಅದೇ ಪೌಲನು 16:17ರಲ್ಲಿ "ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟುಮಾಡುವವರನ್ನು ಗುರುತಿಟ್ಟು ಅವರನ್ನು '*ಬಿಟ್ಟು ತೊಲಗಿ ಹೋಗಿರಿ'"* ಎಂದು ಸಹ ಹೇಳಿದ್ದಾನೆ (ಒತ್ತಿ ಹೇಳಿದ್ದು ನನ್ನದು). ಪೌಲನು ಕೆಲವು ಸಹೋದರರನ್ನು "ಸೇರಿಸಿಕೊಳ್ಳಿರಿ" ಮತ್ತು ಇನ್ನು ಕೆಲವರನ್ನು "ಬಿಟ್ಟು ತೊಲಗಿ ಹೋಗಿರಿ" ಎಂದು ಹೇಳಿದನು. ಏಕೆ ಈ ತಾರತಮ್ಯ? ನಾವು ನಮ್ಮ ಅಭಿಪ್ರಾಯಗಳಿಗಿಂತ ಬೇರೆ ಅಭಿಪ್ರಾಯಗಳನ್ನು ಹೊಂದಿರುವವರನ್ನು *ಸೇರಿಸಿಕೊಳ್ಳಬೇಕು*, ಆದರೆ ಭೇದಗಳನ್ನುಂಟು ಮಾಡುವಂತಹ ದೋಷಪೂರಿತ ಉಪದೇಶಗಳನ್ನು ನಾವು *ತಿರಸ್ಕರಿಸ*ತಕ್ಕದ್ದು. ನಾವು ಒಂದು ಬಿಗಿಹಗ್ಗದ ಮೇಲೆ ನಡೆಯುವವರಾಗಿದ್ದೇವೆ; ನಾವು ಭಿನ್ನಾಭಿಪ್ರಾಯವುಳ್ಳವರಿಗೆ ತೀರ್ಪುಮಾಡುವಂತಹ ಎಡಭಾಗಕ್ಕೆ ಬೀಳುವದಕ್ಕೆ ಪ್ರಯತ್ನಿಸದಂತೆ ಇರಬೇಕು; ಮತ್ತು, ಅದೇ ವೇಳೆಯಲ್ಲಿ, ನಾವು ತಪ್ಪು ಉಪದೇಶವನ್ನು ಸ್ವೀಕರಿಸಿಕೊಂಡು ಸೈರಿಸಿಕೊಳ್ಳುವಂತಹ ಬಲಭಾಗಕ್ಕೆ ಬೀಳುವದಕ್ಕೆ ಸಹ ಯತ್ನೈಸಬಾರದು.

ರೋಮಾ 14:1-15:13 *ಅಭಿಪ್ರಾಯ*ದ ವಿಷಯದ ಬಗ್ಗೆ ಕಳಕಳಿಯುಳ್ಳದ್ದಾಗಿದೆ ಎಂಬುದನ್ನು ಮತ್ತೊಮ್ಮೆ ಒತ್ತಿ ಹೇಳತಕ್ಕದ್ದಾಗಿದೆ. *ಈ* ವಿಷಯಗಳ ಕುರಿತಾಗಿ, ಪೌಲನು ಹೀಗೆ ಹೇಳುತ್ತಾನೆ, "ಆದಕಾರಣ ಇನ್ನು ಮೇಲೆ ಒಬ್ಬರ ವಿಷಯದಲ್ಲೊಬ್ಬರು ತೀರ್ಪು

ಮಾಡದೆ ಇರೋಣ" (14:3). ಈ ಆಜ್ಞೆಯನ್ನು ಅನುಸರಿಸುವ ಮೂಲಕ, ನಾವು ಕರ್ತನ ಸಭೆಯಲ್ಲಿ ಐಕ್ಯತೆಯನ್ನು ಉಂಟು ಮಾಡಬಲ್ಲೆವು.

# ಅನ್ವಯಿಸುವಿಕೆ

## ವಿಭಜನೆಗೆ ಅವಕಾಶ ಕೊಡದೆಯೇ ಭಿನ್ನಾಭಿಪ್ರಾಯ ವ್ಯಕ್ತಪಡಿಸುವದು (ಅಧ್ಯಾಯ 14)

*ಅಭಿಪ್ರಾಯ ಸಂಬಂಧಿತ ವಿಷಯಗಳು?*

1. ಸಭೆಯಲ್ಲಿ. ಸಭೆಯೊಳಗಿನ ಜನರಲ್ಲಿ ಯಾವಾಗಲೂ ಭಿನ್ನಾಭಿಪ್ರಾಯಗಳು ಇದ್ದೇ ಇದ್ದಾವೆ, ಮತ್ತು ಅವು ಯಾವಾಗಲೂ ಇರುವವು ಸಹ. ಇವುಗಳಲ್ಲಿ ಕೆಲವು ಸಿದ್ಧಾಂತಕ್ಕೆ ಸಂಬಂಧಿಸಿದವುಗಳಾಗಿವೆ. ಅಂಥವುಗಳ ವಿಷಯದಲ್ಲಿ, ಯೂದನು ಹೀಗೆ ಬರೆದನು, "ದೇವಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಕಾಪಾಡಿಕೊಳ್ಳುವದಕ್ಕೆ ನೀವು ಹೋರಾಡಬೇಕು" (ಯೂದನು 3). ಹೇಗೂ, ಸಭೆಗಳಲ್ಲಿರುವ ಬಹಳಷ್ಟು ಪ್ರಮಾಣದ ಗದ್ದಲಗಳು ಅಭಿಪ್ರಾಯಕ್ಕೆ ಸಂಬಂಧಿತ ವಿಷಯಗಳಿಗಾಗಿಯೇ ಆಗಿರುತ್ತವೆ. ರೋಮಾ 14ರಲ್ಲಿ, ನಂಬಿಕೆಗೆ ಸಂಬಂಧಿತವಲ್ಲದ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಉಂಟಾಗುವದಾದರೆ ಕ್ರೈಸ್ತರು ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಪೌಲನು ತಿಳಿಸುತ್ತಾನೆ. ಕ್ರಿಸ್ತನಲ್ಲಿ ಸಹೋದರರು ಹಾಗೂ ಸಹೋದರಿಯರಾಗಿ, ನಾವು ಸಭೆಯಲ್ಲಿ ವಿಭಜನೆಗಳಾಗುವಂತೆ ಕಾರಣರಾಗದೆಯೇ ಹೇಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಬಹುದೆಂಬದನ್ನು ಕಲಿತುಕೊಳ್ಳಬಲ್ಲೆವು.[80]

2. ಸಮಾಜದಲ್ಲಿ. ಪೌಲನ ಕಳಕಳಿಯು ಸಭೆಯಲ್ಲಿನ ಅಸಾಮರಸ್ಯದ ಕುರಿತಾಗಿತ್ತು, ಆದರೆ ಸಂಕ್ಷೇಪ್ತವಾಗಿ ವಿವರಿಸಲ್ಪಟ್ಟಿರುವ ಸೂತ್ರಗಳು ಜನರು ಸಹಮತ ವ್ಯಕ್ತಪಡಿಸಿದಂತಹ ಯಾವದೇ ಪರಿಸ್ಥಿತಿಯಲ್ಲಿ ಸಹಾಯ ಮಾಡಬಹುದಾಗಿರುತ್ತವೆ.[81] ಇತರರನ್ನು ಸ್ವೀಕರಿಸಿಕೊಳ್ಳುವ, ಇತರರ ಭಕ್ತಿವೃದ್ಧಿಗೊಳಿಸುವ, ಮತ್ತು ಇತರರಿಗೆ ಮೆಚ್ಚಿಕೆಯಾಗಿರುವದಂತಹ (ತಮ್ಮನ್ನು ತಾವೇ ಮೆಚ್ಚಿಸಿಕೊಳ್ಳುವ ಬದಲಾಗಿ) ಮೂಲತತ್ವಗಳು ಯಾವದೇ ದಾಂಪತ್ಯ ಹಾಗೂ ಕುಟುಂಬಕ್ಕೆ ಸಹಾಯಕವಾಗಬಲ್ಲವು. ಈ ಭಾವನೆಗಳು ಯಾವದೇ ಉದ್ಯಮಗಳು ಮತ್ತು ಸಮುದಾಯಗಳಲ್ಲಿನ ಘರ್ಷಣೆಗಳನ್ನು ನೀಗಿಸಬಲ್ಲವು, ಮತ್ತು ರಾಜಕೀಯ ಕ್ಷೇತ್ರದಲ್ಲಿನ ಘರ್ಷಣೆಗಳನ್ನು ಸಹ ಪರಿಹರಿಸಬಲ್ಲವು. Jim McGuiggan ವಾದಿಸಿದ್ದೇನೆಂದರೆ, "ನಮ್ಮ ಇಷ್ಟದಂತೆಯೇ ನಡೆಯಬೇಕೆಂದು ಹಠಮಾರಿ ವಾದ ಮಾಡುವದು . . . ಹೆತ್ತವರ/ಮಗುವಿನ ನಡುವೆ ಸಮಸ್ಯೆಗಳಿಗೆ ದಾರಿ ಮಾಡುತ್ತದೆ; ಗಂಡ/ಹೆಂಡತಿಯರಲ್ಲಿ ಸಮಸ್ಯೆಗಳುಂಟಾಗಿ ಕೊನೆಗೆ ವಿಚ್ಛೇದನಕ್ಕೆ ನಡಿಸುತ್ತದೆ; [ಮತ್ತು] ಗಲಭೆಗಳಲ್ಲಿಯೂ ಯುದ್ಧಗಳಲ್ಲಿಯೂ ಫಲಿತಗೊಳ್ಳುವಂತಹ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಮಸ್ಯೆಗಳಿಗೆ ನಡಿಸುತ್ತದೆ."[82]

*ನಂಬಿಕೆಗೆ ಸಂಬಂಧಿತ ವಿಷಯಗಳು?*

ರೋಮಾ 14ನೇ ಅಧ್ಯಾಯವನ್ನು ಕಟ್ಟುನಿಟ್ಟಾಗಿ ಒಂದು ಭಿನ್ನಾಭಿಪ್ರಾಯಕ್ಕೆ ಅನ್ವಯಿಸಬಹುದು, ವಿವಾದಾಂಶವು ಅಭಿಪ್ರಾಯ ಸಂಬಂಧಿತವಾದ್ದೆಂಬದನ್ನು

ಸಾಭೀತುಪಡಿಸತಕ್ಕದ್ದು. ಹೇಗೂ, ನಾನು ನಂಬುವದೇನೆಂದರೆ, ನಾವು *ಯಾವದೇ ಸಮಯದಲ್ಲಿ* ಒಬ್ಬ ಸಹೋದರನೊಂದಿಗೆ ಭಿನ್ನಾಭಿಪ್ರಾಯ ಹೊಂದುವಾಗ—ಸಿದ್ಧಾಂತಿಕ ಭಿನ್ನಾಭಿಪ್ರಾಯಗಳು ಸಹ ಚರ್ಚಿಸಲ್ಪಡುತ್ತಿವೆ—ಸಹಾಯಕವಾಗುವಂತಹ ಕೆಲವು ಸಾಮಾನ್ಯವಾದ ಮೂಲತತ್ವಗಳನ್ನು ಈ ವಾಕ್ಯಭಾಗದಿಂದ ನ್ಯಾಯಸಮ್ಮತವಾಗಿ ಎತ್ತಿಕೊಳ್ಳಬಹುದಾಗಿದೆ ಎಂಬುದೆ. ಈ ಕೆಳಗೆ ಕೆಲವು ಉದಾಹರಣೆಗಳಿರುತ್ತವೆ; ಬಹುಶಃ ನೀವು ಇನ್ನಷ್ಟನ್ನು ಕಂಡು ಹಿಡಿಯಬಹುದಾಗಿದೆ. (ನನಗೆ ಈ ಜ್ಞಾಪಕಗೊಳಿಸುವಿಕೆಗಳ ಅಗತ್ಯವಿದೆ; ಬಹುಶಃ ನಿಮಗೆ ಸಹ ಇರಬಹುದು.)

1. ಮನವರಿಕೆಗೊಂಡವರು ಮತ್ತು ಸ್ಥಿರವಾದವರಾಗಿರ್ರಿ.[83] ಮೊದಲನೆಯದಾಗಿ, ನಾವು ದೇವರ ವಾಕ್ಯವನ್ನು ಕೂಲಂಕಷವಾಗಿ ಅಧ್ಯಯನ ಮಾಡುವ ಮತ್ತು ಆಯಾ ವಿಷಯದಲ್ಲಿ ದೇವರ ಚಿತ್ತವೇನೆಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯ ನೀಡುವಂತೆ ದೇವರನ್ನು ಅತ್ಯಾಸಕ್ತಿಯಿಂದ ದೇವರನ್ನು ಪ್ರಾರ್ಥಿಸುವ ಅಗತ್ಯವಿರುತ್ತದೆ. ನಾವು ವೈಯಕ್ತಿಕವಾಗಿ ಮನವರಿಕೆಯನ್ನು ಹೊಂದಿರಬೇಕು (14:5); ಮತ್ತು ನಾವು ನಮ್ಮ ನಂಬಿಕೆಗಳು, ಉಪದೇಶಗಳು, ಮತ್ತು ಕೃತ್ಯಗಳಲ್ಲಿ ಸ್ಥಿರತೆಯಿಂದಿರುವದಕ್ಕೆ ಶ್ರಮಿಸಬೇಕು (14:23).

2. ಕನಿಕರವುಳ್ಳವರು ಹಾಗೂ ದಾಕ್ಷಿಣ್ಯಪರರಾಗಿರ್ರಿ. ಒಬ್ಬರು ನಿಮ್ಮ ಮನವರಿಕೆಗಳೊಂದಿಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸುವದಾದರೆ, ಆತನ ವಿಷಯದಲ್ಲಿ ನಾವು ಪ್ರೀತಿಯಲ್ಲಿ ನಡೆದುಕೊಳ್ಳುವದಕ್ಕೆ ತೀರ್ಮಾನಿಸಿಕೊಳ್ಳೋಣ (14:15a). ಅಂತೂ, ಆತನು "ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ" ಅವರಲ್ಲೊಬ್ಬನಾಗಿದ್ದಾನಷ್ಟೆ (14:15b). ನಾವು ಕ್ರಿಸ್ತನಲ್ಲಿನ ನಮ್ಮ ಸಹೋದರರು ಹಾಗೂ ಸಹೋದರಿಯರನ್ನು ಪ್ರೀತಿಸುವದಾದರೆ, ನಾವು ಆವರನ್ನು ಗೌರವದಿಂದ ನಡಿಸಿಕೊಳ್ಳುತ್ತೇವೆ (14:10b). ತೀರ್ಪುಮಾಡುವವರಾಗಿರುವ ಬದಲಾಗಿ (14:10a), ನಾವು ನಮ್ಮ ನುಡಿಗಳು ಮತ್ತು ಕೃತ್ಯಗಳನ್ನೆಲ್ಲಾ ಸಾಧ್ಯವಾದಷ್ಟು ಉತ್ತಮವಾದ ವಿಧದಲ್ಲಿ ಅರ್ಥನಿರೂಪಣೆ ಮಾಡುವೆವು.

ಎದುರಿನ ವ್ಯಕ್ತಿಗಳು ನಮ್ಮಷ್ಟೇ ಪ್ರಾಮಾಣಿಕರಾಗಿದ್ದು, ಅವರು ಸಹ, ಕರ್ತನಿಗೋಸ್ಕರ ಜೀವಿಸುವದಕ್ಕೆ ಶ್ರಮಿಸುತ್ತಿದ್ದಾರೆಂಬುದಾಗಿ ನಂಬುವವರಾಗಿ ನಾವು ಯಾವದೇ ರೀತಿಯ ಚರ್ಚೆಯಲ್ಲಿ ಪ್ರವೇಶಿಸುವೆವು (14:8). ನಾವು ಇತರ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಿಸುವೆವು ಮತ್ತು ಆ ನಿಲುವಿನಲ್ಲಿರುವ ಸಾಧಕಗಳನ್ನು ಒಪ್ಪಿಕೊಳ್ಳಲು ಸಿದ್ಧರಾಗಿರುವೆವು.

3. ಕಾಳಜಿ ಮತ್ತು ಹಿತಾಸಕ್ತಿ ಉಳ್ಳವರಾಗಿರ್ರಿ. ನಾವು ಮಾಡುವ ಎಲ್ಲದರಲ್ಲಿಯೂ, ನಾವು ಒಬ್ಬ ಸಹೋದರನಿಗೆ ಎಂದಿಗೂ ನೋವು ಅಥವಾ ನಿರಾಶೆ ಉಂಟುಮಾಡದಿರುವದಕ್ಕೆ ಪ್ರಯತ್ನಿಸಬೇಕು (14:20, 21). ಎಲ್ಲಕ್ಕಿಂತ ಮೇಲಾಗಿ, ನಾವು ಸಭೆಯೊಂದರಲ್ಲಿ ಪಂಗಡವುಂಟಾಗುವದಕ್ಕೆ ಅಥವಾ ಕರ್ತನ ಸಭೆಯು "ದೂಷಣೆಗೆ ಆಸ್ಪದವಾಗುವ"ದಕ್ಕೆ ಕಾರಣಕರ್ತರಾಗದಿರೋಣ (14:16). ಕರ್ತನ ಸಹಾಯದೊಂದಿಗೆ, "ಸಮಾದಾನಕ್ಕೂ ಪರಸ್ಪರ ಭಕ್ತಿವೃದ್ಧಿಗೂ ಅನುಕೂಲವಾಗಿರುವವುಗಳನ್ನು ಸಾಧಿಸಿಕೊಳ್ಳಲು" ಯಾವಾಗಲೂ ಪ್ರಯಾಸ ಪಡೋಣ (14:19).

*ಮುಕ್ತಾಯ.* 12:18ರಲ್ಲಿ, ಪೌಲನು ಹೀಗೆ ಹೇಳಿದನು, "ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ." ನಮಗೆ ಸಾಧ್ಯವಾದಷ್ಟು ಉತ್ತಮ

ಪ್ರಯತ್ನಗಳನ್ನು ಮಾಡಿದಾಗ್ಯೂ, ಕೆಲವು ಸಾರಿ ಒಬ್ಬ ಸಹೋದರನೊಂದಿಗೆ ಸಮಾಧಾನದಿಂದಿರುವದು ಅಸಾಧ್ಯವಾಗಿರುತ್ತದೆ. ಕೆಲವು ಸಾರಿ, "ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ ವಿಘ್ನಗಳನ್ನೂ . . . ಉಂಟುಮಾಡುವವರನ್ನು" "ಬಿಟ್ಟು ತೊಲಗಿ ಹೋಗುವ" ಅವಶ್ಯಕತೆಯಿರುತ್ತದೆ (16:17). ಒಂದು ವೇಳೆ, ಹೇಗೂ, ಒಬ್ಬ ಸಹೋದರನ ಸಂಗಡ ನಮಗೆ ಭಿನ್ನಾಭಿಪ್ರಾಯ ಉಂಟಾಗುವಾಗ ರೋಮಾ 14ರ ಸಾಮಾನ್ಯ ಮೂಲತತ್ವಗಳನ್ನು ಅನ್ವಯಿಸುವದಾದರೆ, ಅಂತಹ ಸಂದರ್ಭಗಳು ಸ್ವಲ್ಪವೇ ಆಗಿರುವವು ಮತ್ತು ದೂರದ ಅಂತರ ಹೊಂದಿರುವವು. Coy Roper ಹೀಗೆ ಬರೆದನು,

> ಒಂದು ಸಂಗತಿಯಂತೂ ಖಚಿತವಾಗಿ ತೋರುತ್ತದೆ [ರೋಮಾ 14ರ ಮೇಲಿನ ನಮ್ಮ ಅಧ್ಯಯನದಿಂದ]: ನಾವು ನಮ್ಮ ಹಾಗೂ ನಮ್ಮ ಸಹೋದರರ ನಡುವೆ ಗೆರೆಗಳನ್ನು ಎಳೆದುಕೊಳ್ಳುವದಕ್ಕೆ ಬಹಳವಾಗಿ ಒಲ್ಲದ ಮನಸ್ಸುಳ್ಳವರಾಗಿರತಕ್ಕದ್ದು. ನಮ್ಮೊಂದಿಗೆ ಭಿನ್ನಾಭಿಪ್ರಾಯವುಳ್ಳ ಸಹೋದರರನ್ನು ಸಹ ಸ್ವೀಕರಿಸಿಕೊಳ್ಳಲು ಸ್ವಾಭಾವಿಕವಾಗಿಯೂ ಪ್ರೀತಿಪೂರ್ವಕವಾಗಿಯೂ ಒಲವು ಉಳ್ಳವರಾಗಿರಬೇಕು. ಒಂದು ವೇಳೆ ಒಬ್ಬ ಸಹೋದರನನ್ನು ಆತನು ನಂಬಿರುವಂತಹ ತಪ್ಪು ಉಪದೇಶದ ಸ್ವಭಾವದ ಕಾರಣದಿಂದಾಗಿ ಆತನನ್ನು ಇನ್ನು ಮೇಲೆ ಸ್ವೀಕರಿಸಿಕೊಳ್ಳುವದಕ್ಕೆ ಸಾಧ್ಯವೇ ಇಲ್ಲವೆಂದಾದರೆ, ಅದನ್ನು ಕೇವಲ ಬಹುವಾದ ಒಲ್ಲದ ಮನಸ್ಸು, ದುಃಖ ಮತ್ತು ಕಣ್ಣೀರಿನಿಂದ ಮಾತ್ರವೇ ಮಾಡಬೇಕಾಗಿರುತ್ತದೆ.[84]

## ನೀವು ನಿಮ್ಮ ಮನಸ್ಸಾಕ್ಷಿಯನ್ನು ನಿಮಗೆ ಮಾರ್ಗದರ್ಶಿಯಾಗಿರುವಂತೆ ಅನುಮತಿಸಬೇಕೋ? (ಅಧ್ಯಾಯ 14)

ನಾವು ಆಗಾಗ್ಗೆ "ನಿನ್ನ ಮನಸ್ಸಾಕ್ಷಿಯೇ ನಿನಗೆ ಮಾರ್ಗದರ್ಶಿಯಾಗಿರಲಿ" ಎಂಬ ಮಾತನ್ನು ಕೇಳಿಸಿಕೊಳ್ಳುತ್ತಿರುತ್ತೇವೆ. ಒಬ್ಬನು ಎಲ್ಲಿಯ ತನಕ ತನ್ನ ಮನಸ್ಸಾಕ್ಷಿಯು ಹೇಳುವ ಪ್ರಕಾರವಾಗಿ ಬದುಕುತ್ತಾನೋ ಎಲ್ಲವೂ ಸರಿಯಾಗಿಯೇ ಇರುತ್ತದೆ ಎಂಬದಾಗಿ ಒಂದು ಸರ್ವಸಾಮಾನ್ಯವಾಗಿರುವ ಮನವರಿಕೆಯು ಧರ್ಮದಲ್ಲಿರುತ್ತದೆ. ಈ ವಿಭಾಗದಲ್ಲಿ, ನಾವು ಈ ಪ್ರಶ್ನೆಯನ್ನು ಕೇಳಿಕೊಳ್ಳುತ್ತಿದ್ದೇವೆ, "ನೀವು ನಿಮ್ಮ ಮನಸ್ಸಾಕ್ಷಿಯನ್ನು ನಿಮಗೆ ಮಾರ್ಗದರ್ಶಿಯಾಗಿರುವಂತೆ ಅನುಮತಿಸ *ಬೇಕೋ?*" ನನ್ನ ಉತ್ತರವು ಕೆಲವು ರಾಜಕೀಯ ವ್ಯಕ್ತಿಗಳು ಹೇಳುವಂತೆ ತೋರಬಹುದು—ಕಾರಣ ನನ್ನ ಉತ್ತರವು "ಹೌದು" ಮತ್ತು "ಇಲ್ಲ." ನನ್ನ ತಾತ್ಪರ್ಯವು ಏನೆಂಬುದನ್ನು ನೀವು ಅರ್ಥಮಾಡಿಕೊಳ್ಳುವಂತೆ ನನ್ನನ್ನು ಕೇಳಿಸಿಕೊಳ್ಳುವಿರೆಂದು ನಾನು ನಿರೀಕ್ಷಿಸುತ್ತೇನೆ. ನಾನು ಮೊದಲಿಗೆ "ಇಲ್ಲ" ಎಂಬ ಉತ್ತರದಿಂದ ಆರಂಭಿಸುತ್ತೇನೆ:

*"ಇಲ್ಲ": ಧಾರ್ಮಿಕ ವಿಚಾರಗಳಲ್ಲಿ ಮನಸ್ಸಾಕ್ಷಿಯೊಂದೇ ಸಾಕಾದಂಥ ಮಾರ್ಗದರ್ಶಿಯಲ್ಲ.* ಧರ್ಮದ ವಿಚಾರದಲ್ಲಿ ಮನಸ್ಸಾಕ್ಷಿಯು ಒಂದು ಸುರಕ್ಷಿತವಾದ ಮಾರ್ಗದರ್ಶಿಯಲ್ಲ ಎಂಬುದನ್ನು ಬೈಬಲ್ ಸ್ಪಷ್ಟಗೊಳಿಸುತ್ತದೆ. ಪೌಲನ ಉದಾಹರಣೆಯನ್ನು ಪರಿಗಣಿಸಿರಿ. ಪೌಲನು ಯಾವಾಗಲೂ ಶುದ್ಧ ಮನಸ್ಸಾಕ್ಷಿಗೆ ಅನುಗುಣವಾಗಿ ಬದುಕಿದನು. ಆತನು ಯೆಹೂದಿ ಹಿರೀಸಭೆಗೆ ಹೀಗೆ ಹೇಳಿದನು, "ಸಹೋದರರೇ, ನಾನು ಈ ದಿನದ ವರೆಗೂ ಒಳ್ಳೇ ಮನಸ್ಸಾಕ್ಷಿಯಿಂದ ದೇವರ ಮುಂದೆ ನಡೆದುಕೊಂಡಿದ್ದೇನೆ" (ಅಪೊಸ್ತಲರ

ಕೃತ್ಯಗಳು 23:1). ಆತನು ರಾಜನಾದ ಅಗ್ರಿಪ್ಪನಿಗೆ ಹೀಗೆ ಹೇಳಿದನು, "ನಜರೇತಿನ ಯೇಸುವಿನ ಹೆಸರಿಗೆ ವಿರುದ್ಧವಾಗಿ ಅನೇಕ ಕಾರ್ಯಗಳನ್ನು ನಡಿಸಬೇಕೆಂದು ನಾನೂ ಯೋಚಿಸಿಕೊಂಡಿದ್ದೆನು" (ಅಪೊಸ್ತಲರ ಕೃತ್ಯಗಳು 26:9). ಆತನು ತಿಮೊಥೆಯನಿಗೆ ಬರೆದಾಗ, ಆತನು "ಒಳ್ಳೆ ಮನಸ್ಸಾಕ್ಷಿಯುಳ್ಳವನಾಗಿ ಆರಾಧಿಸುವ ದೇವರಿಗೆ" ಎಂಬ ಬಗ್ಗೆ ಮಾತಾಡುತ್ತಾನೆ (2 ತಿಮೊಥೆ 1:3).

ಪೌಲನ ಮನಸ್ಸಾಕ್ಷಿಯು ಆತನ ಕೃತ್ಯಗಳನ್ನು ಯಾವಾಗಲೂ ಅನುಮೋದಿಸಿತಾದರೂ, ಒಬ್ಬ ಕ್ರೈಸ್ತನಾಗುವದಕ್ಕೆ ಮುಂಚೆ ಆತನು ದೇವರಿಗೆ ಮೆಚ್ಚಿಕೆಯಲ್ಲದ ಅನೇಕ ಕಾರ್ಯಗಳನ್ನು—ಯೇಸುವನ್ನು ತಿರಸ್ಕರಿಸುವದು, ಕ್ರೈಸ್ತರನ್ನು ಹಿಂಸಿಸುವದು, ಮತ್ತು ಮುಗ್ಧ ಪುರುಷರನ್ನೂ ಸ್ತ್ರೀಯರನ್ನೂ ಹತ್ಯೆಮಾಡುವದು ಸೇರಿದಂತೆ—ಮಾಡಿದನು. ಆತನು ಇದನ್ನು ಅಗ್ರಿಪ್ಪನಿಗೆ ವಿವರಿಸಿದನು:

> . . . ಮಹಾಯಾಜಕರಿಂದ ಅಧಿಕಾರವನ್ನು ಪಡೆದು ದೇವಜನರಲ್ಲಿ ಅನೇಕರನ್ನು ಸೆರೆಮನೆಗಳಲ್ಲಿ ಇಡಿಸಿ ಅವರಿಗೆ ಮರಣದ ತೀರ್ಪಾದಾಗ ನನ್ನ ಸಮ್ಮತಿಯನ್ನು ಸೂಚಿಸಿದೆನು. ಎಲ್ಲಾ ಸಭಾಮಂದಿರಗಳಲ್ಲಿಯೂ ನಾನು ಅನೇಕಾವರ್ತಿ ಅವರನ್ನು ದಂಡಿಸಿ ಅವರಿಂದ ದೂಷಣೆಯ ಮಾತುಗಳನ್ನಾಡಿಸುವದಕ್ಕೆ ಪ್ರಯತ್ನಿಸಿದೆನು. ಇದಲ್ಲದೆ ಅವರ ಮೇಲೆ ಬಹುಕೋಪಾವೇಶವುಳ್ಳವನಾಗಿ ಪರಪಟ್ಟಣಗಳ ತನಕ ಅವರನ್ನು ಹಿಂಸೆಪಡಿಸಿದೆನು (ಅಪೊಸ್ತಲರ ಕೃತ್ಯಗಳು 26:10, 11).

ಆತನು ತಿಮೊಥೆಯನಿಗೆ "ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು . . . ಆ ಪಾಪಿಗಳಲ್ಲಿ ನಾನೇ ಮುಖ್ಯನು" ಎಂದು ಹೇಳುತ್ತಾನೆ (1 ತಿಮೊಥೆ 1:15).

1 ಕೊರಿಂಥ 4:4ರಲ್ಲಿ, ಪೌಲನು ಹೀಗೆ ಹೇಳುತ್ತಾನೆ, "ನನ್ನಲ್ಲಿ ದೋಷವಿದೆಯೆಂದು ನನ್ನ ಬುದ್ಧಿಗೆ ತೋರುವದಿಲ್ಲವಾದರೂ ದೋಷವಿಲ್ಲದವನೆಂಬ ನಿರ್ಣಯವು ಇದರಿಂದಾಗುವದಿಲ್ಲ; ನನ್ನನ್ನು ವಿಚಾರಣೆಮಾಡುವವನು ಕರ್ತನೇ." "ನನ್ನ ಬುದ್ಧಿಗೆ" ಎಂಬುದು "ಮನಸ್ಸಾಕ್ಷಿ" ಎಂಬುದಕ್ಕಾಗಿರುವ ಗ್ರೀಕ್ ಪದದ ಒಂದು ಅನುವಾದವಾಗಿರುತ್ತದೆ. ತತ್ಪರಿಣಾಮವಾಗಿ, ಪೌಲನು ಹೇಳಿದ್ದೇನೆಂದರೆ, "ನನ್ನ ಮನಸ್ಸಾಕ್ಷಿಯು ನನ್ನನ್ನು ದೋಷಿಯೆಂದು ಹೇಳುವದಿಲ್ಲವಾದರೂ, ಅದು ಮಾತ್ರವೇ ನನ್ನನ್ನು ಸರಿ ಎಂದಾಗಿಸುವದಿಲ್ಲ; ನಾನು ಸರಿಯೋ ಅಥವಾ ಇಲ್ಲವೋ ಎಂಬುದನ್ನು ದೇವರು ಮಾತ್ರವೇ ನಿರ್ಣಯಿಸಬಲ್ಲನು."

ಧರ್ಮದಲ್ಲಿ ಮನಸ್ಸಾಕ್ಷಿಯು ಒಂದು ಸುರಕ್ಷಿತ ಮಾರ್ಗದರ್ಶಿಯಲ್ಲ ಎಂಬುದರ ಪುರಾವೆಗಳು—ಬೈಬಲ್‌ನಿಂದ ಮತ್ತು ಪ್ರತಿಯೊಬ್ಬ ಮನುಷ್ಯನ ಅನುಭವದಿಂದ—ಅಸಂಖ್ಯಾತವಾಗಿರಬಲ್ಲವು. ಬೈಬಲಿನಲ್ಲಿ, ಜನರು ಅನೇಕ ಸಾರಿ ವಿಚಾರಗಳನ್ನು ಅವು ಸತ್ಯವಲ್ಲದಿದ್ದಾಗ್ಯೂ ಸತ್ಯವೆಂಬದಾಗಿ ಭಾವಿಸಿಕೊಂಡಿದ್ದರು. ಉದಾಹರಣೆಗೆ, ಯಾಕೋಬನು ಯೋಸೇಫನ ರಕ್ತಸಿಕ್ತ ಮೇಲಂಗಿಯನ್ನು ಕಂಡಾಗ, ಆತನ ಮಗನು ಕಾಡುಮೃಗಗಳಿಂದ ಕೊಲ್ಲಲ್ಪಟ್ಟಿದ್ದಾನೆಂದು ಯಥಾರ್ಥವಾಗಿಯೇ ವಿಶ್ವಾಸಿಸಿದನು (ಅದಿ 37:31-35).

ಜನರು ಯಥಾರ್ಥವಾಗಿ ತಪ್ಪು ಮಾಡಬಲ್ಲರು ಮತ್ತು ಪ್ರಾಮಾಣಿಕವಾಗಿ ಅಪಾರ್ಥಮಾಡಿಕೊಳ್ಳಲ್ಪಡಬಲ್ಲರು. "ಮನುಷ್ಯದೃಷ್ಟಿಗೆ ಸರಳವಾಗಿ ತೋರುವ ಒಂದು

ದಾರಿಯುಂಟು. ಅದು ಕಟ್ಟಕಡೆಗೆ ಮರಣಮಾರ್ಗವೇ" (ಜ್ಞಾನೋಕ್ತಿ 14:12; 16:25). ಒಂದು ಸುಳ್ಳನ್ನು ನಂಬುವದು ಮತ್ತು ನಾಶವಾಗಿ ಹೋಗುವದು ಸಾಧ್ಯವಿರುತ್ತದೆ (2 ಥೆಸಲೋನಿಕ 2:10-12). ಸತ್ಯವು ಮಾತ್ರವೇ ಒಬ್ಬನನ್ನು ಬಿಡುಗಡೆಗೊಳಿಸಬಲ್ಲದು (ಯೋಹಾನ 8:32).

ಜೀವನದ ಯಾವದೇ ಕ್ಷೇತ್ರದಲ್ಲಿ ಮನಸ್ಸಾಕ್ಷಿಯೊಂದೇ ಸಾಕಾದಂಥ ಮಾರ್ಗದರ್ಶಿಯಾಗಿರುವದಿಲ್ಲ.[85] ಅದು ಪ್ರಯಾಣದಲ್ಲಿ ಒಂದು ತಪ್ಪೇ ಮಾಡದಂಥ ಮಾರ್ಗದರ್ಶಿಯಗಿರುವದಿಲ್ಲ; ನಾನು ಸರಿಯಾದ ರಸ್ತೆಯಲ್ಲಿಯೇ ಇರುತ್ತೇನೆಂದು ಮನಸ್ಸಾಕ್ಷಿಪೂರ್ವಕವಾಗಿ ನಂಬಿರುತ್ತೇನೆ, ಆದರೆ ವಾಸ್ತವಿಕತೆಯಲ್ಲಿ ನಾನು ನನ್ನ ಸೇರಬೇಕಾದ ಸ್ಥಳದಿಂದ ಬಹಳ ದೂರವಿರುವ ಅನುಭವಗಳಾಗಿರುತ್ತವೆ. ಅದು ಆರೋಗ್ಯದ ವಿಷಯದಲ್ಲಿ ಸುರಕ್ಷಿತವಾದ ಮಾರ್ಗದರ್ಶಿಯಲ್ಲ; ವೈದ್ಯರು ಮನಸ್ಸಾಕ್ಷಿಯಿಂದ ತಮ್ಮ ರೋಗಿಗಳಿಗೆ ಚಿಕಿತ್ಸೆ ಮಾಡಿರುತ್ತಾರೆ, ಆದರೆ ಅನಂತರವಷ್ಟೇ ತಾವು ಅವರಿಗೆ ತಪ್ಪಾದ ವ್ಯಾದಿಗಳಿಗೆ ಚಿಕಿತ್ಸೆ ಕೊಟ್ಟಿದ್ದೇವೆಂಬುದನ್ನು ಗ್ರಹಿಸಿಕೊಂಡಿರುತ್ತಾರೆ. ಅದು ಉದ್ಯಮಗಳಲ್ಲಿ ಸಾಕಾದಂಥ ಮಾರ್ಗದರ್ಶಿಯಲ್ಲ; ಅನೇಕರು ಒಳ್ಳೇ ಮನಸ್ಸಾಕ್ಷಿಯಿಂದ ಉದ್ಯಮಗಳಲ್ಲಿ ಪ್ರವೇಶಿಸಿರುತ್ತಾರೆ, ಆದರೆ ತಮಗಿರುವದನ್ನೆಲ್ಲಾ ಕಳೆದುಕೊಂಡಿರುತ್ತಾರಷ್ಟೇ. ಅದು ದಾಂಪತ್ಯದಲ್ಲಿ ಒಂದು ಸಾಕಾದಂಥ ಮಾರ್ಗದರ್ಶಿಯಲ್ಲ; ತಾವು ಆರಿಸಿಕೊಂಡ ಸಂಗಾತಿಯನ್ನು ಅರಿತವರಾಗಿದ್ದರೆಂದು ಪ್ರಾಮಾಣಿಕವಾಗಿ ನಂಬಿದ್ದರೂ ಅನಂತರದಲ್ಲಿ ಅವರನ್ನು ಬಲ್ಲವರೇ ಆಗಿರಲಿಲ್ಲವೆಂಬದನ್ನು ಗ್ರಹಿಸಿಕೊಂಡಿರುತ್ತಾರೆ. (ಯಾಕೋಬನು ಸಹ ತಾನು ರಾಹೇಲಳನ್ನು ಮದುವೆಯಾಗುತ್ತಿದ್ದೇನೆಂದು ಯಥಾರ್ಥವಾಗಿಯೇ ನಂಬಿದ್ದನು ಆದರೆ ವಾಸ್ತವಿಕತೆಯಲ್ಲಿ ಆತನು ಆಕೆಯ ಸಹೋದರಿಯಾದ ಲೇಯಳನ್ನು ಮದುವೆಯಾಗಲಿದ್ದನು [ಆದಿ 29:21-30]!)

*ಏಕೆ* ಮನಸ್ಸಾಕ್ಷಿಯೊಂದೇ ಧರ್ಮದಲ್ಲಿ ಒಂದು ಸಾಕಾದಂಥ ಮಾರ್ಗದರ್ಶಿಯಾಗಿರುದಿಲ್ಲ? ಅದಕ್ಕೆ ಪ್ರಾಥಮಿಕ ಕಾರಣವೆಂದರೆ ಮನಸ್ಸಾಕ್ಷಿಯು ತನಗೆ ಲಭ್ಯವಿರುವ ಜ್ಞಾನಕ್ಕೆ ಮಾತ್ರವೇ ಸಿಮೀತವಾಗಿರುತ್ತದೆ.

ಪ್ರತಿಯೊಬ್ಬನು ಸಹ ಮನಸ್ಸಾಕ್ಷಿಯಿಂದ ಸಜ್ಜುಗೊಂಡವನಾಗಿಯೇ ಬರುತ್ತಾನೆ. ಕೆಲವು ಸಂಗತಿಗಳು ತಪ್ಪೆಂದೂ ಇನ್ನು ಕೆಲವು ತಪ್ಪಲ್ಲವೆಂದು ವ್ಯಕ್ತಿಗಳಿಗೆ ತಕ್ಷಣವೇ ತಿಳಿದು ಹೋಗುತ್ತದೆ. ಅಷ್ಟುಮಾತ್ರವಲ್ಲದೆ, ನಿರ್ದಿಷ್ಟವಾದ ಕೃತ್ಯಗಳು ಸರಿಯಾದವುಗಳು ಮತ್ತು ಇನ್ನು ಕೆಲವು ತಪ್ಪಾದವುಗಳೆಂದು ಬಹಳಷ್ಟು ಜನರು ಗುರುತಿಸುತ್ತಾರೆ. (ಉದಾಹರಣೆಗೆ, ಬಹುತೇಕರು ಹಿಟ್ಲರ್‌ನು ಯೆಹೂದ್ಯರನ್ನು ನಡಿಸಿಕೊಂಡ ವಿಧವನ್ನು ಖಂಡಿಸುವರು.)

ಅಂತಹ ಮೂಲಭೂತವಾದ ವಿಚಾರಗಳನ್ನು ಮೀರಿ, ಹೇಗೂ, ಒಬ್ಬನ ಮನಸ್ಸಾಕ್ಷಿಯು ಏನನ್ನು ಸರಿಯೆಂದು ಅಥವಾ ತಪ್ಪೆಂದು ಪರಿಗಣಿಸುತ್ತದೆಂಬುದು ಆತನಿಗೆ ಇದುವರೆಗೂ ಕಲಿಸಲ್ಪಟ್ಟಿರುವದರ ಮೇಲೆ ಅವಲಂಭಿತವಾಗಿರುತ್ತದೆ. ಅನೇಕರು ವಿಗ್ರಹಾರಾಧನೆ ಮಾಡುತ್ತಾರೆ, ಬಹುಪತ್ನಿತ್ವವನ್ನು ಆಚರಿಸುತ್ತಾರೆ, ಅಥವಾ ಗುಲಾಮರನ್ನಿಟ್ಟುಕೊಂಡಿ ರುತ್ತಾರೆ; ಆದರೆ ಅವರ ಮನಸ್ಸಾಕ್ಷಿಯು ಅವರನ್ನು ಖಂಡಿಸುವದಿಲ್ಲ ಯಾಕೆಂದರೆ ಕಾಲಕಾಲದಿಂದಲೂ ಅವರಿಗೆ ಹಾಗಿರುವಂತೆಯೇ ಕಲಿಸಲ್ಪಟ್ಟಿರುತ್ತದೆ. ವಿವಿಧ ಹಿನ್ನಲೆಯುಳ್ಳ ಸಂಸ್ಕೃತಿಗಳು ಒಟ್ಟಾಗಿ ಸಂಧಿಸುವಾಗ, ಮನಸ್ಸಾಕ್ಷಿಯ ಘರ್ಷಣೆಯು ಕಾಣಿಸಿಕೊಳ್ಳುತ್ತದೆ. ಬ್ರಿಟಿಷ್‌ರು ಭಾರತವನ್ನು ತಮ್ಮ ಸಾಮ್ರಾಜ್ಯದ ಅಂಗವಾಗಿ

ಆಕ್ರಮಿಸಿಕೊಂಡಾಗ, ಕೆಲವು ದೀರ್ಘಕಾಲದಿಂದ ಆಚರಿಸುತ್ತಾ ಬಂದಿರುವ ಆಚಾರಗಳನ್ನು ಅಳಿಸಿಹಾಕುವ ಅಗತ್ಯವಿದೆಯೆಂದು ಅವರು ಕಂಡರು. ಅದರಲ್ಲೊಂದೆಂದರೆ ಗಂಡನು ಸತ್ತಾಗ ಆತನ ಶವವನ್ನು ಸುಡುವ ಚಿತೆಯಲ್ಲಿ ವಿಧವೆಯಾದ ಹೆಂಡತಿಯು ಹಾರಿ ಸಾಯುತ್ತಿದ್ದಂಥ ಸತಿ ಪದ್ಧತಿ. ಆ ಆಚಾರವನ್ನು ನಿಷೇಧಿಸಿ ಬ್ರಿಟಿಷ್‌ರು ಒಂದು ಕಾನೂನು ಹೊರಡಿಸಿದರು. ಭಾರತದ ಒಬ್ಬ ಧಾರ್ಮಿಕ ನಾಯಕನು ಬ್ರಿಟಿಷ್ ಅಧಿಕಾರಿಯ ಬಳಿಗೆ ಬಂದು ಆಕ್ಷೇಪಣೆಯೆತ್ತಿದನು: “ವಿಧವೆಯನ್ನು ಸುಡಬೇಕು ಎಂದು ನಮ್ಮ ಮನಸ್ಸಾಕ್ಷಿಯು ಹೇಳುತ್ತದೆ.” ಅದಕ್ಕೆ ಆ ಅಧಿಕಾರಿಯು ಹೀಗೆ ಹೇಳಿದನು, “ನೀವು ಹಾಗೆ ಮಾಡಿದರೆ, ನಿಮ್ಮನ್ನು ನೇಣಿಗೆ ಹಾಕಬೇಕೆಂದು ನಮ್ಮ ಮನಸ್ಸಾಕ್ಷಿಯು ನಮಗೆ ಹೇಳುತ್ತದೆ!”

ಒಬ್ಬ ನ್ಯಾಯಾಧಿಪತಿ, ಸಾಕ್ಷಿ, ತೀರ್ಪುಗಾರ, ಮತ್ತು ತೀರ್ಪನ್ನು ಜಾರಿಗೆ ತರುವವನು ಇವರೆಲ್ಲರೂ ಒಟ್ಟಾಗಿ ಸೇರಿ ಮನಸ್ಸಾಕ್ಷಿಯಾಗಿರುವಂತೆ ಹೋಲಿಸಬಹುದು. ಹೇಗೂ, ಒಂದು ಕಾನೂನನ್ನು ರಚಿಸುವದು ನ್ಯಾಯಾಧಿಪತಿ, ಸಾಕ್ಷಿ, ತೀರ್ಪುಗಾರ, ಮತ್ತು ತೀರ್ಪನ್ನು ಜಾರಿಗೆ ತರುವವನ ಕೆಲಸವಾಗಿರುವದಿಲ್ಲ. ಬದಲಾಗಿ, ಅವರ ಉದ್ದೇಶವು ಕಾನೂನನ್ನು ಕಾರ್ಯರೂಪಕ್ಕೆ ತರುವದೇ ಆಗಿರುತ್ತದೆ. ಅದೇ ರೀತಿಯಲ್ಲಿಯೇ, ಮನಸ್ಸಾಕ್ಷಿಯು ಒಂದು ನ್ಯಾಯಾಂಗ ಮತ್ತು ಕಾರ್ಯಾಂಗ ಮಂಡಲಿಯಂತಿದೆ, ಹೊರತು ಶಾಸಕಾಂಗವಲ್ಲ. ಅದು ತನಗೆ ಲಭ್ಯವಿರುವ ಆತ್ಮೀಕ ಹಾಗೂ ನೈತಿಕ ಕಾನೂನುಗಳನ್ನು ಮಾತ್ರವೇ ವಿಧಿಸಬಲ್ಲದಷ್ಟೆ.

1 ಕೊರಿಂಥ 8ರಿಂದ 10 ಮತ್ತು ರೋಮಾ 14 ಮತ್ತು 15 ಅಧ್ಯಾಯಗಳಲ್ಲಿನ “ದೃಢವಿರುವ” ಹಾಗೂ “ದೃಢವಿಲ್ಲದ” ಮನಸ್ಸಾಕ್ಷಿಯ ಅರ್ಥನಿರೂಪಣೆಗಳನ್ನು ಗಮನಕ್ಕೆ ತೆಗೆದುಕೊಳ್ಳಿರಿ. “ದೃಢವಿರುವ” ಮನಸ್ಸಾಕ್ಷಿಯುಳ್ಳ ವ್ಯಕ್ತಿಯು (15:1) ವಿಗ್ರಹಗಳಿಗೆ ನೈವೇದ್ಯ ಮಾಡಿದ ಮಾಂಸ ತಿನ್ನುವ ಕುರಿತು ಸರಿಯಾದ *ತಿಳುವಳಿಕೆ* ಹೊಂದಿದ್ದವನಾಗಿದ್ದನು:

> ವಿಗ್ರಹಗಳಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನುವದರ ವಿಷಯದಲ್ಲಿ ನಾನು ಹೇಳುವದೇನಂದರೆ—ಜಗತ್ತಿನಲ್ಲಿ ವಿಗ್ರಹವು ಏನೂ ಅಲ್ಲವೆಂದೂ ಒಬ್ಬ ದೇವರಿದ್ದಾನೆಂದೂ *ಬಲ್ಲೆವು* (1 ಕೊರಿಂಥ 8:4; ಒತ್ತಿ ಹೇಳಿದ್ದು ನನ್ನದು).
>
> *ಜ್ಞಾನಿಯಾದ* ನೀನು ವಿಗ್ರಹಾಲಯದಲ್ಲಿ ಊಟಕ್ಕೆ ಕೂತಿರುವಾಗ ನಿರ್ಬಲವಾದ ಮನಸ್ಸುಳ್ಳ ಸಹೋದರನು ಕಂಡರೆ ಅವನೂ ವಿಗ್ರಹಕ್ಕೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನುವದಕ್ಕೆ ಧೈರ್ಯತಂದುಕೊಂಡಾನಲ್ಲವೇ. ಹೀಗೆ ಆ ಬಲಹೀನನು ನಿನ್ನ *ಜ್ಞಾನದಿಂದ* ನಾಶವಾಗುತ್ತಾನೆ. ಅವನು ನಿನ್ನ ಸಹೋದರನಲ್ಲವೇ. ಅವನಿಗಾಗಿಯೂ ಕ್ರಿಸ್ತನು ಪ್ರಾಣಕೊಟ್ಟನಲ್ಲವೇ (1 ಕೊರಿಂಥ 8:10, 11; ಒತ್ತಿ ಹೇಳಿದ್ದು ನನ್ನದು).

ಇನ್ನೊಂದು ಕಡೆಯಲ್ಲಿ, “ದೃಢವಿಲ್ಲದ” ಮನಸ್ಸುಳ್ಳವರಿಗೆ (15:1) ಜ್ಞಾನವಿರಲಿಲ್ಲ: “ಆದರೆ *ಆ ಜ್ಞಾನವು ಎಲ್ಲರಲ್ಲಿಯೂ ಇಲ್ಲ*. ಕೆಲವರು ಈ ವರೆಗೂ ವಿಗ್ರಹದ ಬಳಿಗೆ ಹೋಗುವ ರೂಢಿಯಲ್ಲಿದ್ದದರಿಂದ ತಾವು ತಿನ್ನುವ ಪದಾರ್ಥಗಳನ್ನು ವಿಗ್ರಹಕ್ಕೆ ನೈವೇದ್ಯ ಮಾಡಿದ್ದೆಂದು ತಿನ್ನುತ್ತಾರೆ; ಹೀಗೆ ಅವರ ಮನಸ್ಸು ಬಲಹೀನವಾಗಿದ್ದು ಕಲೆಯನ್ನು ಹೊಂದುತ್ತದೆ” (1 ಕೊರಿಂಥ 8:7; ಒತ್ತಿ ಹೇಳಿದ್ದು ನನ್ನದು).[86]

ಒಬ್ಬರು ಹೀಗೆ ಹೇಳಿದ್ದಾರೆ “ಮನಸ್ಸಾಕ್ಷಿಯು ಒಬ್ಬ ವ್ಯಕ್ತಿಗೆ ತಿಳಿದಿರುವ ಉನ್ನತವಾದ ಮಾನದಂಡಕ್ಕೆ ತನ್ನನ್ನು ಜೋಡಿಸಿಕೊಳ್ಳುತ್ತದೆ.” ಇಲ್ಲಿ ಕಾರ್ಯಾಕಾರಿ ಪದವು “ತಿಳಿದಿರುವ”

ಎಂಬ ಪದವೇ. ಪರಿಪಕ್ವವಾದ ಜ್ಞಾನವು (ಅಂದರೆ, ದೇವರ ವಾಕ್ಯದ ಜ್ಞಾನ) ಒಬ್ಬನನ್ನು ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ವ್ಯತ್ಯಾಸ ತಿಳಿಯುವಂತೆ ಶಕ್ತಗೊಳಿಸುತ್ತದೆ (ಇಬ್ರಿಯ 5:13, 14).

ಆದುದರಿಂದ, ಅತ್ಯಂತ ಪ್ರಾಮುಖ್ಯವಾದ ಪ್ರಶ್ನೆಯೆಂದರೆ "ನನ್ನ ಮನಸ್ಸಾಕ್ಷಿಯು ಯಾವದನ್ನು ಸರಿಯೆಂದು ಹೇಳುತ್ತದೆ?" ಎಂಬುದಲ್ಲ, ಆದರೆ "*ದೇವರ ವಾಕ್ಯವು* ಯಾವದನ್ನು ಸರಿಯೆಂದು ಹೇಳುತ್ತದೆ?" ಎಂಬುದೇ. ನಾವು ಹೀಗೆ ಓದುತ್ತೇವೆ, "ತನ್ನನ್ನು ತಾನೇ ಹೊಗಳಿಕೊಳ್ಳುವವನು ಯೋಗ್ಯನಲ್ಲ; ಕರ್ತನು ಯಾರನ್ನು ಹೊಗಳುತ್ತಾನೋ ಅವನೇ ಯೋಗ್ಯನು" (2 ಕೊರಿಂಥ 10:18).

"ಒಂದು ಮನಸ್ಸಾಕ್ಷಿಯು ಎಷ್ಟರ ಮಟ್ಟಿಗೆ ಸುರಕ್ಷಿತವಾಗಿ ಮಾರ್ಗದರ್ಶಿಸಲ್ಪಟ್ಟಿರುತ್ತದೋ ಅಷ್ಟರ ಮಟ್ಟಿಗಷ್ಟೇ ಅದು ಸುರಕ್ಷಿತ ಮಾರ್ಗದರ್ಶಿ ಯಾಗಿರುತ್ತದೆ"—ಅಂದರೆ, "ದೇವರ ವಾಕ್ಯದ ಉಪದೇಶಗಳಿಂದ ಸುರಕ್ಷಿತವಾಗಿ ಮಾರ್ಗದರ್ಶಿಸಲ್ಪಡುವಷ್ಟರ ಮಟ್ಟಿಗೆ" ಮಾತ್ರವೇ ಎಂದು ಹೇಳಿರುವದು ನಿಜಕ್ಕೂ ವಿವೇಕದ ಮಾತೇ ಆಗಿದೆ. ಜನರು ಶಿಸು "ದೀಕ್ಷಾಸ್ನಾನ"ದ ಆಚರಣೆ, ವಾರದ ಮೊದಲ ದಿನವಲ್ಲದೆ ಬೇರೆ ದಿನಗಳಲ್ಲಿ ಕರ್ತನ ಭೋಜನದಲ್ಲಿ ಪಾಲುಗಾರರಾಗುವದನ್ನು ನೋಡುವಾಗ, ಅಥವಾ ಸಂಗೀತ ವಾದ್ಯಗಳ—ಆರಾಧನೆಯಲ್ಲಿ—ಬಳಕೆಯನ್ನು ನೋಡುವಾಗ, ಕೇಳಿಕೊಳ್ಳಬೇಕಾದ ಪ್ರಶ್ನೆಯು "ಜನರು ಮನಸ್ಸಾಕ್ಷಿಯಿಂದಿದ್ದಾರೋ?" ಎಂಬುದಲ್ಲ. ಬದಲಾಗಿ, ಪ್ರಶ್ನೆಯು "ಈ ವಿಷಯಗಳ ಕುರಿತಾಗಿ *ಬೈಬಲ್* ಏನು ಕಲಿಸುತ್ತದೆ?" ಎಂಬುದೇ ಆಗಿರತಕ್ಕದ್ದು.

ಹೀಗೆ ಮನಸ್ಸಾಕ್ಷಿಯು ಧಾರ್ಮಿಕವಾಗಿ ಒಂದು ಸುರಕ್ಷಿತವಾದ ಮಾರ್ಗದರ್ಶಿಯಲ್ಲ ಯಾಕೆಂದರೆ ಅದು ತನಗೆ ಲಭ್ಯವಿರುವ ಜ್ಞಾನಕ್ಕಷ್ಟೇ ಸಿಮೀತವಾಗಿರುತ್ತದೆ. ನಮ್ಮನ್ನು ಸರಿಯಾದ ದಾರಿಯಲ್ಲಿ ನಡಿಸುವಂತೆ ನಾವು ಮನಸ್ಸಾಕ್ಷಿಯ ಮೇಲೆ ಅವಲಂಭಿತರಾಗುವದಕ್ಕೆ ಸಾಧ್ಯವಿಲ್ಲ ಎಂಬುದಕ್ಕೆ ಎರಡನೆಯ ಕಾರಣವೊಂದು ಸಹ ಇರುತ್ತದೆ: ಕೆಲವರು ತಮ್ಮ ಮನಸ್ಸಾಕ್ಷಿಯನ್ನು ಎಷ್ಟೊಂದು ದುರುಪಯೋಗ ಪಡಿಸಿಕೊಂಡಿದ್ದಾರೆಂದರೆ ಅವರು ಇನ್ನು ಯಾವುದರಲ್ಲಿಯೂ ಸುರಕ್ಷಿತವಾಗಿ ಮಾರ್ಗದರ್ಶಿಸಲ್ಪಡದ ಸ್ಥಿತಿಯಲ್ಲಿರುತ್ತಾರೆ. ಮನಸ್ಸಾಕ್ಷಿಯು ದೃಢವಾಗಿ ಉಳಿಯಬೇಕೆಂದರೆ, ಅದು ಅಭ್ಯಾಸಮಾಡಿ ಕೊಳ್ಳಲ್ಪಡತಕ್ಕದ್ದು (ಅಪೊಸ್ತಲರ ಕೃತ್ಯಗಳು 24:16; KJV).

ಜನರು ಮನಸ್ಸಾಕ್ಷಿಯನ್ನು ಅಸಡ್ಡೆ ಮಾಡುವಾಗ, ಅದು ಮಲಿನಗೊಳ್ಳುತ್ತದೆ (ತೀತನಿಗೆ 1:15) ಮತ್ತು ಬರೆ ಹಾಕಲ್ಪಡುತ್ತದೆ (1 ತಿಮೊಥೆ 4:2). ಮಲಿನವಾದ, ಬರೆ ಹಾಕಲ್ಪಟ್ಟ ಮನಸ್ಸಾಕ್ಷಿಯನ್ನು ತನಗಿರುವ ಉದ್ದೇಶವನ್ನು ನೆರವೇರಿಸಲು ಸಾಧ್ಯವಿಲ್ಲದಷ್ಟರ ಮಟ್ಟಿಗೆ ಹೊಲಸಾಗಿರುವ ಒಂದು ಕಿಟಕಿಗೆ ಹೋಲಿಸಬಹುದು. ಯೇಸು ಮತ್ತಾಯ 6ರಲ್ಲಿ ಇಂಥದ್ದೇ ದೃಷ್ಟಾಂತವನ್ನು ಬಳಸಿದನು:

> ಕಣ್ಣು ದೇಹಕ್ಕೆ ದೀಪವಾಗಿದೆ; ಹೀಗಿರುವಲ್ಲಿ ನಿನ್ನ ಕಣ್ಣು ನೆಟ್ಟಗಿದ್ದರೆ ನಿನ್ನ ದೇಹವೆಲ್ಲಾ ಬೆಳಕಾಗಿರುವದು. ನಿನ್ನ ಕಣ್ಣು ಕೆಟ್ಟದ್ದಾಗಿದ್ದರೆ ನಿನ್ನ ದೇಹವೆಲ್ಲಾ ಕತ್ತಲಾಗಿರುವದು. ಹಾಗಾದರೆ ನಿನ್ನೊಳಗಿರುವ ಬೆಳಕೇ ಕತ್ತಲಾದರೆ ಆ ಕತ್ತಲು ಎಷ್ಟೆನ್ನಬೇಕು! (ಮತ್ತಾಯ 6:22, 23; NCV).

ಯೇಸು ಆತ್ಮೀಕ ವಿಚಾರಗಳನ್ನು ವಿವೇಚಿಸುವ ಸಾಮರ್ಥ್ಯಕ್ಕೆ “ಕಣ್ಣು” ಎಂದು ಕರೆಯುತ್ತಾನೆ. ದೈಹಿಕ ಕಣ್ಣು ಕುರುಡಾಗಿದ್ದರೆ, ದೇಹವು ಕತ್ತಲೆಯಿಂದ ತುಂಬಿರುತ್ತದೆ. ಅದೇ ರೀತಿಯಲ್ಲಿಯೇ, ಒಳ್ಳೇದು ಮತ್ತು ಕೆಟ್ಟದ್ದನ್ನು ವಿವೇಚಿಸುವ ಸಾಮರ್ಥ್ಯವು ನಾಶಗೊಳಿಸಲ್ಪಟ್ಟರೆ, ಒಬ್ಬನು ಆತ್ಮೀಕವಾಗಿ ಕತ್ತಲೆಯಲ್ಲಿ ಮುಳುಗಿ ಹೋದಂತೆಯೇ ಆಗಿರುತ್ತದೆ.

ತಪ್ಪು ಮಾಹಿತಿ ಹಾಗೂ ದುರುಪಯೋಗದ ಮೂಲಕವಾಗಿ, ಮನಸ್ಸಾಕ್ಷಿಯ ತೀರ್ಪುಮಾಡುವ ವ್ಯವಸ್ಥೆಯು ತಲೆ ಕೆಳಗಾಗಬಲ್ಲದು. ಯೆಶಾಯನು “ಕೆಟ್ಟದ್ದನ್ನು ಒಳ್ಳೇದೆಂದೂ ಒಳ್ಳೇದನ್ನು ಕೆಟ್ಟದ್ದೆಂದೂ ಬೋಧಿಸಿ ಕತ್ತಲನ್ನು ಬೆಳಕೆಂದೂ ಬೆಳಕನ್ನು ಕತ್ತಲೆಂದೂ ಸಾಧಿಸಿ . . . ಸ್ಥಾಪಿಸುವವರ” ಕುರಿತಾಗಿ ಮಾತಾಡುತ್ತಾನೆ (ಯೆಶಾಯ 5:20). ಪೌಲನು “ನಾಚಿಕೆ ಕೆಲಸಗಳಲ್ಲಿಯೇ ಅವರ ಗೌರವವು” ಎಂಬವರ ಬಗ್ಗೆ ಬರೆದನು (ಫಿಲಿಪ್ಪಿ 3:19).

ಮನಸ್ಸಾಕ್ಷಿಯ ದುರುಪಯೋಗದ ಕುರಿತ ಈ ಉದಾಹರಣೆಗಳು “ನಿಮ್ಮ ಮಾರ್ಗದರ್ಶಿಯಾಗಿರುವಂತೆ ನಿಮ್ಮ ಮನಸಾಕ್ಷಿಗೆ ನೀವು ಅನುಮತಿಸತಕ್ಕದ್ದೋ?” ಎಂಬ ಪ್ರಶ್ನೆಗೆ ನನ್ನ ಎರಡನೆಯ ಉತ್ತರದ ಅಗತ್ಯತೆಯನ್ನು ದೃಷ್ಟಾಂತಪಡಿಸುತ್ತವೆ:

*“ಹೌದು”: ನಾವು ಮನಸ್ಸಾಕ್ಷಿಯು ಹೇಳುವವುಗಳನ್ನು ನಿರ್ಲಕ್ಷಿಸಬಾರದು, ವಿಶೇಷವಾಗಿ ವಿವೇಚಿಸುವಿಕೆಯ ವಿಚಾರಗಳಲ್ಲಿ ನಿರ್ಲಕ್ಷಿಸಬಾರದು.* ಮನಸ್ಸಾಕ್ಷಿಯೊಂದೇ ಧರ್ಮದ ವಿಷಯದಲ್ಲಿ ಸುರಕ್ಷಿಯವಾದ ಮಾರ್ಗದರ್ಶಿಯಲ್ಲ ಎಂದು ಗಮನಿಸಿಯಾದ ಮೇಲೆ, ಮನಸ್ಸಾಕ್ಷಿಯು ಪ್ರಾಮುಖ್ಯವಲ್ಲ ಎಂಬ ನಿರ್ಣಯಕ್ಕೆ ನಾವು ಬರಬಹುದು; ಆದರೆ ಯಾವದೂ ಸತ್ಯಕ್ಕೆ ದೂರವಾದದ್ದಲ್ಲ. ರೋಮಾಪುರದವರಿಗೆ ಪತ್ರಿಕೆಯಲ್ಲಿ, ಪೌಲನು ನಮ್ಮ ಮನಸ್ಸಾಕ್ಷಿಗೆ ವಿರುದ್ಧವಾಗಿ ನಡೆಯುವಾಗ ನಾವು ಪಾಪ ಮಾಡಿದವರಾಗುತ್ತೇವೆಂಬುದನ್ನು ಸ್ಪಷ್ಟವಾಗಿ ತಿಳಿಸಿದನು:

> ಯಾವ ಪದಾರ್ಥವೂ ಅಶುದ್ಧವಲ್ಲವೆಂದು ಬಲ್ಲೆನು, ಮತ್ತು ಕರ್ತನಾದ ಯೇಸುವಿಲ್ಲಿದ್ದುಕೊಂಡು ದೃಢವಾಗಿ ನಂಬಿದ್ದೇನೆ; ಆದರೆ ಯಾವದಾದರೂ ಒಂದು ಪದಾರ್ಥವನ್ನು ಅಶುದ್ಧವೆಂದು ಒಬ್ಬನು ಭಾವಿಸಿದರೆ ಅವನಿಗೆ ಅದು ಅಶುದ್ಧ (14:14).
> ಸಂಶಯಪಟ್ಟು ಉಣ್ಣುವವನು ಸಂಶಯದಿಂದ ಉಣ್ಣುವ ಕಾರಣ ದೋಷಿಯಾಗಿದ್ದಾನೆ. ಯಾವದಕ್ಕೆ ನಂಬಿಕೆ ಆಧಾರವಿಲ್ಲವೋ ಅದು ಪಾಪ (14:23).

“ನಂಬಿಕೆ” ಎಂಬ ಪದವು ಇಲ್ಲಿ ದೇವರ ವಾಕ್ಯದಿಂದ ಬರುವಂಥ ನಂಬಿಕೆಯನ್ನು ಸೂಚಿಸುವದಿಲ್ಲ (10:17), ಆದರೆ ಬದಲಾಗಿ ಒಬ್ಬನು ಯಾವುದನ್ನು ಸರಿ ಅಥವಾ ತಪ್ಪು ಎಂದು *ವಿಶ್ವಾಸಿಸುತ್ತಾನೋ* ಅದನ್ನು, ಒಬ್ಬನ ಮೌಲ್ಯ ವ್ಯವಸ್ಥೆಯನ್ನು ಸೂಚಿಸುತ್ತದೆ. ಒಬ್ಬ ವ್ಯಕ್ತಿಯು ತಾನು ಯಾವದನ್ನು ಸರಿ ಅಥವಾ ತಪ್ಪು ಎಂದು ನಂಬುತ್ತಾನೋ ಅದಕ್ಕೆ ವಿರುದ್ಧವಾಗಿ ನಡೆಯುವದಾದರೆ (ಅಂದರೆ, ತನ್ನ ಮನಸ್ಸಾಕ್ಷಿಯನ್ನು ಉಲ್ಲಂಘಿಸುವದಾದರೆ), ಆ ವ್ಯಕ್ತಿಯು ಪಾಪ ಮಾಡಿದವನಾಗುತ್ತಾನೆ ಮತ್ತು ದೋಷಿಯಾಗಿದ್ದಾನೆ ಎಂದು ಪೌಲನು ಹೇಳುತ್ತಾನೆ.[87]

ಮನಸ್ಸಾಕ್ಷಿಯನ್ನು ಉಲ್ಲಂಘಿಸುವದು ಏಕೆ ಪಾಪವಾಗಿದೆ? ಏಕೆಂದರೆ ಒಬ್ಬನು ತನ್ನ

ಮನಸ್ಸಾಕ್ಷಿಗೆ ವಿರುದ್ಧವಾಗಿ ನಡೆಯುವ ಪ್ರತಿ ಸಾರಿಯೂ, ಆತನು ತನ್ನ ಮನಸ್ಸಾಕ್ಷಿಯ ಪ್ರಭಾವವನ್ನು ತಗ್ಗಿಸುತ್ತಾ ಹೋಗುತ್ತಾನೆ. ಆತನು ದೇವರಿಂದ ಅನುಗ್ರಹಿಸಲ್ಪಟ್ಟಿರುವ ಸುರಕ್ಷತಾ ಕವಚವನ್ನು ನಾಶಗೊಳಿಸುವವನಾಗಿರುತ್ತಾನೆ. ಮನಸ್ಸಾಕ್ಷಿಯನ್ನು ನರ-ವ್ಯೂಹಕ್ಕೆ ಹೋಲಿಸಬಹುದು. ನಾನು ಬೆಂಕಿಯಿಂದ ದೂರವಿರು ಎಂದು ಹೇಳುವ ನರ-ವ್ಯೂಹದ ಎಚ್ಚರಿಕೆಗಳನ್ನು ಅಸಡ್ಡೆ ಮಾಡಿದರೆ, ಶೀಘ್ರದಲ್ಲಿಯೇ ನನ್ನ ನರ-ವ್ಯೂಹವು ನಾಶಗೊಳಿಸಲ್ಪಡುವದು (ಮತ್ತು ಅದರೊಂದಿಗೆ ನಾನೂ ನಾಶಗೊಳ್ಳುವೆನು!).

ಒಬ್ಬ ಚಿಕ್ಕ ಹುಡುಗಿಯು ಮನಸ್ಸಾಕ್ಷಿಯನ್ನು ತನ್ನೊಳಗೆ ಸುತ್ತುತ್ತಿರುವ ಚೂಪಾದ ತುದಿಗಳುಳ್ಳ ಚಕ್ರವೊಂದಕ್ಕೆ ಹೋಲಿಸಿದಳು. "ನಾವು ಮಾಡಬಾರದ್ದನ್ನು ಮಾಡಿದಾಗ, ಚೂಪಾದ ತುದಿಗಳು ನೋವುಂಟು ಮಾಡುತ್ತವೆ!" ಎಂದು ಆಕೆ ಹೇಳಿದಳು. ನಂತರ ಆಕೆಯು ಮುಂದುವರೆಸಿ ಹೇಳಿದ್ದೇನೆಂದರೆ, "ಆದರೆ ನಾವು ಮಾಡಬಾರದ್ದನ್ನೇ ಮಾಡುತ್ತಲಿದ್ದರೆ, ಆ ಚೂಪಾದ ತುದಿಗಳು ಮೊಂಡವಾಗಿ ಹೋಗುತ್ತವಾದ್ದರಿಂದ ಅವುಗಳು ಇನ್ನು ಮೇಲೆ ಅಷ್ಟೊಂದು ನೋವುಂಟು ಮಾಡುವದಿಲ್ಲ." ನಾವು ಅದಕ್ಕೆ ಇದನ್ನು ಸೇರ್ಪಡೆಗೊಳಿಸಬಹುದು: "ಮತ್ತು ನಾವು ಮಾಡಬಾರದ್ದನ್ನು ಮಾಡುವದರಲ್ಲಿಯೇ ಮುಂದುವರೆದರೆ, ಕ್ರಮೇಣದಲ್ಲಿ ಚೂಪಾದ ತುದಿಗಳು ಸಂಪೂರ್ಣವಾಗಿ ಸವೆದು ಹೋಗುವವು ಮತ್ತು ಅದು ನಮಗೆ ಯಾವದೇ ನೋವನ್ನು ಉಂಟು ಮಾಡುವದೇ ಇಲ್ಲ."

ಒಮ್ಮೆ ನಾನು ಮನಸ್ಸಾಕ್ಷಿಯನ್ನು ಅಸಡ್ಡೆ ಮಾಡುವದರ ಅಪಾಯದ ಕುರಿತಾಗಿ ಒಂದು ಕಥೆಯನ್ನು ಓದಿದೆನು. Scotlandನ ಕಡಲ ಕಿನಾರೆಯಲ್ಲಿ ಒಂದು ಮೋಸಕರವಾದ ಸ್ಥಳದಲ್ಲಿ ಅಪಾಯದ ಎಚ್ಚರಿಕೆಗಾಗಿ ಒಂದು ಘಂಟೆಯನ್ನು ಕಟ್ಟಿದ ತೇಲುವೆಯನ್ನು ನೇಡಲಾಗಿತ್ತು. ಒಬ್ಬ ನೌಕಾಧಿಪತಿಯು ಅಲ್ಲಿನ ನಿವಾಸಿಗಳ ವಿರುದ್ಧ ಬಹಳವಾಗಿ ಕೋಪಗೊಂಡಿದ್ದನು. ಆತನು ಕುಡಿದ ಅಮಲಿನಲ್ಲಿ, ತೇಲುವೆಗೆ ಕಟ್ಟಿದ್ದ ಘಂಟೆಯನ್ನು ಕತ್ತರಿಸಿ ಹಾಕಿ ಬಿಟ್ಟು ಅವರ ಮೇಲೆ ಸೇಡು ತೀರಿಸಿಕೊಂಡನು. ಅನಂತರದಲ್ಲಿ, ಆ ನೌಕಾಧಿಪತಿಯ ಹಡಗು ಅದೇ ಕಿನಾರೆಯಲ್ಲಿ ಬಿರುಗಾಳಿಗೆ ಸಿಲುಕಿಕೊಂಡಿತ್ತು. ಆತನು ತನ್ನನ್ನು ಸುರಕ್ಷಿತ ಸ್ಥಳಕ್ಕೆ ನಡಿಸಬಹುದಾದ ಘಂಟೆಯ ಶಬ್ದವನ್ನು ಕೇಳಿಸಿಕೊಳ್ಳಲು ಪ್ರಯತ್ನಿಸಿದನು, ಆದರೆ ಆತನು ಎಷ್ಟೇ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಆತನು ಹಾಗೂ ಹಡಗಿನಲ್ಲಿದ್ದವರೆಲ್ಲರೂ ಆತನ ಮೂರ್ಖತನದ ಕಾರಣದಿಂದಾಗಿ ನಾಶ ಹೊಂದಿದರು. ಕಥೆಯು ಈ ನೀತಿಪಾಠದೊಂದಿಗೆ ಮುಕ್ತಾಯಗೊಂಡಿತ್ತು: ಒಬ್ಬ ಮನುಷ್ಯನು ತನ್ನ ಮನಸ್ಸಾಕ್ಷಿಯ ದನಿಗುಂದಿಸುವದಾದರೆ, ಆತನಿಗೆ ಅದರ ಅಗತ್ಯ ಬೀಳುವ ವೇಳೆ ಅದು ಆತನಿಗೆ ಲಭ್ಯವಾಗುವದಿಲ್ಲ.

ಪೌಲನು 1 ತಿಮೊಥೆ 1:19ರಲ್ಲಿ ಒಂದು ಬೇರೆಯಾದ ನಾವಿಕ ಸಂಬಂಧಿತ ದೃಷ್ಟಾಂತವನ್ನು ಬಳಸಿದನು: "ನಂಬಿಕೆಯನ್ನೂ ಒಳ್ಳೇ ಮನಸ್ಸಾಕ್ಷಿಯನ್ನೂ ಬಿಡದೆ ಹಿಡಿದುಕೋ. ಕೆಲವರು ಮನಸ್ಸಿನ ಒಳ್ಳೇ ಸಾಕ್ಷಿಯನ್ನು ತಳ್ಳಿಬಿಟ್ಟು ಕ್ರಿಸ್ತನಂಬಿಕೆಯ ವಿಷಯದಲ್ಲಿ ಹಡಗು ಒಡೆದು ನಷ್ಟ ಪಟ್ಟವರಂತೆ ಇದ್ದಾರೆ." ಒಂದು "ತಳ್ಳಿಬಿಟ್ಟ" ಮನಸ್ಸಾಕ್ಷಿಯನ್ನು ಇನ್ನು ಮೇಲೆ ನಿಖರವಾಗಿಲ್ಲದ ಮತ್ತು, ಆ ಕಾರಣದಿಂದ ಹಡಗು ಒಡೆಯುವಂತೆ ಮಾಡುವ ಹಡಗಿನ ದಿಕ್ಸೂಚಿಗೆ ಹೋಲಿಸಬಹುದಾಗಿದೆ.

ಸತತವಾಗಿ ಅಸಡ್ಡೆಗೊಳಗಾದ ಮನಸ್ಸಾಕ್ಷಿಗೆ ಏನಾಗುತ್ತದೆಂಬದನ್ನು

ಅರ್ಥಮಾಡಿಕೊಳ್ಳುವಂತೆ ನಮಗೆ ಸಹಾಯ ಮಾಡಲು ಬೈಬಲ್ ಸ್ಫುಟವಾದ ಪದಗಳನ್ನು ಬಳಸುತ್ತದೆ. ಒಂದು ಅಸಡ್ಡೆಗೊಳಗಾದ ಮನಸ್ಸಾಕ್ಷಿಯು ಬಹವಾಗಿ ಬರೆ ಹಾಕಲ್ಪಟ್ಟಿರುವದರಿಂದ ಇನ್ನು ಮೇಲೆ ಕ್ರಿಯೆ ಮಾಡದಂತಹ ನರಗಳ ತುದಿಗಳ ರೀತಿಯಲ್ಲಿರುತ್ತದೆ (1 ತಿಮೊಥೆ 4:2). ನನ್ನ ಪ್ರಕಾರವಾಗಿ ಅತ್ಯಂತ ಗಮನ ಸೆಳೆಯುವ ಹೋಲಿಕೆಯೆಂದರೆ, ಮತ್ತಾಯ 6:22, 23ರಲ್ಲಿ ಯೇಸು ಬಳಸಿದ ದೃಷ್ಟಾಂತವಾಗಿದೆ, ಆತನು ಕಣ್ಣುಗಳು ಕತ್ತಲಾಗುವ ಕುರಿತಾಗಿ ಮಾತಾಡಿದನು. ನಾವು ಪಾಪ ಮಾಡುವ ಪ್ರತಿ ಸಾರಿಯೂ, ನಮ್ಮ ದೃಷ್ಟಿಯಲ್ಲಿ ಸ್ವಲ್ಪನ್ನು ಕಳೆದುಕೊಳ್ಳುವಂತಿದ್ದರೆ ಹೇಗಿರುತ್ತಿತ್ತು? ಅದು ಪಾಪ ಮಾಡದಂತೆ ನಮ್ಮಲ್ಲಿ ಬಹುತೇಕರನ್ನು ಪ್ರೋತ್ಸಾಹಿಸುತ್ತದಲ್ಲವೇ? ನಾವು ನಮ್ಮ ಮನಸ್ಸಾಕ್ಷಿಯನ್ನು ಉಲ್ಲಂಘಿಸುವಾಗ ನಮ್ಮ ದೈಹಿಕ ಕಣ್ಣಿನ ದೃಷ್ಟಿಯನ್ನು ಕಳೆದುಕೊಳ್ಳದಿದ್ದಾಗ್ಯೂ, ನಾವು ನಮ್ಮ ಆತ್ಮೀಕ ದೃಷ್ಟಿಯನ್ನಂತೂ ಕಳೆದುಕೊಳ್ಳುತ್ತೇವೆಂಬುದನ್ನು ಯೇಸು ನಮಗೆ ತಿಳಿದುಕೊಳ್ಳುವಂತೆ ಮಾಡುತ್ತಾನೆ. ಇದು ಪಾಪ ಮಾಡದಂತಿರುವದಕ್ಕೆ ನಮಗೆ ಇನ್ನಷ್ಟು ಬಲವಾದ ತಡೆಯಾಗಿರತಕ್ಕದ್ದು.

ತಮ್ಮ ಮನಸ್ಸಾಕ್ಷಿಯನ್ನು ಮೀರಿ ನಡೆಯುವ ಮೂಲಕ ಅದರ ದನಿಯನ್ನು ಅಡಗಿಸಿದ ಪುರುಷರು ಹಾಗೂ ಸ್ತ್ರೀಯರ ಅಸಂಖ್ಯಾತ ದೃಷ್ಟಾಂತಗಳನ್ನು ಬೈಬಲ್ ಒಳಗೊಂಡಿರುತ್ತದೆ. ನಾನು ಸೌಲನ ಕುರಿತು ಯೋಚಿಸುತ್ತೇನೆ, ಆತನು ಬಹಳಷ್ಟು ಭರವಸೆ ಕೊಡುವವನಾಗಿ ಆಳ್ವಿಕೆಯನ್ನು ಆರಂಭಿಸಿದನು ಆದರೆ ಬಳಿಕ ಅಧಿಕಾರದ ವ್ಯಾಮೋಹಗಳಿಗೆ ತುತ್ತಾದನು. ಅಂತ್ಯದಲ್ಲಿ, ಆತನ ಮನಸ್ಸು ಹಾಗೂ ಹೃದಯಗಳು ಎಷ್ಟೊಂದು ಕಠಿಣಗೊಂಡಿದ್ದವೆಂದರೆ ಕರ್ತನು ಅವನೊಳಗಿಂದ ತನ್ನ ಆತ್ಮನನ್ನು ತೆಗೆದು ಬಿಟ್ಟನು (1 ಸಮು 16:14).

ಅತ್ಯಂತ ಆಕರ್ಷಕವಾದ ಉದಾಹರಣೆಯೆಂದರೆ ಸೌಲನ ಉತ್ತರಾಧಿಕಾರಿಯಾದ ದಾವೀದನು. ಸಾಮಾನ್ಯವಾಗಿ ಮೃದು ಮನಸ್ಸಾಕ್ಷಿಯುಳ್ಳ ಮನುಷ್ಯನಾಗಿದ್ದ ಆತನು ಪಾಪದ ಮೇಲೆ ಪಾಪವನ್ನು ಮಾಡುತ್ತಲೇ ಹೋದನು, ಅನೇಕ ವಾರಗಳ ವರೆಗೆ ತನ್ನ ಮನಸ್ಸಾಕ್ಷಿಯ ಉಸಿರುಗಟ್ಟಿಸಿ ಇಡುವದಕ್ಕೆ ಯಶಸ್ವಿಯಾಗಿದ್ದನು. ಆತನ ಮನಸ್ಸಾಕ್ಷಿಯನ್ನು ಎಬ್ಬಿಸುವದಕ್ಕೆ ಅವನಿಗೆ ಒಬ್ಬ ಮಿತ್ರನು ಇಲ್ಲವೆಂದಾಗಿದ್ದರೆ (2 ಸಮು 12:1-14), ಆತನು ಶಾಶ್ವತವಾಗಿ ಸರ್ವನಾಶಗೊಂಡಿರುತ್ತಿದ್ದನು.

ಒಬ್ಬನ ಮನಸ್ಸಾಕ್ಷಿಯು ತಪ್ಪು ಮಾಹಿತಿಯಿಂದ ತುಂಬಿಸಲ್ಪಟ್ಟಿದ್ದರೆ, ಅದಕ್ಕೆ ಪುನಃ ಶಿಕ್ಷಣಗೊಳಿಸುವ ಅಗತ್ಯವಿರುತ್ತದೆ. ಈ ಮಧ್ಯದಲ್ಲಿ—*ಅದು* ಪುನಃ ಶಿಕ್ಷಿತಗೊಳ್ಳುವ ತನಕ—ಒಬ್ಬನು ಅದು ಹೇಳುವದನ್ನು ನಿರ್ಲಕ್ಷಿಸಕೂಡದು. ದೃಷ್ಟಾಂತದ ರೀತಿಯಲ್ಲಿ, ನಾವು ಹೀಗೆ ಊಹಿಸಿಕೊಳ್ಳೋಣ ಏನೆಂದರೆ ಒಬ್ಬನಿಗೆ ಜೀವಿತವೆಲ್ಲಾ ಕೆಲವೊಂದು ಪರಿಸ್ಥಿತಿಗಳಲ್ಲಿ ಆತನು ಮಾಂಸ ಸೇವನೆಯನ್ನು ಮಾಡಬಾರದೆಂದು ದೇವರು ಬಯಸುತ್ತಾನೆಂದು ಕಲಿಸಲ್ಪಟ್ಟಿರುತ್ತದೆ. ಆದರೆ ಒಬ್ಬನು ಮಾಂಸವನ್ನು ತಿನ್ನುವದಕ್ಕೆ ಇಚ್ಛೆಸಿದರೆ ಅದರಲ್ಲಿ ಯಾವದೇ ತಪ್ಪಿಲ್ಲವೆಂದು ಬೈಬಲ್ ಕಲಿಸುತ್ತದೆ (1 ತಿಮೊಥೆ 4:1-5). ಹೇಗೂ, ಆ ವ್ಯಕ್ತಿಯು ಬೈಬಲಿನ ಸತ್ಯವನ್ನು ಕುರಿತು ಕಲಿಯುವ ತನಕ, ಆತನು ಇದುವರೆಗೂ ಮಾಡುತ್ತಾ ಬಂದಂತೆಯೇ ಮಾಂಸ ಸೇವನೆಯನ್ನು ತ್ಯಜಿಸುವದನ್ನು ಮುಂದುವರೆಸಬೇಕು. ಈ ಮೂಲತತ್ವವನ್ನು ಒಂದು ಸೇತುವೆಯನ್ನು ದಾಟುವದಕ್ಕೆ ಸುರಕ್ಷಿತವಲ್ಲವೆಂದು ನಾವು ಭಾವಿಸಿರುತ್ತೇವೋ ಆ ಸೇತುವೆಯನ್ನು ದಾಟುವದಕ್ಕೆ ಹೋಲಿಸಬಹುದು. ಎಲ್ಲಿಯ ವರೆಗೆ

ನಮ್ಮ ನಂಬಿಕೆಯು ಸೇತುವೆ ಅಸುರಕ್ಷಿತವೆಂದು ಇರುತ್ತದೋ ಅಲ್ಲಿಯ ವರೆಗೆ ಅದನ್ನು ದಾಟದಿರುವದೇ ಒಳಿತು. ಅಂತಿಮವಾಗಿ ಸೇತುವೆಯು ನಮ್ಮ ಭಾರವನ್ನು ತಾಳಿಕೊಳ್ಳಬಲ್ಲದೆಂದು ನಮಗೆ ಮನದಟ್ಟಾದಾಗ, ನಾವು ಅದನ್ನು ದಾಟಿಕೊಂಡು ಹೋಗಬಹುದು—ಆದರೆ ಅದಕ್ಕಿಂತ ಮುಂಚೆ ಅಲ್ಲ.

ಮನಸ್ಸಾಕ್ಷಿಗೆ ಪುನಃ ಶಿಕ್ಷಣಗೊಳಿಸುವ ಪ್ರಕ್ರಿಯೆಯು ಒಂದು ನಿರಂತರವಾದ ಕೆಲಸವಾಗಿರುತ್ತದೆ. ಅದನ್ನು ನಾವು ಹೇಗೆ ಮಾಡುತ್ತೇವೆ? ಮೊದಲನೆಯದಾಗಿ, ನಾವು ಶ್ರದ್ಧೆಯಿಂದಲೂ ನಿಯತಕ್ರಮವಾಗಿಯೂ ಬೈಬಲ್‌.ನ್ನು ಅಧ್ಯಯನ ಮಾಡಬೇಕು, ನಮ್ಮ ಜೀವಿತಗಳಿಗಾಗಿ ಇರುವ ದೇವರ ಚಿತ್ತದ ಕುರಿತ ಉತ್ತಮ ತಿಳುವಳಿಕೆಯನ್ನು ಪಡೆಯಲು ಎಡೆಬಿಡದೆ ಪ್ರಯತ್ನಿಸುತ್ತಿರಬೇಕು. ಎರಡನೆಯದಾಗಿ, ನಾವು ದೇವರ ವಾಕ್ಯದ ಬೆಳಕಿನಲ್ಲಿ ನಮ್ಮ ಮನವರಿಕೆಗಳನ್ನು ಪರೀಕ್ಷಿಸಿಕೊಳ್ಳಲು ಅಂಜದಿರುವಂಹತ ಮುಕ್ತ ಮನಸ್ಸುಗಳು ನಮಗಿರತಕ್ಕದ್ದು.

ಅದರ ಮಧ್ಯದಲ್ಲಿ, ದೀರ್ಘಕಾಲದಿಂದ ನಂಬುತ್ತಾ ಬಂದಿರುವ ಒಂದು ಮನವರಿಕೆಯು ತಪ್ಪು ಎಂಬುದು ನಮಗೆ ದೇವರ ವಾಕ್ಯದಿಂದ ಮನದಟ್ಟಾಗುವ ತನಕ, ನಮ್ಮ ಮನಸ್ಸಾಕ್ಷಿಯು ಹೇಳುವದನ್ನೆಲ್ಲಾ ಮಾಡುತ್ತಲಿರೋಣ. ಪ್ರಸಿದ್ಧ ಸುಧಾರಣಕಾರನಾದ ಮಾರ್ಟಿನ್ ಲೂಥರ್, ನ್ಯಾಯವಿಚಾರಣೆಯಲ್ಲಿರುವ ವೇಳೆ, ಈ ಅತ್ಯುತ್ಕೃಷ್ಟವಾದ ಹೇಳಿಕೆಯನ್ನು ನೀಡಿದನು:

> ನನಗೆ ಶಾಸ್ತ್ರಗಳಿಂದಲೂ ಸರಳ ತರ್ಕದಿಂದಲೂ ಮನವರಿಕೆಯಾಗುವ ಹೊರತು—ನಾನು ಪೋಪ್‌ಗಳ ಮತ್ತು ಸಭಾ ಸಮಾಲೋಚನಾ ಸಭೆಗಳ ಅಧಿಕಾರವನ್ನು ಅಂಗೀಕರಿಸಿಕೊಳ್ಳುವದಿಲ್ಲ, ಯಾಕೆಂದರೆ ಅವರು ಪರಸ್ಪರ ವಿರುದ್ಧವಾದವರು—ನನ್ನ ಮನಸ್ಸಾಕ್ಷಿಯು ದೇವರ ವಾಕ್ಯಕ್ಕೆ ಬಂಧಿಯಾಗಿರುತ್ತದೆ. ನಾನು ಯಾವದನ್ನೂ ತಪ್ಪೆಂದು ತ್ಯಜಿಸಿ ಬಿಡುವದಕ್ಕೆ ಸಾಧ್ಯವಿಲ್ಲ ಮತ್ತು ಮಾಡಲಾರೆನು, ಯಾಕೆಂದರೆ ಮನಸ್ಸಾಕ್ಷಿಗೆ ವಿರುದ್ಧವಾಗಿ ನಡೆಯುವದು ಸರಿಯಾದದ್ದೂ ಅಲ್ಲ ಸುರಕ್ಷಿತವೂ ಅಲ್ಲ. ದೇವರೇ ನನಗೆ ಸಹಾಯ ಮಾಡಲಿ. ಆಮೆನ್.[88]

*ಮುಕ್ತಾಯ*. "ನೀವು ನಿಮ್ಮ ಮನಸ್ಸಾಕ್ಷಿಗೆ ನಿಮ್ಮ ಮಾರ್ಗದರ್ಶಿಯಾಗಿರುವಂತೆ ಅನುಮತಿಸತಕ್ಕದ್ದೋ?" ಎಂಬ ಪ್ರಶ್ನೆಗೆ ನಾನು ನೀಡಿದ ದ್ವಂದ್ವಾರ್ಥದಂತೆ ತೋರುವ "ಹೌದು/ಇಲ್ಲ" ಎಂಬ ಉತ್ತರವನ್ನು ಈಗ ಅರ್ಥಮಾಡಿಕೊಳ್ಳುವಿರೆಂದು ನಾನು ನಿರೀಕ್ಷಿಸುತ್ತೇನೆ. ಧಾರ್ಮಿಕ ವಿಚಾರಗಳಲ್ಲಿ, ಮನಸ್ಸಾಕ್ಷಿಯೊಂದೇ ನಮಗೆ ಮಾರ್ಗದರ್ಶಿಯಾಗಿರ*ಬಾರದು*. ಇನ್ನೊಂದೆಡೆಯಲ್ಲಿ, ನಾವು ದೇವರಿಂದ ಸ್ಥಾಪಿಸಲ್ಪಟ್ಟಿರುವ ಸುರಕ್ಷತೆಯನ್ನು ಮಂದಗೊಳಿಸುವದರಿಂದ ದೂರವಿರುವದಕ್ಕಾಗಿ ನಮ್ಮ ಮನಸ್ಸಾಕ್ಷಿಯ ಅಪ್ಪಣೆಗಳಿಗೆ ವಿಧೇಯರಾಗ*ತಕ್ಕದ್ದು*. ನಾವು ಯಾವಾಗಲೂ ನಮ್ಮ ಮನಸ್ಸಾಕ್ಷಿಯನ್ನು ಶಿಕ್ಷಣಗೊಳಿಸುವ ಮತ್ತು ಯಾವದು ಸರಿ ಹಾಗೂ ತಪ್ಪು ಎಂಬುದರ ಕುರಿತ ನಮ್ಮ ಭಾವನೆಗಳನ್ನು ಸಂಸ್ಕರಿಸುವ ಪ್ರಕ್ರಿಯೆಯಲ್ಲಿರತಕ್ಕದ್ದು.

ನಾವು 1 ಪೇತ್ರ 3:21ನ್ನು ಪರಿಗಣಿಸೋಣ. ಈ ವಾಕ್ಯಭಾಗದಲ್ಲಿ, ಪೇತ್ರನು ಒತ್ತಿ ಹೇಳಿದ್ದೇನೆಂದರೆ ". . . ದೀಕ್ಷಾಸ್ನಾನವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ

ನಮ್ಮನ್ನು ರಕ್ಷಿಸುತ್ತದೆ." ಹೇಗೂ, ಆತನು ಗಮನಕ್ಕೆ ತಂದದ್ದೇನೆಂದರೆ, ದೀಕ್ಷಾಸ್ನಾನವು "ಮೈಕೊಳೆಯನ್ನು ಹೋಗಲಾಡಿಸುವಂಥದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ" ಎಂಬದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ದೀಕ್ಷಾಸ್ನಾನ ಮಾಡಿಸಿಕೊಳ್ಳುವದಕ್ಕೆ ಒಂದು ಕಾರಣವೆಂದರೆ ಇನ್ನು ಮೇಲೆ ನಮಗೆ ಅಪರಾಧಭಾವನೆಯುಳ್ಳ ಮನಸ್ಸಾಕ್ಷಿಯು ಇರುವದಿಲ್ಲ.

ದೇವರ ವಾಕ್ಯವು ಹೇಳುವದೇನೆಂದರೆ ನಾವು ಯೇಸುವಿನಲ್ಲಿ ನಂಬಿಕೆಯಿಡುವ (ವಿಶ್ವಾಸಿಸುವ) ಅಗತ್ಯವಿದೆ (ಯೋಹಾನ 3:16), ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಡಬೇಕು (ಅಪೊಸ್ತಲರ ಕೃತ್ಯಗಳು 17:30), ಆ ನಂಬಿಕೆಯನ್ನು ನಮ್ಮ ಹೃದಯಗಳಲ್ಲಿ ಅರಿಕೆ ಮಾಡಬೇಕು (ರೋಮಾ 10:9, 10), ನಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ದೀಕ್ಷಾಸ್ನಾನ (ನೀರಿನಲ್ಲಿ ಮುಳುಗಿ) ಮಾಡಿಸಿಕೊಳ್ಳಬೇಕು (ಅಪೊಸ್ತಲರ ಕೃತ್ಯಗಳು 2:38), ಮತ್ತು ನಂತರ ಸಾಯಬೇಕಾದರೂ ನಂಬಿಗಸ್ತರಾಗಿರಬೇಕು (ಪ್ರಕಟನೆ 2:10). ನಿಮ್ಮ ಮನಸ್ಸಾಕ್ಷಿಯು *ಜ್ಞಾನಪ್ರಕಾಶವನ್ನು ಪಡೆಯುವದಾದರೆ*, ಈ ಉಪದೇಶಗಳು ಸತ್ಯವಾದವು ಎಂಬುದನ್ನು ಅದು ಒಪ್ಪಿಕೊಳ್ಳುತ್ತದೆ. ನಿಮ್ಮ ಮನಸ್ಸಾಕ್ಷಿಯು *ಪರಿಣಾಮಕಾರಿ* ಯಾಗಿದ್ದರೆ, ನೀವು ಈ ಕಾರ್ಯಗಳನ್ನು ಮಾಡ*ತಕ್ಕದ್ದು* ಎಂದು ಅದು ನಿಮಗೆ ಹೇಳುವದು. ಈಗ, ನೀನು ಏನು ಮಾಡಬೇಕಾದ ಅಗತ್ಯವಿದೆ ಎಂದು ನಿಮಗೆ ಗೊತ್ತಾಗಿದೆಯೋ ಅದನ್ನು ಮಾಡುವ ಮೂಲಕವಾಗಿ ನೀವು ನಿಮ್ಮ ಮನಸ್ಸಾಕ್ಷಿಯನ್ನು *ಅಭ್ಯಾಸ ಮಾಡಿಕೊಳ್ಳುವ* ಅಗತ್ಯವಿರುತ್ತದೆ. ನಿಮ್ಮ ಮನಸ್ಸಾಕ್ಷಿಯು ಈ ದಿನ ದೇವರಿಗೆ "ಹೌದು" ಎಂದು ಉತ್ತರಿಸಲಿ!

## ಅನುಸರಿಸಿಕೊಂಡು ಬಾಳುವದು (14ನೇ ಅಧ್ಯಾಯ)

ರೋಮಾ 14ರಲ್ಲಿನ ಮೂಲತತ್ವಗಳು ಜನರಲ್ಲಿ ಭಿನ್ನಾಭಿಪ್ರಾಯ ಉಂಟಾಗುವ ಯಾವದೇ ಸಮಯದಲ್ಲಿಯೂ ಸಹಾಯ ಮಾಡಬಲ್ಲವು. ದಂಪತಿಗಳೊಂದಿಗೆ ದಾಂಪತ್ಯದಲ್ಲಿ ಅನುಸರಿಸಿಕೊಂಡು ಹೋಗುವ ಬಗ್ಗೆ ಮಾತಾಡುವಾಗೆಲ್ಲಾ Evertt Huffard ಈ ವಾಕ್ಯಭಾಗವನ್ನು ಉಪಯೋಗಿಸುತ್ತಾನೆ. ಈ ಅಧ್ಯಾಯದಿಂದ ಆತನು ಹೊರ ತೆಗೆಯುವ ಒಂದು ಮೂಲತತ್ವವೆಂದರೆ ಇದೇ: "ನೀನು ಸರಿ ಎಂದಾಗಿದ್ದರೂ ಒಂದು ವಾದದಲ್ಲಿ ಸೋಲುವದು ಸಮ್ಮತವಾದದ್ದೇ."[89] ಆ ಹೇಳಿಕೆಯು ನಮ್ಮಲ್ಲಿ ಕೆಲವರಿಗೆ ವಿಚಿತ್ರವೆಂದು ತೋರಬಹುದು. ನಾವು ಸರಿ ಎಂದಾಗಿರುವದಕ್ಕೆ ಬಯಸುತ್ತೇವೆ. ಅಮೆರಿಕದ ಮುತ್ಸದ್ದಿ ರಾಜಕಾರಣಿ Henry Clay (1777-1852) ಈ ಹೇಳಿಕೆಗೆ ಪ್ರಸಿದ್ಧನಾಗಿದ್ದನು, ಏನೆಂದರೆ "ನಾನು ಅಧ್ಯಕ್ಷನಾಗಿರುವದಕ್ಕಿಂತಲೂ ಸರಿ ಆಗಿರುವದಕ್ಕೆ ಬಯಸುತ್ತೇನೆ."[90] ಸರಿ ಆಗಿರುವದಕ್ಕಿಂತಲೂ ಹೆಚ್ಚು ಪ್ರಾಮುಖ್ಯವೆಂದರೆ, ನಮ್ಮೊಂದಿಗೆ ಒಮ್ಮತ ವ್ಯಕ್ತಪಡಿಸದ ಯಾರೇ ಆಗಲಿ ನಾವೇ ಸರಿ ಎಂದು ಒಪ್ಪಿಕೊಳ್ಳಬೇಕು ಎಂಬದಾಗಿ ಇಚ್ಛಿಸುತ್ತೇವೆ.

ರೋಮಾ 14ರಲ್ಲಿ ಪೌಲನ ಚರ್ಚೆಯು ಮೊದಲ ಶತಮಾನದ ಸಭೆಯಲ್ಲಿದ್ದ ಮಾಂಸ ತಿನ್ನುವ ಕುರಿತ ವಿವಾದದ ಸುತ್ತ ಕೇಂದ್ರಿಕೃತವಾಗಿತ್ತು. ಆ ವಿವಾದಾಂಶದ ಮೇಲೆ ಯಾರು ಸರಿ ಆಗಿದ್ದರೆಂಬ ಬಗ್ಗೆ ಆತನು ಯಾವದೇ ಸಂಶಯಕ್ಕೆ ಎಡೆ ಮಾಡಿಕೊಟ್ಟಿರುವದಿಲ್ಲ. ಕೇವಲ "ಕಾಯಿಪಲ್ಯಗಳನ್ನು" ತಿನ್ನುವ ಸಹೋದರನು "ದೃಢವಿಲ್ಲದ"ವನು ಎಂದು ಆತನು ಹೇಳಿದನು (14:2).[91] ಆತನು "ಯಾವ ಪದಾರ್ಥವೂ [ಮಾಂಸವೂ ಸೇರಿದಂತೆ, ಯಾವ ಆಹಾರ ಸಹ]

ಸ್ವತಃ ಅಶುದ್ಧವಾದದ್ದಲ್ಲ . . ." ಎಂದು ಹೇಳಿದನು (14:14) ಮತ್ತು ಇದನ್ನು "ದೃಢವಿರುವ" ನಿಲುವು ಎಂದು ಗುರುತಿಸಿದನು (ನೋಡಿರಿ 15:1). ಹೇಗಿದ್ದರೂ, ಕೆಲವು ಸಂಗತಿಗಳು ಆ ವಿವಾದಾಂಶದ ಮೇಲೆ ಸರಿ ಎಂದಾಗಿರುವದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾಗಿರುತ್ತವೆ ಎಂಬುದನ್ನು ಆತನು ಸ್ಪಷ್ಟಗೊಳಿಸಿದನು.

ಸರಿ ಎಂದಾಗಿರುವದಕ್ಕಿಂತಲೂ ಪ್ರಾಮುಖ್ಯವಾದದ್ದು ಯಾವದಿರುವದಕ್ಕೆ ಸಾಧ್ಯವಿದೆ? ರೋಮಾ 14:13-23ರಲ್ಲಿ, ಹೆಚ್ಚು ಮಹತ್ವವುಳ್ಳಂತಹ ಹಲವಾರು ಸಂಗತಿಗಳನ್ನು ಗಮನಕ್ಕೆ ತರುತ್ತಾನೆ.[92] 13ರಿಂದ 18 ವಚನಗಳಲ್ಲಿ, ಅಭಿಪ್ರಾಯ ಸಂಬಂಧಿತ ವಿಚಾರಗಳಲ್ಲಿ ನಾನೇ ಸರಿ ಎಂದಾಗಿರುವದಕ್ಕಿಂತಲೂ ಒಬ್ಬ ಸಹೋದರನಿಗೆ ನೋವುಂಟು ಮಾಡದಿರುವದೇ ಹೆಚ್ಚು ಪ್ರಾಮುಖ್ಯವಾದದ್ದು ಎಂದು ಪೌಲನು ಹೇಳುತ್ತಾನೆ (ನೋಡಿರಿ 14:13, 15). 19ರಿಂದ 23 ವಚನಗಳು ಜೊತೆ ಕ್ರೈಸ್ತರಿಗೆ ನೋವುಂಟು ಮಾಡದಂತಿರುವದರ ಅಗತ್ಯತೆಯ ಬಗ್ಗೆ ಒತ್ತಿ ಹೇಳುವದನ್ನು ಮುಂದುವರೆಸುತ್ತವೆ, ಆದರೆ ಒಂದು ಹೆಚ್ಚುವರಿ ಆಲೋಚನೆಯು ಪರಚಯಿಸಲ್ಪಡುತ್ತದೆ. ಒಬ್ಬ ಸಹೋದರನಿಗೆ ನೋವುಂಟು ಮಾಡದಿರಬೇಕೆಂಬ ಪೌಲನ ಬೋಧನೆಯನ್ನು ಏನೂ ಮಾಡದೇ ಉಳಿಯುವ ಮೂಲಕ, ಆತನನ್ನು ಆತನ ಪಾಡಿಗೆ ಬಿಟ್ಟು ಬಿಡುವ ಮೂಲಕ, ನೆರವೇರಿಸುವದಕ್ಕೆ ಶಕ್ತರಾಗಬಹುದಾಗಿದೆ. ಹೇಗೂ, ವಾಕ್ಯಭಾಗವು ಅದನ್ನು ದಾಟಿ ಸಾಗಿ, ನಾವು ಏನನ್ನಾದರೂ ಮಾಡಬೇಕಾದ ಅಗತ್ಯವಿದೆ ಎಂಬ ಒಂದು ಸಕಾರಾತ್ಮಕ ಒತ್ತನ್ನು ಸೇರಿಸುತ್ತದೆ. ತತ್ಪರಿಣಾಮವಾಗಿ, ಪೌಲನು ಹೇಳಿದ್ದೇನೆಂದರೆ, ಸರಿ ಎಂದಾಗಿರುವದಕ್ಕಿಂತಲೂ ಒಬ್ಬ ಸಹೋದರನಿಗೆ ಸಹಾಯ ಮಾಡುವದು ಹೆಚ್ಚು ಪ್ರಾಮುಖ್ಯವಾಗಿರುತ್ತದೆ ಎಂಬದೆ (ನೋಡಿರಿ 14:19).

## "ಒಬ್ಬರನ್ನೊಬ್ಬರು ಸೇರಿಸಿಕೊಳ್ಳಿರಿ" (14:1; 15:7)

"ದೃಢವಿರುವ"ವವರಿಗೆ "ದೃಢವಿಲ್ಲದ"ವರನ್ನು ಸೇರಿಸಿಕೊಳ್ಳುವಂತೆ ಮತ್ತು ಅವರನ್ನು ಹೀನವಾಗಿ ಕಾಣಬಾರದೆಂದು ಹೇಳಲಾಗಿರುತ್ತದೆ. ಅಲ್ಲದೆ "ದೃಢವಿಲ್ಲದವರು" "ದೃಢವಿರುವವರನ್ನು" ಸೇರಿಸಿಕೊಳ್ಳಬೇಕೆಂದು (ನೋಡಿರಿ 15:7) ಮತ್ತು ಅವರ ಸಹೋದರರಿಗೆ ತೀರ್ಪು ಮಾಡಬಾರದು ಎಂದು ಸಹ ಪೌಲನು ಸೂಚಿಸುತ್ತಾನೆ. ಒಬ್ಬರು ಹೀಗೆ ಕೇಳಬಹುದು, "ನಾನು ಒಬ್ಬ 'ದೃಢವಿರುವ' ಸಹೋದರನೋ ಅಥವಾ 'ದೃಢವಿಲ್ಲದ' ಸಹೋದರನೋ ಎಂದು ನನಗೆ ಹೇಗೆ ಗೊತ್ತಾಗಬೇಕು?" ದೃಢಚಿತ್ತವಿರುವ ಬಹುತೇಕ ವ್ಯಕ್ತಿಗಳು ತಮ್ಮನ್ನು "ದೃಢವಿರುವವರು" ಎಂದು ಕರೆದುಕೊಳ್ಳುತ್ತಾರೆ. (ಒಬ್ಬ ಕ್ರೈಸ್ತನು ತನ್ನನ್ನು "ಬಲಹೀಲನು" ಎಂದು ಹೇಳಿಕೊಂಡದ್ದನ್ನು ಕೇಳಿಸಿಕೊಂಡ ಒಂದೇ ಒಂದು ಸಂದರ್ಭವನ್ನು ಮಾತ್ರವೇ ನಾನು ಜ್ಞಾಪಿಸಿಕೊಳ್ಳಬಲ್ಲೆನು.) ಒಬ್ಬರನ್ನೊಬ್ಬರು ಸೇರಿಸಿಕೊಳ್ಳುವ ವಿಷಯದಲ್ಲಿ, ಬಹುತೇಕ ವಿವಾದಾಂಶಗಳ ಮೇಲೆ ನೀವು "ದೃಢವಿರುವ"ವವರೋ ಅಥವಾ "ದೃಢವಿಲ್ಲದ"ವರೋ ಎಂಬುದರಲ್ಲಿ ಯಾವದೇ ವ್ಯತ್ಯಾಸವಿರುವದಿಲ್ಲ. (ನೀವು "ದೃಢವಿರು" ಸಹೋದರನೆಂದು ವಾದಿಸಿಕೊಳ್ಳುವದಾದರೆ, ಅದರಲ್ಲಿ ತಪ್ಪೇನಿಲ್ಲ. ನಿಜವೇನೆಂದರೆ, "ದೃಢವಿರುವ"ವವರಿಗೆ ಹೆಚ್ಚಿನ ಜವಾಬ್ದಾರಿಯಿರುತ್ತದೆ.) "ದೃಢವಿರುವ"ವರೋ ಅಥವಾ "ದೃಢವಿಲ್ಲದ"ವರೋ, ಪ್ರತಿಯೊಬ್ಬ ಕ್ರೈಸ್ತನಿಗಾಗಿರುವ ಸಂದೇಶವು ಒಂದೇ ಆಗಿದೆ: "ಒಬ್ಬರನ್ನೊಬ್ಬರು ಸೇರಿಸಿಕೊಳ್ಳಿರಿ" (15:7)!

## ಬಲಹೀನರನ್ನು ಸ್ವೀಕರಿಸಿಕೊಳ್ಳುವದು (14:1, 15)

ರೋಮಾ 14:1 ಹೀಗೆ ಹೇಳುತ್ತದೆ, "ನಂಬಿಕೆಯಲ್ಲಿ ದೃಢವಿಲ್ಲದವರನ್ನೂ ಸೇರಿಸಿಕೊಳ್ಳಿರಿ, ಆದರೆ ಸಂದೇಹಾಸ್ಪವಾದ ಕಾರ್ಯಗಳನ್ನು ಅವರ ಮುಂದೆ ಚರ್ಚಿಸಬೇಡಿರಿ." ಈ ಮೂಲತತ್ವದ ಕುರಿತಾದ ಒಂದು ದೃಷ್ಟಾಂತವನ್ನು ಪರಿಗಣಿಸೋಣ: ಶುಕ್ರವಾರದಂದು ಮಾಂಸ ತಿನ್ನುವದು ತಪ್ಪು ಎಂಬದಾಗಿ ಬೋಧಿಸುವ ಒಂದು ಧಾರ್ಮಿಕ ಗುಂಪಿನ ಬಗ್ಗೆ ಯೋಚಿಸಿಕೊಳ್ಳಿರಿ. ನೀವು ಆ ಧರ್ಮದಲ್ಲಿ ಬೆಳೆದು ಬಂದಿದ್ದಂಥ ಒಬ್ಬನಿಗೆ ಉಪದೇಶಿಸಿ ಆತನನ್ನು ವಿಶ್ವಾಸಿಯಾಗಿ ಪರಿವರ್ತಿಸುತ್ತಿರೆಂದು ಕಲ್ಪಿಸಿಕೊಳ್ಳಿರಿ. ಆ ವ್ಯಕ್ತಿಯು ನೀರಿನ ದೀಕ್ಷಾಸ್ನಾನ ಮಾಡಿಸಿಕೊಂಡವನಾಗಿ ಹೊರ ಬರುವಾಗ, ನೀವು ಆತನನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ ಶುಕ್ರವಾರದಂದು ಮಾಂಸ ತಿನ್ನುವದಕ್ಕೆ ನಿರಾಕರಿಸುವದು ಎಷ್ಟು ಮೂರ್ಖತನ ಎಂಬುದರ ಕುರಿತು ಆತನಿಗೆ ಒಂದು ಭಾಷಣವನ್ನು ಮಾಡಬೇಕೋ? ಖಂಡಿತವಾಗಿಯೂ ಇಲ್ಲ. ಆತನು ಕ್ರಿಸ್ತನಲ್ಲಿನ ಬಲಹೀನ ಶಿಸುವಾಗಿದ್ದು ಆತನಿಗೆ ಒಂದು ಸ್ವಾಗತದ ಅಪ್ಪುಗೆಯ ಅಗತ್ಯವಿರುತ್ತದೆಯೇ ಹೊರತು, ಒಂದು ಮಾತಿನ ಕಪಾಳಮೋಕ್ಷವಲ್ಲ. ಸ್ವಲ್ಪ ಕಾಲ ಗತಿಸಿದ ಬಳಿಕ, ಆತನು ಆ ವಿಚಾರದಲ್ಲಿ ಆತ್ಮೀಕ ಜ್ಞಾನಪ್ರಕಾಶವನ್ನು ಪಡೆಯುವನು, ಆದರೆ ಆತನಿಗೆ ಮೊದಲು ಅಗತ್ಯವಿರುವದು ಸ್ವೀಕಾರ ಮಾಡಿಕೊಳ್ಳಲ್ಪಡುವಿಕೆಯೇ.

ಈ ದೃಷ್ಟಾಂತಕ್ಕೆ ಇನ್ನಷ್ಟು ಸೇರ್ಪಡೆಗೊಳಿಸುವದಾದರೆ, ಹೊಸದಾಗಿ ಪರಿವರ್ತನೆಗೊಂಡವನನ್ನು ನೀವು ಬರುವ ಶುಕ್ರವಾರದಂದೇ ರಾತ್ರಿ ಊಟಕ್ಕೆ ಆಹ್ವಾನಿಸಿ ಆತನಿಗೆ ಮಾಂಸದ ತುಂಡನ್ನು ಬಡಿಸುವದನ್ನು ಸಹ ಮಾಡಬಾರದು. ಹಾಗೆ ಮಾಡುವದಾದರೆ ಆತನನ್ನು ನಾವು ಅವನ ಮನಸ್ಸಾಕ್ಷಿಯನ್ನು ಉಲ್ಲಂಘಿಸಿ ಪಾಪ ಮಾಡಿದವನಾಗುವಂತೆ ಪ್ರೋತ್ಸಾಹಿಸಿದ ಹಾಗಾಗುತ್ತದೆ. ರೋಮಾ 14:15 ಹೀಗೆ ಬೋಧಿಸುತ್ತದೆ, "ನೀನು ತೆಗೆದುಕೊಳ್ಳುವ ಆಹಾರದಿಂದ ನಿನ್ನ ಸಹೋದರನ ಮನಸ್ಸಿಗೆ ನೋವಾದರೆ ನೀನು ಪ್ರೀತಿಗೆ ತಕ್ಕಂತೆ ಇನ್ನು ನಡೆಯುವವನಲ್ಲ. ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ ಅವನನ್ನು ನಿನ್ನ ಇಷ್ಟವಾದ ಆಹಾರ ನಿಮಿತ್ತ ಕೆಡಿಸಬಾರದು."

## ಇತರರನ್ನು ತಾತ್ಸಾರದಿಂದ ನೋಡಬಾರದು (14:3)

ಪೌಲನು ಹೀಗೆ ಸೂಚಿಸುತ್ತಾನೆ, "ತಿನ್ನುವವನು ['ದೃಢವಿರುವವನು'] ತಿನ್ನದವನನ್ನು ['ದೃಢವಿಲ್ಲದವನು'] ಹೀನೈಸಬಾರದು; ತಿನ್ನದವನು ['ದೃಢವಿಲ್ಲದವನು'] ತಿನ್ನುವವನನ್ನು ['ದೃಢವಿರುವವನು'] ದೋಷಿಯೆಂದು ಎಣಿಸಬಾರದು. ದೇವರು ಇಬ್ಬರನ್ನೂ ಸೇರಿಸಿಕೊಂಡಿದ್ದಾನಲ್ಲಾ" (14:3).

*ದೃಢವಿರುವವರು.* ನಾನು ತಮ್ಮನ್ನು ಮಿಕ್ಕ ಕ್ರೈಸ್ತರಿಗಿಂತಲೂ ಹೆಚ್ಚು ಜ್ಞಾನಪ್ರಕಾಶವನ್ನು ಪಡೆದವರೆಂದು ಭಾವಿಸಿಕೊಂಡಿರುವ ಕೆಲವರ ಬರಹಗಳನ್ನು ಓದಿದ್ದೇನೆ. ಪುಟ ಪುಟಗಳಿಂದ ಕೇವಲ ತೃಣೀಕರಿಸುವಿಕೆ ಮತ್ತು ವ್ಯಂಗ ಮಾಡುವಿಕೆಯೇ ತೊಟ್ಟಿಕ್ಕುತ್ತಿತ್ತು. ನೀವು ನಿಮ್ಮನ್ನು ಒಂದು ವಿವಾದಾಂಶದ ಮೇಲೆ "ದೃಢವಿರುವವರು" ಎಂದು ಪರಿಗಣಿಸಿಕೊಳ್ಳುತ್ತೀರೋ? ಪೌಲನು ನಿಮಗೆ ನಿಮ್ಮೊಂದಿಗೆ ಸಮ್ಮತ ವ್ಯಕ್ತಪಡಿಸದ ಸಹೋದರನನ್ನು "ಹೀನೈಸಬಾರದು" ಎಂದು ಹೇಳಿರುತ್ತಾನೆ.

*ಬಲಹೀನರು.* ನಾನು ಇತರ ಕ್ರೈಸ್ತರಲ್ಲಿನ ದೋಷಗಳನ್ನು ಎತ್ತಿತೋರಿಸುವದಕ್ಕಾಗಿಯೇ ಸಮರ್ಪಿತವಾದ ದಿನಪ್ರತಿಕೆಗಳನ್ನು ಓದಿದ್ದೇನೆ. ಅವುಗಳಲ್ಲಿ ಕೆಲವು ಬಹಳ ಕಠೋರವಾದ ಹಾಗೂ ತೀರ್ಪುಮಾಡುವಿಕೆಯ ದನಿಯಲ್ಲಿರುತ್ತಿದ್ದವು. ಇಂಥಿಂಥ ಆಚಾರವು ತಪ್ಪು ಎಂದು ನೀವು ನಂಬುವದಾದರೆ, ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಯಾರ ವಿಷಯದಲ್ಲಿಯೇ ಆಗಲಿ ದಯೆಯಿಲ್ಲದೆ ಮತ್ತು ಸೈರಣೆಯಿಲ್ಲದೆ ನಡೆದುಕೊಳ್ಳುವದು ಸುಲಭವಾಗಿರುತ್ತದೆ.

## ಮತ್ತೊಬ್ಬನ ಸೇವಕನ ವಿಷಯವಾಗಿ ತೀರ್ಪು ಮಾಡದಿರುವದು (14:4)

ನಿಮಗೊಬ್ಬ ಕೆಲಸಗಾರನಿದ್ದು, ಬಹುಶಃ ನಿಮ್ಮೊಂದಿಗೆ ಬಹಳ ವರ್ಷಗಳಿಂದ ಇರುವ ಒಬ್ಬ ವಿಶ್ವಾಸರ್ಹ ಸೇವಕನಿದ್ದು, ಒಂದು ದಿನ ನಿಮ್ಮ ಮನೆಗೆ ಬಂದ ಒಬ್ಬ ಅತಿಥಿಯು ನಿಮ್ಮ ಸೇವಕನು ಕೆಲಸ ಮಾಡುವ ರೀತಿಯನ್ನು ಟೀಕಿಸುವದಕ್ಕೆ ಆರಂಭಿಸಿದರೆ ಹೇಗಿರುತ್ತದೆ? ನೀವು ಅದಕ್ಕೆ ಹೇಗೆ ಪ್ರತಿಕ್ರಿಯೆ ತೋರುವಿರಿ? ಬಹುಶಃ ನೀವು ನಿಮ್ಮ ಅತಿಥಿಗೆ *ಅವನ* ಅಭಿಪ್ರಾಯವು ಮುಖ್ಯವಲ್ಲ ಆದರೆ *ನಿಮ್ಮ* ಅಭಿಪ್ರಾಯವೇ ಮುಖ್ಯವಾದದ್ದೆಂಬದಾಗಿ (ಖಂಡಿತವಾಗಿ, ಸಭ್ಯವಾಗಿಯೇ) ಹೇಳುವಿರಿ.

ಒಮ್ಮೆ Batsell Barrett Baxterನನ್ನು ಇಂಥಿಂಥ ವ್ಯಕ್ತಿಯು ರಕ್ಷಣೆ ಹೊಂದುವನೋ ಅಥವಾ ನಾಶವಾಗುವನೋ ಎಂದು ಕೇಳಲಾಯಿತು. Baxter ಹೀಗೆ ಪ್ರತ್ಯುತ್ತರ ನೀಡಿದನು, "ನೀವು ತಪ್ಪಾದ ವ್ಯಕ್ತಿಯನ್ನು ಕೇಳುತ್ತಿರುವಿರಿ. ಜನರನ್ನು ಪರಲೋಕಕ್ಕೆ ಅಥವಾ ನರಕಕ್ಕೆ ನಿಯೋಜಿಸುವದು ದೇವರ ಕೆಲಸ, ನನ್ನದಲ್ಲ."[93]

## ತೀರ್ಪು ಮಾಡದಿರುವದಕ್ಕೆ ಕಾರಣಗಳು (14:5-13)

14:5-12ರಲ್ಲಿ, ಅಭಿಪ್ರಾಯ ಸಂಬಂಧಿತ ವಿಚಾರಗಳಲ್ಲಿ ಏಕೆ "ಇನ್ನು ಮೇಲೆ ಒಬ್ಬರ ವಿಷಯದಲ್ಲೊಬ್ಬರು ತೀರ್ಪುಮಾಡದೆ ಇರೋಣ" (14:13) ಎಂಬುದನ್ನು ವಿವರಿಸುವ ನಾಲ್ಕು ಕಾರಣಗಳು ಸಿಕ್ಕಬಹುದು:

ಯಾಕೆಂದರೆ ನಾವೆಲ್ಲರೂ ದೇವರನ್ನು ಮಹಿಮೆ ಪಡಿಸುವದಕ್ಕೆ ಶ್ರಮಿಸುತ್ತಿದ್ದೇವೆ (14:5, 6).
ಯಾಕೆಂದರೆ ನಾವೆಲ್ಲರೂ ಕರ್ತನಿಗೆ ಸೇರಿದವರಾಗಿದ್ದೇವೆ (14:7-9).
ಯಾಕೆಂದರೆ ನಾವು ಕ್ರಿಸ್ತನಲ್ಲಿ ಸಹೋದರರು ಹಾಗೂ ಸಹೋದರಿಯರು ಆಗಿದ್ದೇವೆ (14:10a).
ಯಾಕೆಂದರೆ ನಾವೆಲ್ಲರೂ ಕರ್ತನಿಂದ ನ್ಯಾಯತೀರಿಸಲ್ಪಡುವೆವು (14:10b-12).

ಇವುಗಳಲ್ಲಿ ಯಾವದೇ ಕಾರಣವು ಸಹ ಒಬ್ಬರನ್ನೊಬ್ಬರು ಸ್ವೀಕರಿಸಿಕೊಂಡು ತೀರ್ಪು ಮಾಡುವವರಾಗಿರುವದನ್ನು ನಿಲ್ಲಿಸುವಂತೆ ನಮ್ಮನ್ನು ಸ್ಫೂರ್ತಿಗೊಳಿಸುವದಕ್ಕೆ ಸಾಕಾಗತಕ್ಕದ್ದು. ನಾಲ್ಕು ಕಾರಣಗಳಂತೂ ನಮ್ಮನ್ನು ಉತ್ತರವಿಲ್ಲದವರನ್ನಾಗಿ ಮಾಡುತ್ತವೆ.

## "ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರುವದು" (14:5)

ಅಭಿಪ್ರಾಯ ಸಂಬಂಧಿತ ವಿಚಾರಗಳ ಕುರಿತಾಗಿ, ಪೌಲನು ಹೇಳಿದ್ದೇನೆಂದರೆ

"ಪ್ರತಿಯೊಬ್ಬನು ತನ್ನ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು" (14:5). ಈ ವಿವಾದಾಂಶಕ್ಕೆ ಒಂದು ದೃಷ್ಟಾಂತವೆಂದರೆ ಕ್ರೈಸ್ತರು ಪೋಲಿಸ್ ಅಥವಾ ಸೈನಿಕರಾಗಿ ಸೇವೆ ಸಲ್ಲಿಸಬಹುದೋ ಅಥವಾ ಇಲ್ಲವೋ ಎಂಬದೆ. ಅನೇಕ ಸ್ಥಳಗಳಲ್ಲಿ ಇದನ್ನೊಂದು ಅಭಿಪ್ರಾಯದ ವ್ಯಾಪ್ತಿಗೊಳಪಟ್ಟದ್ದೆಂದು ಪರಿಗಣಿಸಲಾಗುತ್ತದೆ,[94] ಆದರೆ ಹಾಗೆಂದ ತಕ್ಷಣ ಈ ವಿವಾದಾಂಶವು ಅಪ್ರಾಮುಖ್ಯ ಅಥವಾ ಆ ವಿಷಯದಲ್ಲಿ ನೀವು ಏನೇ ನಂಬಿದ್ದರೂ ವ್ಯತ್ಯಾಸವೇನಿಲ್ಲ ಎಂದಾಗುವದಿಲ್ಲ. ನೀವು ಎಲ್ಲಿಯೇ ವಾಸಿಸುವವರಾಗಿದ್ದರೂ ಅಲ್ಲಿ ಪ್ರಬಲವಾಗಿರುವ ಅಭಿಪ್ರಾಯವನ್ನು ಪ್ರಶ್ನೆ ಮಾಡದೆಯೇ ಸ್ವೀಕರಿಸಿಕೊಳ್ಳದಿರಿ. ಬದಲಾಗಿ, ಅದಕ್ಕೆ ಸಂಬಂಧಿಸಿದ್ದೆಂದು ನಿಮಗನ್ನಿಸುವ ಹೊಸ ಒಡಂಬಡಿಕೆಯ ಎಲ್ಲಾ ವಾಕ್ಯಭಾಗಗಳನ್ನು ಅಧ್ಯಯನ ಮಾಡಿರಿ. ನೀನು ನಿಮ್ಮ ಮನಸ್ಸಿನಲ್ಲಿ "ನಿಶ್ಚಯಿಸಿಕೊಳ್ಳುವ" ತನಕ ಅಧ್ಯಯನ ಮತ್ತು ಪ್ರಾರ್ಥನೆಯನ್ನು ಮುಂದುವರೆಸಿರಿ. ಬಳಿಕ ನಿಮಗಾದ ಮನವರಿಕೆಗಳಿಗೆ ತಕ್ಕಂತೆ ಜೀವಿಸಿರಿ.

## ಕುಟುಂಬದಲ್ಲಿ ಸಹಿಷ್ಣುತೆ (14:10)

ಶಾರೀರಿಕ ಕುಟುಂಬದ ಸದಸ್ಯರು ಅನೇಕ ಸಾರಿ ಒಬ್ಬರೊಬ್ಬರೆಡೆಗೆ ಬಹಳವಾದ ತಾಳ್ಮೆಯನ್ನು ವ್ಯಕ್ತಪಡಿಸುತ್ತಾರೆ. ನೀವು ಕಡೆಯದಾಗಿ ಹಾಜರಾಗಿದ್ದ ನಿಮ್ಮ ಕುಟುಂಬವರೆಲ್ಲರ ಕೂಡಿ ಬರುವಿಕೆಯ ಕುರಿತು ಜ್ಞಾಪಿಸಿಕೊಳ್ಳಿರಿ. ಬಹುಶಃ ಅಲ್ಲಿ ತಲೆಯನ್ನು ಸರಿಯಾಗಿ ಬಾಚಿಕೊಳ್ಳದೆ ಮುಜುಗರ ತರುವ ರೀತಿಯಲ್ಲಿ ವರ್ತಿಸುವ Homer ಅಂಕಲ್ ಬಂದಿದ್ದಿರಬಹುದು. ಬಹುಶಃ Mabel ಅಂಟಿ ಬಂದಿದ್ದಿರಬಹುದು—Mabel ಅಂಟಿ, ಇತರ ಜನರ ಭಾವನೆಗಳಿಗೆ ನೋವಾದರೂ ಚಿಂತೆಯಿಲ್ಲವೆಂದು ಯಾವಾಗಲೂ ತನ್ನ ಮನಸ್ಸಿಗೆ ತೋಚಿದ್ದನ್ನೇ ಮಾತಾಡುವವಳು. ಬಹುಶಃ ನೀವು ಪ್ರತಿ ರಾತ್ರಿಯಲ್ಲಿಯೂ ಪ್ರಾರ್ಥಿಸಿ ಇಂದಲ್ಲಾ ನಾಳೆ ತಮ್ಮ ಜೀವಿತಗಳನ್ನು ಬದಲಾಯಿಸಿಕೊಳ್ಳುವರೆಂದು ನಿರೀಕ್ಷಿಸುವ, ಆ ತಿದ್ದಲಾಗದಷ್ಟು ಕೆಟ್ಟುಹೋಗಿರುವಂತಹ ಸೋದರ ಸಂಬಂಧಿಗಳು ಬಂದಿದ್ದಿರಬಹುದು. ಖಂಡಿತವಾಗಿಯೂ, ನಿಮ್ಮ ಅಜ್ಜಿಯನ್ನು ಗುದ್ದಿಕೊಂಡು ಓಡಾಡುವ ನಿಮ್ಮ ಸಹೋದರಿಯರ ಅಥವಾ ಸಹೋದರರ ಪುಂಡ ಮಕ್ಕಳಿಲ್ಲದೆ ಯಾವ ಕುಟುಂಬ ಕೂಡಿಬರುವಿಕೆಯು ಪೂರ್ಣವಾಗುವದಿಲ್ಲವಷ್ಟೆ. ಬಹುತೇಕ ಕುಟುಂಬಗಳ ಕೂಡಿಬರುವಿಕೆಯಲ್ಲಿಯೂ ಕನಿಷ್ಠ ಕೆಲವರಾದರೂ ತಮ್ಮದೇ ಆದ ವಿಶಿಷ್ಟ ಗುಣ ಹೊಂದಿರುವ ಕುಟುಂಬ ಸದಸ್ಯರಿರುತ್ತಾರೆ. ಹೇಗಿದ್ದರೂ, ಊಟದ ವಿಷಯಕ್ಕೆ ಬಂದಾಗ, ಈ ಗುಂಪಿನ ಜನರು ಸಹ ಮಿಕ್ಕವರೆಲ್ಲರ ಸಂಗಡ ಕುಳಿತು ಭೋಜನವನ್ನು ಆನಂದಿಸುವಂತೆ ಆಮಂತ್ರಿಸಲಾಗುತ್ತದೆ.

## ಸಮತೋಲನವನ್ನು ಹುಡುಕುವದು (14:13-23)

ಈ ವಾಕ್ಯಭಾಗವು ಮತ್ತೊಬ್ಬ ಸಹೋದರ ಅಥವಾ ಸಹೋದರಿಯು ಅನುಮೋದಿಸುವದಿಲ್ಲವೆಂಬ ಏಕೈಕ ಕಾರಣಕ್ಕಾಗಿ ಒಂದು ಕಾರ್ಯವು ಮಾಡಲ್ಪಡುವದನ್ನು ಖಂಡಿಸುವದಿಲ್ಲ. ದಶಕಗಳ ಕಾಲ ಬೋಧನೆ ಮಾಡಿದ ಅನುಭವದ ಬಳಿಕ, ನಾನು ನಿಮಗೆ ಹೇಳಬಲ್ಲದ್ದೇನೆಂದರೆ ಒಂದು ಸಭೆಯಲ್ಲಿ ಏನೇ ಮಾಡಲ್ಪಟ್ಟರೂ (ಅಥವಾ ಮಾಡದಿದ್ದರೂ) ಸರಿಯೇ, ಅದನ್ನು ಇಷ್ಟ ಪಡದಿರುವ ಕನಿಷ್ಠ ಒಬ್ಬ ಸದಸ್ಯನಾದರೂ ಇದ್ದೇ ಇರುತ್ತಾನೆ

ಎಂಬದೆ. ಯಾವನಾದರೂ "ಇಷ್ಟ ಪಡದಿರುವ" ಒಂದನ್ನು ಅಳಿಸಿ ಹಾಕುವದೆಂದರೆ ಸಭೆಯ ಕೆಲಸವನ್ನು ಸ್ತಂಭನಗೊಳಿಸಿದಂತಾಗುತ್ತದೆ.

ಸಮತೋಲನದ ಅಗತ್ಯವಿರುತ್ತದೆ. ಕೆಲವು ನಕಾರಾತ್ಮಕ ಹೇಳಿಕೆಗಳಿಗೆ ಒಂದು ಉತ್ತಮ ಕೆಲಸವನ್ನು ನಿಲ್ಲಿಸುವಂತೆ ಅನುಮತಿಸಬಾರದು. ಅದೇ ವೇಳೆಯಲ್ಲಿ, ನಾವು ಇತರರ ಮನವರಿಕೆಗಳ ವಿಷಯದಲ್ಲಿ ಸಂವೇದನೆಯುಳ್ಳವರಾಗಿ ಅವರು ತಮ್ಮ ಮನಸ್ಸಾಕ್ಷಿಗೆ ವಿರುದ್ಧವಾಗಿ ಹೋಗುವದಕ್ಕೆ ಕಾರಣವಾಗುವ ಯಾವದನ್ನೇ ಆಗಲಿ ಮಾಡದಿರಲು ಪ್ರಯತ್ನಿಸಬೇಕು. ನಾನು ಸೇವೆ ಸಲ್ಲಿಸಿರುವ ಪ್ರತಿಯೊಂದು ಸಭೆಯಲ್ಲಿಯೂ, ಒಂದಿಲ್ಲಾ ಒಂದು ಚಟುವಟಿಕೆಯಲ್ಲಿ ಅವರು ಮನಸ್ಸಾಕ್ಷಿಪೂರ್ವಕವಾಗಿ ಭಾಗಿಯಾಗುವದಕ್ಕೆ ಸಾಧ್ಯವಾಗದಂತಹ ಕೆಲವರು ಇರುತ್ತಿದ್ದರು. ಅವರು ಆ ಕಾರ್ಯಕ್ರಮದಲ್ಲಿ ಭಾಗಿಗಳಾಗಲೇಬೇಕು ಎಂದು ನಾವು ಅವರನ್ನು ಒತ್ತಾಯಿಸುತ್ತಿರಲಿಲ್ಲ, ಮತ್ತು ಅವರು ಅದನ್ನು ಒಂದು ದೊಡ್ಡ ವಿವಾದಾಂಶವಾಗಿ ಮಾಡುತ್ತಿರಲಿಲ್ಲ. ಅವರು ತಮ್ಮ ಮನಸ್ಸಾಕ್ಷಿಗೆ ವಿರುದ್ಧವಾಗಿ ನಡೆಯದಿರುವದಕ್ಕಾಗಿಯಷ್ಟೆ ಅವರು ಅದರಲ್ಲಿ ಭಾಗವಹಿಸಲಿಲ್ಲ. ನಾವು ಮನಸ್ಸಾಕ್ಷಿಪೂರ್ವಕವಾಗಿರುವ ಮತ್ತು ಕೇವಲ ಕಲಹಪ್ರಿಯರಾಗಿರುವ ಸಹೋದರರ ನಡುವೆ ವ್ಯತ್ಯಾಸವನ್ನು ಗುರುತಿಸತಕ್ಕದ್ದು. ಇದು ಯಾವಾಗಲೂ ಅಷ್ಟೊಂದು ಸುಲಭವಾಗಿರುವದಿಲ್ಲ. ಕೆಲ ಸಮಯಗಳಲ್ಲಿ, ನಾವು ಮೊಣಕಾಲುಗಳನ್ನೂರಿ ಜ್ಞಾನಕ್ಕಾಗಿ ದೇವರನ್ನು ಬೇಡಿಕೊಳ್ಳಬೇಕಾದ ಅಗತ್ಯವಿರುವದು (ನೋಡಿರಿ ಯಾಕೋಬ 1:5).

## ಒಟ್ಟಾರೆಯಾಗಿ ಕ್ರೈಸ್ತತ್ವವು ಏನಾಗಿರುತ್ತದೆ (14:13-18)

14:13-18ರಲ್ಲಿ, ಪೌಲನು ಚರ್ಚೆಯನ್ನು ಒಂದು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಾನೆ. ತತ್ಪರಿಣಾಮವಾಗಿ ಆತನು ಹೇಳಿದ್ದೇನೆಂದರೆ, ನಮ್ಮ ಹಿತಾಸಕ್ತಿಯು ಮಾಂಸವನ್ನು ತಿನ್ನುವುದು ಅಥವಾ ತಿನ್ನದಿರುವದರ ಕುರಿತಾದದ್ದಲ್ಲ. ಬದಲಾಗಿ, ಕ್ರೈಸ್ತತ್ವವು ಏನಾಗಿದೆಯೆಂದರೆ . . .

ಆತ್ಮೀಕವಾಗಿ ಬಲಹೀನನಾಗಿರುವ ಸಹೋದರ ಬಗ್ಗೆ ಕಳಕಳಿ ಹೊಂದಿರುವದು (14:13, 14).
ಪ್ರೀತಿಯನ್ನು ತೋರ್ಪಡಿಸುವದು (14:15a).
"ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ" ಅವರನ್ನು ನಾವು ಹೇಗೆ ನಡಿಸಿಕೊಳ್ಳುತ್ತೇವೆಂಬುದರ ಕುರಿತಾಗಿದೆ (14:15b).
ನಮ್ಮ ನಡವಳಿಕೆಗಳು ಸಭೆಯ ಕುರಿತಾಗಿ ಹೊರಗಿನವರಲ್ಲಿ ಉಂಟಾಗುವ ಅಭಿಪ್ರಾಯಗಳ ಮೇಲೆ ಹೇಗೆ ಪರಿಣಾಮ ಬೀರುತ್ತವೆಂಬುದು (14:16, 18).
ನಮಗೆ ಯಾವದು ಅತ್ಯಂತ ಪ್ರಾಮುಖ್ಯವಾದದ್ದು (14:17).
ಕ್ರಿಸ್ತನ ಸೇವೆ ಮಾಡುವದು (14:18).

ಪೌಲನ ಬುದ್ಧಿವಾದಗಳು ಭಾವೋದ್ವೇಗಗಳನ್ನು ತಣ್ಣಗಾಗಿಸಲಿಲ್ಲವೆಂದರೆ, ಬೇರೆ ಇನ್ನಾವುದೂ ತಣ್ಣಗಾಗಿಸಲಾರದು. ಆತನ ಮಾತುಗಳು ಸಮಾಧಾನವನ್ನು ಉಂಟು

ಮಾಡಲಿಲ್ಲವಾದರೆ, ನಮ್ಮ ಹೃದಯಗಳಲ್ಲಿ ಏನೋ ಇಚ್ಛಾಪೂರ್ವಕವಾದ ತಪ್ಪಿದೆ ಎಂದಾಗುತ್ತದೆ.

## ಒಳ್ಳೇದನ್ನು ಕೆಟ್ಟದ್ದೆಂದು ಹೇಳುವದು (14:16)

ಒಂದು "ಒಳ್ಳೇಯ" ಸಂಗತಿಯು "ಕೆಟ್ಟದ್ದು" ಎಂದು ಹೇಳಲ್ಪಡಬಹುದು. ಒಂದು ದೃಷ್ಟಾಂತವು ನನ್ನ ನೆನಪಿಗೆ ಬರುತ್ತದೆ.[95] ಅಮೆರಿಕದ ಒಬ್ಬ ಯುವತಿಯು ಇನ್ನೊಂದು ದೇಶದಲ್ಲಿನ ಒಂದು ಸಭೆಗೆ ಸಹಾಯ ಮಾಡುವದಕ್ಕಾಗಿ ಹೋಗಿದ್ದಳು. ಅಮೆರಿಕದಲ್ಲಿ, ಬೇಸ್.ಬಾಲ್ ಕ್ರೀಡೆಯನ್ನು "ರಾಷ್ಟ್ರೀಯ ಕಾಲಹರಣ" ಎಂದು ಕರೆಯಲಾಗುತ್ತದೆ, ಆದ್ದರಿಂದ ಆ ಯುವತಿಯು ಸಭೆಯಲ್ಲಿ ಬೇಸ್.ಬಾಲ್ ಆಟವನ್ನು ಏರ್ಪಡಿಸುವದಕ್ಕೆ ತೀರ್ಮಾನಿಸಿದಳು. ಅವರು ಆಟವಾಡುತ್ತಿರುವ ವೇಳೆ, ಸಭೆಯ ಒಬ್ಬ ಹಿರಿಯನು ಅವರನ್ನು ನೋಡಿದನು ಮತ್ತು ಆ ಯುವತಿಯನ್ನು ಪಕ್ಕಕ್ಕೆ ಕರೆದನು. ಆತನು ಆ ಸೇವಕಳಿಗೆ ಹೇಳಿದ್ದೇನೆಂದರೆ ಅವರ ದೇಶದಲ್ಲಿ ಬೇಸ್.ಬಾಲ್ ಜೂಜಾಟದೊಂದಿಗೆ ಬಹಳ ನಿಕಟ ಸಂಬಂಧ ಹೊಂದಿರುವದರಿಂದ ಕ್ರೈಸ್ತರು ಆ ಆಟವನ್ನು ಆಡುವದಿಲ್ಲ ಎಂದು ಹೇಳಿದನು. ಆ ಯುವತಿಯು ಕ್ಷಮೆಯನ್ನು ಕೋರಿದಳು ಮತ್ತು ಮಕ್ಕಳಿಗೋಸ್ಕರ ಬೇರೆ ಚಟುವಟಿಕೆಗಳನ್ನು ಏರ್ಪಡಿಸಿದಳು.

## ನೆಲಸಮಗೊಳಿಸುವವನೋ ಅಥವಾ ಕಟ್ಟುವವನೋ? (14:20)

"ದೇವರು ಕಟ್ಟಿದ್ದನ್ನು ನೀನು ಆಹಾರದ ನಿಮಿತ್ತವಾಗಿ ಕೆಡವಬೇಡ" (14:20) ಎಂಬ ಬುದ್ಧಿವಾದವನ್ನು ನಾನು ಓದುವಾಗ, ಮೊದಲ ಶತಮಾನದ ಮಾಂಸ ತಿನ್ನುವಂತಹ ಕ್ಷುಲ್ಲಕವಾದ "ವಿವಾದಾಂಶಗಳ" ಕಾರಣದಿಂದಾಗಿ ಸಭೆಗಳನ್ನು ಛಿದ್ರಗೊಳಿಸಿರುವ ಕೆಲವರು ನನ್ನ ನೆನಪಿಗೆ ಬರುತ್ತಾರೆ: ಅಭಿಪ್ರಾಯದಲ್ಲಿನ ಭೇದಗಳಿಂದಾಗಿ, ಮನಸ್ಸಿಗೆ ನೋವುಗಳುಂಟಾದ್ದರಿಂದ, ಮತ್ತು ಊಹಿಸಿಕೊಂಡ ಸಣ್ಣಪುಟ್ಟ ವಿಚಾರಗಳು, ಮತ್ತು ಸಂಬಂಧಿತ ಕ್ಷುಲ್ಲಕ ವಿಚಾರಗಳು. ಎಷ್ಟು ಹೃದಯ ವಿದ್ರಾವಕವಾದದ್ದು!

ಕಟ್ಟುವದಕ್ಕಿಂತಲೂ ಛಿದ್ರಗೊಳಿಸುವದು ಯಾವಾಗಲೂ ಬಹಳ ಸುಲಭವಾಗಿರುತ್ತದೆ. ಒಂದು ಮಗುವಿಗೆ ಸುತ್ತಿಗೆಯನ್ನು ಕೊಟ್ಟು ಮನೆಯೊಂದನ್ನು ನಾಶಮಾಡು ಎಂದರೆ ಆತನು ಕೆಲವೇ ನಿಮಿಷಗಳಲ್ಲಿ ಸಾಕಷ್ಟು ನಷ್ಟವನ್ನು ಉಂಟು ಮಾಡಿರಬಲ್ಲನು. ಆತನಿಗೆ ಒಂದು ಸುತ್ತಿಗೆಯನ್ನು ಕೊಟ್ಟು ಮನೆಯೊಂದನ್ನು ಕಟ್ಟು ಎಂದು ಹೇಳಿರಿ, ಮತ್ತು ಆತನಿಗೆ ನೀವು ಎಷ್ಟೇ ಕಾಲಾವಕಾಶ ಕೊಟ್ಟರೂ ಆತನಿಗೆ ಆ ಕೆಲಸವನ್ನು ಮಾಡುವದಕ್ಕೆ ಸಾಧ್ಯವೇ ಇಲ್ಲ. ಸಭೆಯಲ್ಲಿ ಈಗಾಗಲೇ ತಪ್ಪುಗಳನ್ನು ಕಂಡು ಹಿಡಿದು ಛಿದ್ರಗೊಳಿಸುವ "ತಲಾಂತುಗಳನ್ನು" ಹೊಂದಿರುವಂತಹ ಅತ್ಯಧಿಕ ಪ್ರಮಾಣದ ಜನರಿದ್ದಾರೆ. ದೇವರ ಸಹಾಯದೊಂದಿಗೆ ನಾನು ಒಬ್ಬ "ಕಟ್ಟುವವನು—ಮೇಲೆತ್ತುವವನು" ಆಗಿರುವೆನೆಂದು ನಿಶ್ಚಯಿಸಿಕೊಳ್ಳಿರಿ.

---

**ಅಡಿಟಿಪ್ಪಣಿಗಳು**

[1]ರೋಮಾ 14 ಯೆಹೂದ್ಯರನ್ನು ಮತ್ತು ಅನ್ಯಜನರನ್ನು ಉಲ್ಲೇಖಿಸುವದಿಲ್ಲವಾದ್ದರಿಂದ, ಬಹುತೇಕರು ಏಕೆ ಆ ಅಧ್ಯಾಯದ ವಿವಾದಾಂಶಗಳನ್ನು ಯೆಹೂದ್ಯರು Vs ಅನ್ಯಜನರ ವಿವಾದಾಂಶಗಳೆಂದು ಕಾಣುತ್ತಾರೆಂದು ಒಬ್ಬನು ಚಕಿತಗೊಳ್ಳಬಹುದು. ಅಧ್ಯಾಯದ ಅಂತ್ಯದಲ್ಲಷ್ಟೆ ಪೌಲನು "ದೃಢವಿಲ್ಲದ" ಮತ್ತು "ದೃಢವಿರುವ" ಸಹೋದರರ ಬಗ್ಗೆ

ಮಾತಾಡುವದನ್ನು ನಿಲ್ಲಿಸಿ ಯೆಹೂದ್ಯರು ಮತ್ತು ಅನ್ಯಜನರ ಬಗ್ಗೆ ಮಾತಾಡಿದನು (15:8-12). [2]ಈ ನಿಲುವಿನಲ್ಲಿ ನಂಬಿಕೆಯಿರುವವರು 14:13ನ್ನು ಉಲ್ಲೇಖಿಸುತ್ತಾರೆ, ಅಲ್ಲಿ ಪೌಲನು "ಇನ್ನು *ಮೇಲೆ* ಒಬ್ಬರ ವಿಷಯದಲ್ಲೊಬ್ಬರು ತೀರ್ಪುಮಾಡದೆ ಇರೋಣ" ಎಂದು ಹೇಳುತ್ತಾನೆ. ಇದರಿಂದ ರೋಮಾಪುರದಲ್ಲಿದ್ದವರು ಮುಂಚೆ ತೀರ್ಪು ಮಾಡುತ್ತಿದ್ದವರಾಗಿದ್ದರೆಂಬುದು ಪೌಲನಿಗೆ ತಿಳಿದಿತ್ತು ಎಂಬುದನ್ನು ಈ ಪರಿಭಾಷೆಯು ತೋರ್ಪಡಿಸುತ್ತದೆಂದು ಅವರು ತೀರ್ಮಾನಕ್ಕೆ ಬರುತ್ತಾರೆ. ಹೇಗೂ, ಗಮನಿಸತಕ್ಕದ್ದೇನೆಂದರೆ, ಬೋಧನೆಯು ಒಟ್ಟಾರೆಯಾಗಿ ಸಾಮಾನ್ಯ ಅರ್ಥದಲ್ಲಿ ಹೇಳಲ್ಪಟ್ಟದ್ದೆಂಬುದನ್ನು ಸೂಚಿಸುವದಕ್ಕೆ ಪೌಲನು ಆ ಬುದ್ಧಿವಾದದಲ್ಲಿ ತನ್ನನ್ನು ಸಹ ಸೇರಿಸಿಕೊಂಡು ("ಇನ್ನು ಮೇಲೆ ಒಬ್ಬರ ವಿಷಯದಲ್ಲೊಬ್ಬರು ತೀರ್ಪುಮಾಡದೆ ಇರೋಣ") ಹೇಳುತ್ತಾನೆ. [3]"Kosher" (ಕೋಷರ್) ಎಂಬುದು "ಸಮರ್ಪಕ" ಎಂಬುದಕ್ಕಾಗಿರುವ ಇಬ್ರಿಯ כָּשֵׁר ಪದದ ಅನುವಾದವಾಗಿದೆ. ಅದು ಯೆಹೂದಿ ಧರ್ಮಶಾಸ್ತ್ರದ ವಿಧಿಗಳಿಗನುಗುಣವಾಗಿ ಸಿದ್ಧಪಡಿಸಲ್ಪಡುತ್ತಿದ್ದ ಆಹಾರವನ್ನು ಸೂಚಿಸುತ್ತದೆ. [4]ಇಂದು ಕೆಲವು ಸಾರಿ ಕೇಳಿಸಿಕೊಳ್ಳಲ್ಪಡುವ ಪದವೆಂದರೆ "vegan" (ಶಾಕಾಹಾರಿ): ಮಾಂಸ, ಹಾಲಿನ ಉತ್ಪನ್ನಗಳು, ಅಥವಾ ಮೊಟ್ಟೆಗಳನ್ನು ಸೇವಿಸದ ಒಬ್ಬ ವ್ಯಕ್ತಿ. ಹೆಚ್ಚು ಪರಿಚಿತವಿರುವ ಪದವೆಂದು "ಸಸ್ಯಹಾರಿ." [5]Richard A. Batey, *The Letter of Paul to the Romans*, The Living Word Commentary (Austin, Tex.: R. B. Sweet Co., 1969), 165. [6]ರೋಮಾ 14ರಲ್ಲಿ ಹಲವಾರು ತರ್ಜುಮೆಗಳು ಮತ್ತು ಭಾವಾನುವಾದಗಳು "ಅಭಿಪ್ರಾಯ" ಅಥವಾ "ಅಭಿಪ್ರಯಗಳು" ಎಂಬ ಪದವನ್ನು ಬಳಸುತ್ತವೆ. ಉದಾಹರಣೆಗೆ, 5ನೇ ವಚನದಲ್ಲಿ JBಯು "ಪ್ರತಿಯೊಬ್ಬರನ್ನು ಅವರವರ ಅಭಿಪ್ರಾಯ ಹಿಡಿದುಕೊಳ್ಳುವಂತೆ ಮುಕ್ತವಾಗಿ ಬಿಟ್ಟು ಬಿಡಬೇಕು." [7]G. Schrenk, "*dialogismós*," in *Theological Dictionary of the New Testament*, ed. Gerhard Kittel and Gerhard Friedrich, trans. and abr. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 156. [8]ಈ ಸೂಕ್ತಿಯು ಅನೇಕ ಸಾರಿ Thomas Campbell ಹೇಳಿದ್ದೆಂದು ಹೇಳಲಾಗುತ್ತದೆ, ಮತ್ತು ಅದರ ಭಾವೋದ್ವೆಗಗಳು ಆತನ *Declaration and Address* (1809) ರಲ್ಲಿ ವಿವರಿಸಲ್ಪಟ್ಟಿರುತ್ತವೆ. Campbell ಪ್ರೊಟೆಂಸ್ಟೆಂಟ್ ಸುಧಾರಣೆಯಿಂದ ಆ ಸೂಕ್ತಿಯನ್ನು ಆಯ್ದುಕೊಂಡಿರುವಂತೆ ತೋರುತ್ತದೆ. ಅಂತಹದ್ದೇ ಘೋಷವಾಕ್ಯಗಳು 17ನೇ ಶತಮಾನದಷ್ಟು ಹಿಂದೆಯೇ ಕಂಡು ಬಂದಿದ್ದವು. [9]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 453. [10]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 511 (emphasis added).

[11]ಹಲವಾರು ತರ್ಜುಮೆಗಳು ಮತ್ತು ಭಾವಾನುವಾದಗಳು 14ನೇ ಅಧ್ಯಾಯದ ನಂತರ ಭಾಗದಲ್ಲಿ "ಮನಸ್ಸಾಕ್ಷಿ" ಎಂಬ ಪದವನ್ನು ಬಳಸುತ್ತವೆ. ಉದಾಹರಣೆಗೆ, NEBಯು 22ನೇ ವಚನದಲ್ಲಿ; ABಯು, 20, 21, ಮತ್ತು 23 ವಚನಗಳಲ್ಲಿ; ಮತ್ತು Phillips, 20 ಮತ್ತು 23 ವಚನಗಳಲ್ಲಿ "ಮನಸ್ಸಾಕ್ಷಿ" ಎಂಬ ಪದವನ್ನು ಹೊಂದಿವೆ. [12]Vine, 163. [13]ಈ ಪರಿಚ್ಛೇದದಲ್ಲಿ ಗಮನಿಸಲ್ಪಟ್ಟ ಪ್ರಕಾರ, ರೋಮಾ 14ರಲ್ಲಿನ ಇತರ ವಚನಗಳು ಗ್ರೀಕ್ ವಾಕ್ಯದಲ್ಲಿ κρίνω (*krinō*, "ತೀರ್ಪುಮಾಡು") ಎಂಬ ಪದದ ರೂಪಗಳನ್ನು ಹೊಂದಿದೆ, ಹೀಗಿದ್ದರೂ ಅವುಗಳು NASBಯಲ್ಲಿ "ತೀರ್ಪು ಮಾಡು" ಎಂದು ಅನುವಾದಿಸಲ್ಪಟ್ಟಿರುವದಿಲ್ಲ. [14]Vine, 336. [15]Jimmy Allen, *Romans, The Clearest Gospel of All* (Searcy, Ark.: By the author, 2005), 287. [16]Vine, 562. [17]ಇದು ಪೌಲನು ಬೇರೆ ಸ್ಥಳಗಳಲ್ಲಿ ಉಪದೇಶಿಸಿದ್ದನ್ನು ನಿರಾಕರಣೆ ಮಾಡುವದಿಲ್ಲ: ನಾವು ಕೆಲವು ಸಾರಿ ಸಿದ್ಧಾಂತಿಕ ದೋಷಗಳು (16:17) ಮತ್ತು ಅನೈತಿಕಯ (1 ಕೊರಿಂಥ 5) ವಿಷಯದಲ್ಲಿ ವಿವೇಚನಾಯುಕ್ತ ನಿರ್ಣಯಗಳನ್ನು ಮಾಡಬೇಕಾಗುತ್ತದೆ. [18]McCord ತರ್ಜುಮೆಯಲ್ಲಿ "ಪ್ರತಿ ದಿನವನ್ನು ಘನವೆಂದು ಎಣಿಸುತ್ತಾನೆ" ಎಂದಿರುತ್ತದೆ. [19]Vine, 207 (ಒತ್ತಿ ಹೇಳಿದ್ದು ನನ್ನದು). [20]1 ಕೊರಿಂಥ 16:1, 2ರಲ್ಲಿ, ಕೊರಿಂಥದಲ್ಲಿನ ಕ್ರೈಸ್ತರು ಆರಾಧನೆಗೋಸ್ಕರ ವಾರದ ಮೊದಲನೆಯ ದಿನದಂದು ಕೂಡಿ ಬರುತ್ತಿದ್ದರೆಂದು ಪೌಲನು ಅಂದುಕೊಂಡಿದ್ದನು. (ಅವರು ಹಾಗೆ ಕೂಡಿ ಬಂದಾಗ, ಪೌಲನು ಅವರಿಗೆ ವಿಶೇಷ ಕಾಣಿಕೆಯನ್ನು ಸಂಗ್ರಹಿಸಿಬೇಕೆಂದು ಹೇಳಿದನು.)

[21]ಕೆಲವರು ಕರ್ತನ ಭೋಜನವನ್ನು ಭಾನುವಾರವಲ್ಲದೆ ಬೇರೆ ದಿನಗಳಲ್ಲಿ ಆಚರಿಸುವದಕ್ಕೆ ರೋಮಾ 14:5ನ್ನು ಒಂದು ನೆಪವಾಗಿ ಬಳಸಿಕೊಂಡಿರುತ್ತಾರೆ. ವಾರದ ಮೊದಲ ದಿನವಲ್ಲದೆ ಬೇರೆ ಯಾವದೇ ದಿನದಲ್ಲಿ ಕರ್ತನ ಭೋಜನವನ್ನು ಆಚರಿಸುವದಕ್ಕೆ ಬೈಬಲ್.ನಿಂದ ಯಾವದೇ ಅಧಿಕಾರವು ಕೊಡಲ್ಪಟ್ಟಿರುವದಿಲ್ಲ. [22]1 ಕೊರಿಂಥ 13:7ರಲ್ಲಿನ "ಎಲ್ಲವನ್ನೂ ನಂಬುತ್ತದೆ" ಎಂಬುದರಲ್ಲಿನ ಸೂಚ್ಯಾರ್ಥಗಳಲ್ಲಿ ಇದು ಸಹ ಒಂದಾಗಿದೆಯೆಂದು ಕೆಲವರು ಭಾವಿಸುತ್ತಾರೆ. [23]ಗ್ರೀಕ್.ನ ಕೆಲವು ಹಸ್ತಪ್ರತಿಗಳಲ್ಲಿ ಆಚರಿಸದವನು ಎಂದು ಉಲ್ಲೇಖಿಸುವದರಿಂದ, KJVಯು "ದಿನವನ್ನು ಮನ್ನಣೆ ಮಾಡದವನು, ಅದನ್ನು ಕರ್ತನಿಗಾಗಿಯೇ ಮನ್ನಣೆ ಮಾಡುವದಿಲ್ಲ" ಎಂದು ಸೇರ್ಪಡೆಗೊಳಿಸಿರುತ್ತದೆ. (ನೋಡಿರಿ NKJV). [24]"ತಿನ್ನದವನು" ಎಂಬುದು

ಉಪವಾಸವನ್ನು (ಆಹಾರವಿಲ್ಲದೆ ಇರುವದು) ಸೂಚಿಸುತ್ತದೆಂದು ಭವಿಸುತ್ತಾರೆ, ಆದರೆ "ತಿನ್ನದವನು" ಎಂಬುದು ಮಾಂಸ ಸೇವನೆ ತ್ಯಜಿಸುವವನನ್ನು ಸೂಚಿಸುತ್ತದೆಂಬುದು ಸನ್ನಿವೇಶದದಿಂದ ತೋರಿಬರುತ್ತದೆ. [25]ಇನ್ನು ಅನೇಕ ಉಪದೇಶಕರು ಹಾಗೂ ಬೋಧಕರ ಜೊತೆಯಲ್ಲಿ, ನಾನು ಸಹ ಈ ವಚನವನ್ನು ಈ ವಿಧದಲ್ಲಿ ಉಪಯೋಗಿಸಿರುತ್ತೇನೆ. ರೋಮಾ 14:7ರಲ್ಲಿ, JBಯು ಹೀಗೆ ಹೇಳುತ್ತದೆ, ''ನಮ್ಮೊಬ್ಬೊಬ್ಬರ ಜೀವನವು ಮತ್ತು ಮರಣವು *ಮತ್ತೊಬ್ಬರ ಮೇಲೆ ಅದರ ಪ್ರಭಾವ ಹೊಂದಿರುತ್ತದೆ''* (ಒತ್ತಿ ಹೇಳಿದ್ದು ನನ್ನದು). [26]Leon Morris, *The Epistle to the Romans* (Grand Rapids, Mich.: Wm. B. Eerdmans Publishing Co., 1988), 481. [27]KJVಯಿಂದ ಉಪಯೋಗಿಸಲ್ಪಟ್ಟಿರುವ ಗ್ರೀಕ್ ವಾಕ್ಯವು 7ನೇ ವಚನ ಅಂತ್ಯದಲ್ಲಿ ಪೂರ್ಣ ವಿರಾಮ ಹೊಂದಿರುತ್ತದೆ. ಬಹು ಇತ್ತೀಚಿನ ತರ್ಜುಮೆಗಳಿಂದ ಉಪಯೋಗಿಸಲ್ಪಟ್ಟಿರುವ ಗ್ರೀಕ್ ವಾಕ್ಯದಲ್ಲಿ 7ನೇ ವಚನದ ಅಂತ್ಯದಲ್ಲಿ ಅಲ್ಪ ವಿರಾಮವಿದ್ದು ಅದನು 7 ಮತ್ತು 8 ವಚನಗಳನ್ನು ಸಂಬಂಧಗೊಳಿಸುವದಾಗಿದೆ. [28]KJVಯಲ್ಲಿ "ಗಾಗಿ" ಎಂಬುದರ ಬದಲಾಗಿ "ಗೆ" ಎಂದಿರುತ್ತದೆ. ಈ ಪ್ರತ್ಯೆಯಗಳು ಚತುರ್ಥೀ ವಿಭಕ್ತಿಯ ಪದಗಳ ಒಂದು ಸರಣಿಗೆ ಹೊಂದಿಕೆಯಾಗುವ ಉದ್ದೇಶದಿಂದ ಅನುವಾದಕರಿಂದ ಒದಗಿಸಲ್ಪಟ್ಟಿರುತ್ತವೆ. "ಗೆ" ಎಂಬ ಪದಕ್ಕಿಂತಲೂ "ಗಾಗಿ" ಎಂಬುದು ಸನ್ನಿವೇಶಕ್ಕೆ ಸರಿಯಾಗಿ ಹೊಂದಿಕೆಯಾಗುವಂತೆ ತೋರುತ್ತದೆ. [29]ಪೌಲನು 13 ಮತ್ತು 15 ವಚನಗಳಲ್ಲಿ ಈ ವಿಚಾರವನ್ನು ವಿಸ್ತಾರವಾಗಿ ವಿವರಿಸುತ್ತಾನೆ. [30]Charles R. Swindoll, *The Grace Awakening* (Anaheim, Calif.: Insight for Living, 1990), 158 (emphasis added).

[31]4ನೇ ವಚನದಲ್ಲಿ, "ನಿಲ್ಲಿಸಲ್ಪಡುವನು" ಎಂಬದರ ಅರ್ಥವು "ಬೀಳುವದಿಲ್ಲ" (ಅಂದರೆ, ಆತನು ದೇವರಿಂದ ಸ್ವೀಕರಿಸಿಕೊಳ್ಳಲ್ಪಡುವನು) ಎಂದಾಗಿದೆ, ಮತ್ತು ಅದು ಇಲ್ಲಿ ಸಹ ಅದೇ ಅರ್ಥವನ್ನು ಕೊಡಬಹುದಾಗಿದೆ. ಹೇಗೂ, ನಂತರದ ವಚನದ ಸನ್ನಿವೇಶದ ಬೆಳಕಿನಲ್ಲಿ, ಅದು ಹೆಚ್ಚು ಸಂಭಾವ್ಯವಾಗಿ ಇನ್ನೇನು ತೀರ್ಪನ್ನು ಪ್ರಕಟಿಸಲಿರುವ ನ್ಯಾಯಾಧಿಪತಿಯೊಬ್ಬನ ಸಮ್ಮುಖದಲ್ಲಿ ನಿಂತಿರುವದನ್ನು ಸೂಚಿಸುತ್ತಿರಬಹುದಾಗಿದೆ. [32]Vine, 337-38. [33]ಈ ಉಲ್ಲೇಖನದ ಆರಂಭಿಕ ಮಾತುಗಳು ಯೆಶಾಯ 49:18ರಿಂದ ಬಂದವುಗಳಾಗಿರಬಹುದು. [34]Larry Deason, *''The Righteousness of God'': An Indepth Study of Romans*, rev. ed. (Clifton Park, N.Y.: Life Communications, 1989), 308. [35]William Barclay, *The Letter to the Romans*, rev. ed., The Daily Study Bible (Philadelphia: Westminster Press, 1975), 193. [36]ರೋಮಾ 14 ಅಭಿಪ್ರಾಯ ಸಂಬಂಧಿತ ವಿಚಾರಗಳ ಕುರಿತಾದದ್ದಾಗಿದೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು. [37]Quoted in Halford E. Luccock, *Preaching Values in the Epistles of Paul*, vol. 1, *Romans and First Corinthians* (New York: Harper & Brothers, 1959), 102. [38]Ibid. [39]Swindoll, *The Grace Awakening*, 49-50. [40]NEBಯಲ್ಲಿ "ಒಬ್ಬರನ್ನೊಬ್ಬರು *ತೀರ್ಪುಮಾಡುವದನ್ನು* ನಿಲ್ಲಿಸೋಣ . . . , ಆದರೆ ಈ ಸರಳವಾದ *ನಿರ್ಣಯವನ್ನು* ಮಾಡಿಕೊಳ್ಳೋಣ" (ಒತ್ತಿ ಹೇಳಿದ್ದು ನನ್ನದು).

[41]Vine, 441ರಲ್ಲಿ ಎರಡೂ ಪಡಗಳು ಒಂದೇ ಶಿರ್ಷಿಕೆಯಡಿಯಲ್ಲಿ ಪಟ್ಟಿ ಮಾಡಲ್ಪಟ್ಟಿವೆ. ಎರಡು ಪದಗಳು ಸಹ ಅರ್ಥದಲ್ಲಿ ಎಷ್ಟೊಂದು ಸಾಮ್ಯತೆಯನ್ನು ಹೊಂದಿವೆಯೆಂದರೆ NASBಯು ''ಅಡ್ಡಿ'' ಎಂಬದನ್ನು ಮೊದಲು ಮತ್ತು ನಂತರದಲ್ಲಿ "ಎಡತಡೆ" ಎಂದು ಹೊಂದಿದ್ದರೆ, ಅನೇಕ ತರ್ಜುಮೆಗಳು ಆ ಕ್ರಮವನ್ನು ಹಿಂದುಮುಂದು ಮಾಡಿರುತ್ತವೆ. [42]Jim McGuiggan ಹೀಗೆ ವ್ಯಾಖ್ಯಾನಿಸುತ್ತಾನೆ, "ಬಲಹೀನ ಆತ್ಮಗಳ ಮೇಲೆ ಪ್ರೀತಿಯಿಲ್ಲದ ನಿರ್ದಾಕ್ಷಿಣ್ಯವಾಗಿ ದಾಪುಗಾಲು ಹಾಕುತ್ತಾ ಹೋಗುವದು ಲಜ್ಜಾಸ್ಪದವಾದದ್ದು!" (Jim McGuiggan, *The Book of Romans*, Looking Into The Bible Series [Lubbock, Tex.: Montex Publishing Co., 1982], 401). [43]R. C. H. Lenski, *The Interpretation of St. Paul's Epistle to the Romans* (Minneapolis: Augsburg Publishing House, 1936), 832. [44]Vine, 441. [45]Allen, 285. [46]ಬೇರೆ ಬೇರೆ ತರ್ಜುಮೆಗಳಲ್ಲಿ ಈ ಎಲ್ಲಾ ಸಾಧ್ಯತೆಗಳು ಮತ್ತು ಇನ್ನಷ್ಟು ಸಾಧ್ಯತೆಗಳು ಪ್ರತಿಫಲನಗೊಂಡಿರುತ್ತವೆ. [47]Vine, 113, 649. [48]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: Inter-Varsity Press, 1994), 365. [49]Batey, 171. [50]Morris, 487.

[51]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 604. [52]Moo, 460. [53]"ನಡೆಯುವದು" ಎಂಬದು "ಜೀವಿಸುವದು" ಎಂಬದಕ್ಕಾಗಿ ಪೌಲನು ಬಳಸುವ ಆತನ ನೆಚ್ಚಿನ ಮಾತಾಗಿರುತ್ತದೆ. [54]Morris, 487. [55]Fritz Ridenour, ed., *How to Be a Christian Without Being Religious* (Glendale, Calif.: Regal Books, G/L Publications, 1967), 124. [56]Vine, 164. [57]Stott, 365. [58]ಪೌಲನು ಸಾಮಾನ್ಯವಾದ ಒಂದು ಭೋಜನವನ್ನು ಸೂಚಿಸುತ್ತಿರುವ ಹೊರತು "ಕುಡಿಯುವದೂ" ಎಂಬದನ್ನು ಇಲ್ಲಿ ಏಕೆ ಪರಿಚಯಿಸಿದನೆಂಬುದು ನಮಗೆ ಖಚಿತವಾಗಿ ತಿಳಿಯದು;

ಒಂದು ಭೋಜನ ಮಾಡುವ ವೇಳೆ ತಿನ್ನುವದು ಮತ್ತು ಕುಡಿಯುವದು ಅಮತರ್ಗತವಾದ ಭಾಗವಾಗಿರುತ್ತವೆ (14:21ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). [59]ಮತ್ತಾಯ 16:18, 19ರಲ್ಲಿ "ಸಭೆ" ಮತ್ತು "ರಾಜ್ಯ" ಎಂಬ ಪದಗಳು ಪರ್ಯಾಯವಾಗಿ ಬಳಸಲ್ಪಟ್ಟಿವೆ. ಪೌಲನು ಅಪರೂಪವಾಗಿ "ರಾಜ್ಯ" ಎಂಬ ಪದವನ್ನು ಬಳಸುತ್ತಾನೆ (ರೋಮಾಪುರದವರಿಗೆ ಪತ್ರಿಕೆಯಲ್ಲಿ ಈ ಒಂದು ಕಡೆಯಲ್ಲಿ ಮಾತ್ರವೇ ಆ ಪದವು ಕಾಣಿಸಿಕೊಳ್ಳುತ್ತದೆ); ಆತನು ಸಾಮಾನ್ಯವಾಗಿ ಸಭೇಯನ್ನು ಸೂಚಿಸಿ ಹೇಳಿದನು. ಬಹುಶಃ ಆತನು ಇಲ್ಲಿ ಒಬ್ಬ ವ್ಯಕ್ತಿಯ *ಹಕ್ಕುಗಳಿ*ಗಿಂತಲೂ ಕರ್ತನ *ಆಳ್ವಿಕೆಯು* (ರಾಜ್ಯವು) ಹೆಚ್ಚು ಪ್ರಾಮುಖ್ಯವಾದದ್ದು ಎಂಬುದನ್ನು ಒತ್ತಿ ಹೇಳುವದಕ್ಕಾಗಿ ಆ ಪದವನ್ನು ಬಳಸಿರಬಹುದಾಗಿದೆ. [60]"ನೀತಿಯೂ ಸಾಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ" ಎಂಬುದು ದೇವರು ನಮಗಾಗಿ ಮಾಡಿರುವ ಮತ್ತು ಮಾಡುತ್ತಿರುವ ಕಾರ್ಯವನ್ನು ಸೂಚಿಸುತ್ತಿರಬಹುದಾಗಿದೆ, ಆದರೆ ಸನ್ನಿವೇಶವು *ನಾವು* ಏನು ಮಾಡುವ ಅಗತ್ಯವಿದೆ ಎಂಬುದರ ಮೇಲೆ ಗಮನವನ್ನು ಹರಿಸುವಂತೆ ಕಾಣುತ್ತದೆ.

[61]ಇದು "ದೃಢವಿಲ್ಲದ" ಸಹೋದರರಿಂದ ಅನುಮೋದಿಸಲ್ಪಡುವದೆಂಬ ಅರ್ಥವನ್ನು ಕೊಡಬಹುದು, ಆದರೆ ಇಲ್ಲೊಂದು ವಿಸ್ತಾರವಾದ ಅನ್ವಯಿಕೆಯು ಅವಶ್ಯವಿರುವಂತೆ ತೋರುತ್ತದೆ. [62]*Oikodomē* ಯು 15:2ರಲ್ಲಿ "ಭಕ್ತಿವೃದ್ಧಿ" ಎಂದು ಅನುವಾದಿಸಲ್ಪಟ್ಟಿದೆ. [63]Vine, 194. [64]Allen, 288. [65]ಗ್ರೀಕ್ ವಾಕ್ಯದಲ್ಲಿ, "ಆಹಾರದ ಕಾರಣಕ್ಕಾಗಿ" ಎಂಬುದು ಆ ಪದಗುಚ್ಛಕ್ಕೆ ಒತ್ತು ಕೊಡುವ ಉದ್ದೇಶದಿಂದ ವಾಕ್ಯಸಾಲಿನ ಆರಂಭದಲ್ಲಿ ಇರಿಸಲ್ಪಟ್ಟಿದೆ. [66]Vine, 164. [67]ನಾವು ಮಾಡುವಂತದ್ದು ನಮ್ಮ ಜೊತೆ ಕ್ರೈಸ್ತರ ಮೇಲೆ ಪರಿಣಾಮ ಬೀರುತ್ತದೆಂಬ ವಾಸ್ತವಾಂಶದ ಮೇಲೆ ಪೌಲನ ಮುಖ್ಯ ಗಮನವಿತ್ತು: ನಾವು ಪರಸ್ಪರ ಭಕ್ತಿವೃದ್ಧಿ" ಮಾಡಬೇಕು (14:19); ನಾವು "ಯಾವನಿಗೋಸ್ಕರ ಕ್ರಿಸ್ತನು ಪ್ರಾಣಕೊಟ್ಟನೋ ಅವನನ್ನು . . . ಕೆಡಿಸಬಾರದು" (14:15). [68]"ನೋವುಂಟು ಮಾಡು" ಎಂಬುದು *proskomma* ಎಂಬ ಪದದಿಂದ ಬಂದದ್ದು (14:13ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). [69]21ನೇ ವಚನವು "ದ್ರಾಕ್ಷಾರಸ" ಎಂಬುದಕ್ಕೆ οἶνος (*oinos*) ಎಂಬ ಸಾಮಾನ್ಯವಾದ ಪದವನ್ನು ಬಳಸುತ್ತದೆ. ಆ ದಿನಗಳಲ್ಲಿ ಭೋಜನದ ವೇಳೆ ಇರುತ್ತಿದ್ದ ಸಾಮಾನ್ಯವಾದ ಪಾನಿಯ ಅಂದರೆ ನೀರು ಬೆರೆಸಲ್ಪಟ್ಟ ದ್ರಾಕ್ಷಾರಸವಾಗಿರುತ್ತಿತ್ತು. ಇದಕ್ಕೆ ಒಂದು ಕಾರಣವೆಂದರೆ ಆ ಕಾಲದಲ್ಲಿ ಶುದ್ಧವಾದ ಕುಡಿಯುವ ನೀರು ಯಾವಾಗಲೂ ಲಭ್ಯವಿರುತ್ತಿರಲಿಲ್ಲವೆಂಬುದೇ ಎಂದು ಕೆಲವರು ಊಹಾಕಲ್ಪನೆಗಳನ್ನು ಮಾಡುತ್ತಾರೆ. *Oinos* ಪದದ ಕುರಿತ ಒಂದು ಅನುಬಂದವು McGuiggan ರಲ್ಲಿ ಸೇರಿಸಲ್ಪಟ್ಟಿದೆ, 485-94. [70]Morris, 491.

[71]C. F. Keil, *The Book of Daniel*, trans. M. G. Easton, Biblical Commentary on the Old Testament (Grand Rapids, Mich.: Wm. B. Eerdmans Publishing Co., 1959), 80. [72]Richard Rogers, *Paid in Full: A Commentary on Romans* (Lubbock, Tex.: Sunset Institute Press, 2002), 192ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [73]"ನಿನ್ನ ಸ್ವಮನವರಿಕೆಯನ್ನು ಹೊಂದಿದವನಾಗಿರು" ಎಂಬದರ ಬದಲಾಗಿ, ಗ್ರೀಕ್ ವಾಕ್ಯದಲ್ಲಿ ಕೇವಲ "ನಿನ್ನಷ್ಟಕ್ಕೇ ಹೊಂದಿರು" ಎಂದಿರುತ್ತದೆ. [74]ರೋಮಾ 14:22ರ ಕಡೇ ಭಾಗವು ಈ ವಿಧದಲ್ಲಿ ಅರ್ಥನಿರೂಪಣೆ ಮಾಡಲ್ಪಡತಕ್ಕದ್ದೆಂದು ಕೆಲವರು ಯೋಚಿಸುತ್ತಾರೆ: "ತನ್ನ ಮನಸ್ಸಾಕ್ಷಿಯ ಪ್ರಕಾರವಾಗಿ ಜೀವಿಸುವವನು ಭಾಗ್ಯವಂತನು." [75]Morris, 492. [76]Coy Roper, "How Christians Can Disagree Without the Church Disintegrating," *Truth for Today* 10, no. 1 (June 1989): 39. [77]Stott, 368. ಯಾವದೇ ವಿವಾದಾಂಶದ ಮೇಲೆ ಯಾರು "ದೃಢವಿರುವವರು" ಮತ್ತು ಯಾರು "ದೃಢವಿಲ್ಲದವರು" ಎಂಬದು ಯಾವಾಗಲೂ ಸ್ಪಷ್ಟವಾಗಿರುವದಕ್ಕೆ ಸಾಧ್ಯವಿಲ್ಲವಾದ್ದರಿಂದ, ನಮ್ಮಲ್ಲಿ ಒಬ್ಬೊಬ್ಬರು ಸಹ ನಿರಂತರವಾಗಿ ತನ್ನ ನಂಬಿಕೆಗಳನ್ನು ದೇವರ ವಾಕ್ಯದೊಂದಿಗೆ ಹೋಲಿಕೆ ಮಾಡಿಕೊಳ್ಳಬೇಕು ಮತ್ತು ಆ ನಂಬಿಕೆಗಳನ್ನು ದೇವರ ಚಿತ್ತದ ಸನಿಹಕ್ಕೆ ತರಲು ಶ್ರಮಿಸತಕ್ಕದ್ದು. [78]Allen, 289. [79]Vine, 336. [80]ಈ ಪದಗುಚ್ಛ ಬಳಕೆಯು ಶಿರ್ಷಿಕೆಯಲ್ಲಿ ಸಹ ಉಪಯೋಗಿಸಲ್ಪಟ್ಟಿದ್ದು ಅದು Coy Roper, 35-39 ಮೇಲೆ ಆಧಾರವಾಗಿರುತ್ತದೆ.

[81]ಪೌಲನು ಚರ್ಚೆಯನ್ನು ಮುಂದುವರೆಸಿದ ಹಾಗೆ, ಬಹುಶಃ ವಿಸ್ತಾರವಾದ ಅನ್ವಯಿಕೆಯನ್ನು ಮಾಡಬಹುದೆಂಬುದನ್ನು ಸೂಚಿಸುವದಕ್ಕಾಗಿ, ಆತನು "ನೆರೆಯವನು" ಎಂಬ ಪದವನ್ನು ಬಳಸುತ್ತಾನೆ (15:2). [82]McGuiggan, 403. [83]ಪಾಠದ ಈ ವಿಭಾಗದಲ್ಲಿ ಬಳಸಲ್ಪಟ್ಟಿರುವ ಅಂಶಗಳು ಆಯ್ದುಕೊಳ್ಳಲ್ಪಟ್ಟ ಮೂಲವು: Deason, 312; and Charles R. Swindoll, *Relating to Others in Love: A Study of Romans 12—16* (Fullerton, Calif.: Insight for Living, 1985), 40. [84]Coy Roper, 37. [85]A. G. Hobbs, Jr., in his tract "Is Conscience a Safe Guide?" (Fort Worth, Tex.: By the Author, n.d.), 1—5 ರಿಂದ ಈ ದೃಷ್ಟಾಂತಗಳು ಸೂಚಿಸಲ್ಪಟ್ಟಿವೆ. [86]"ದೃಢವಿರುವ" ಎಂದರೆ ಎಲ್ಲಾ ವಿಷಯಗಳಲ್ಲಿಯೂ ಜ್ಞಾನವುಳ್ಳವರಾಗಿರುವದು ಎಂದರ್ಥವಲ್ಲ, ಆದರೆ ಅದು ಚರ್ಚೆಯಲ್ಲಿರುವ ವಿಚಾರದಲ್ಲಷ್ಟೇ ಎಂದರ್ಥವಾಗಿದೆ. ಒಂದು ವಿಚಾರದಲ್ಲಿ "ದೃಢವಿರುವ (ಜ್ಞಾನವಿರುವ) ಮನಸ್ಸಾಕ್ಷಿಯ" ಹೊಂದಿದವರಾಗಿಯೂ ಮತ್ತು ಇನ್ನೊಂದು ವಿಚಾರದಲ್ಲಿ "ದೃಢವಿಲ್ಲದ (ಜ್ಞಾನವಿಲ್ಲದ) ಮನಸ್ಸಾಕ್ಷಿ" ಹೊಂದಿರುವದೂ ಸಾಧ್ಯವಿರುತ್ತದೆ. ಬಹುಶಃ ಈ ಕಾರಣದಿಂದಲೇ ರೋಮಾ 14; 15ರಲ್ಲಿ

ಎರಡು ಚರ್ಚೆಯಾಂಶಗಳನ್ನು ದೃಷ್ಟಾಂತಗಳಾಗಿ ಬಳಸಲಾಗಿರುತ್ತದೆ: ವಿಗ್ರಹಗಳಿಗೆ ನೈವೇದ್ಯ ಮಾಡಿದ ಮಾಂಸ ತಿನ್ನುವ ವಿಚಾರದಲ್ಲಿ ಯೆಹೂದ್ಯ ಕ್ರೈಸ್ತರು ದೃಢವಿರುವ ಮನಸ್ಸಾಕ್ಷಿಯನ್ನು ಹೊಂದಿದ್ದರು, ಆದರೆ ಯೆಹೂದಿ ವಿಶೇಷ ಹಬ್ಬ ದಿನಗಳ ಆಚರಣೆಯ ವಿಚಾರದಲ್ಲಿ ದೃಢವಿಲ್ಲದ ಮನಸ್ಸಾಕ್ಷಿಯನ್ನು ಹೊಂದಿದ್ದರು. ಇನ್ನೊಂದೆಡೆಯಲ್ಲಿ, ಅನ್ಯಜನಾಂಗದ ಕ್ರೈಸ್ತರು ವಿಗ್ರಹಕ್ಕೆ ನೈವೇದ್ಯ ಮಾಡಿದ ಮಾಂಸ ತಿನ್ನುವ ವಿಚಾರದಲ್ಲಿ ದೃಢವಿಲ್ಲದ ಮನಸ್ಸಾಕ್ಷಿಯನ್ನು ಹೊಂದಿದ್ದರು, ಆದರೆ ಯೆಹೂದಿ ವಿಶೇಷ ಹಬ್ಬ ದಿನಗಳ ಆಚರಣೆಯ ವಿಷಯದಲ್ಲಿ ದೃಢವಾದ ಮನಸ್ಸಾಕ್ಷಿಯುಳ್ಳವರಾಗಿದ್ದರು. [87]ವಾಕ್ಯವನ್ನು ಜಾಗ್ರತೆಯಿಂದ ಓದಿರಿ: ಇಂಥಿಂಥ ಕೃತ್ಯವು ತಪ್ಪು ಎಂಬು ನಾನು ನಂಬುವದಾದರೆ ಅದು ಅವಶ್ಯಕವಾಗಿ ಇತರರಿಗೂ ತಪ್ಪಾಗಿರಬೇಕೆಂದೆನಿಲ್ಲ, ಆದರೆ ಅದು ಸ್ವಯಂಪ್ರೇರಿತವಾಗಿಯೇ ನನಗೆ ತಪ್ಪು ಎಂದಾಗಿರುತ್ತದೆ. [88]Roland H. Bainton, *Here I Stand: A Life of Martin Luther* (Nashville: Abingdon Press, 1950), 144. [89]Evertt Huffard, “Life Maturity and the Family,” class taught at Eastside church of Christ, Midwest City, Oklahoma, 25 April 2004. [90]Henry Clay, speech in the Senate (1850); quoted in John Bartlett, *Bartlett’s Familiar Quotations*, 16th ed., ed. Justin Kaplan (Boston: Little, Brown, and Co., 1992), 389.

[91]ಆಹಾರ ಕ್ರಮದ ಪ್ರಾಮುಖ್ಯತೆಯಾಗಿ ಕೇವಲ “ಕಾಯಿಪಲ್ಯಗಳನ್ನು” ಮಾತ್ರವೇ ಸೇವಿಸಬೇಕೆಂಬದರ ಬಗ್ಗೆ ನಾವು ಮಾತಾಡುತ್ತಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಿರಿ. [92]ಅಭಿಪ್ರಾಯ ಸಂಬಂಧಿತ ವಿಚಾರಗಳು ಇಲ್ಲಿ ಪರಿಗಣನೆಯಲ್ಲಿರುತ್ತವೆಂಬುದನ್ನು ಮರೆಯಬೇಡಿರಿ. ಖಂಡಿತವಾಗಿಯೂ, ನಂಬಿಕೆಯ ವಿಚಾರಗಳಲ್ಲಿ ಸರಿ ಎಂದಾಗಿರುವದು ಅತ್ಯಂಥ ಪ್ರಾಮುಖ್ಯವಾದದ್ದೇ. [93]Batsell Barrett Baxter ಇದನ್ನು Abilene Christian College around 1955 ರಲ್ಲಿನ ಉಪನ್ಯಾಸದಲ್ಲಿ ಸಂಬಂಧಪಡಿಸುವದನ್ನು ನಾನು ಆಲಿಸಿದ್ದೇನೆ. [94]ವಿಶ್ವದ ಕೆಲವು ಭಾಗಗಳಲ್ಲಿ, ಪೋಲಿಸ್ ಮತ್ತು ಸೇನೆಗಳಲ್ಲಿ ಎಷ್ಟೊಂದು ಭ್ರಷ್ಟಾಚಾರವು ತಾಂಡವಾಡುತ್ತಿರುತ್ತದೆಂದರೆ ಬಹುತೇಕ ಕ್ರೈಸ್ತರು ತಮ್ಮ ನಂಬಿಕೆಯನ್ನು ರಾಜಿ ಮಾಡಿಕೊಳ್ಳದೆಯೇ ಅವೆರಡರಲ್ಲಿ ಭಾಗಿಗಳಾಗಲು ಸಾಧ್ಯವಿಲ್ಲದಾಗಿರುತ್ತದೆ. [95]Jim Townsend, *Romans: Let Justice Roll Down* (Elgin, Ill.: David C. Cook Publishing Co., 1988), 93ರಿಂದ ಆಯ್ದುಕೊಳ್ಳಲ್ಪಟ್ಟಿದೆ.